

## ರಾಜ್ಯದ ರಾಜಧಾನಿಯಲ್ಲಿ ಹಲವು ಕನ್ನಡಂಗಳ್

ಲಕ್ಷ್ಮಣ ಕೊಡಸೆ



## ಎಲ್ಲರ ಭಾಷೆ ಕನ್ನಡವಾದರೆ 'ನೈಜ ಕರ್ನಾಟಕ ಸಾಧ್ಯ!'

ಜಾಣಗೆರೆ ವೆಂಕಟರಾಮಯ್ಯ

ಕ.ರ.ವೇ ಸಂಘಟನೆಯ ಸಂಸ್ಥಾಪಕರು

## ಫೆಬ್ರವರಿ ಕ್ರಾಂತಿಗೆ ಡಿಕೆಶಿ ಬಣ ಸಜು

ಆರ್.ಟಿ.ವಿಠ್ಠಲಮೂರ್ತಿ



ಸತ್ಯ–ನ್ಯಾಯ–ಧರ್ಮಕ್ಕಾಗಿ ಸ್ವಾಭಿಮಾನಿ ಸಮೂಹ

# ಕರ್ನಾಟಕ ರಕ್ಷಣಾ ವೇದಿಕೆ

ಕನ್ನಡಿಗರ ಹೋರಾಟಕ್ಕೊಂದು ಕೆಚ್ಚೆದೆಯ ಮಾಸಪತ್ರಿಕೆ

KARKAN/2008/26245 ₹15

ಕರವೇ ವಾಹಿನಿ

ಕನ್ನಡ ಕನ್ನಡಿಗ ಕರ್ನಾಟಕ ಸೇವೆಗಾಗಿ ನಾವು

ಸಂಪುಟ: 18 | ಸಂಚಿಕೆ: 10 | KARNATAKA RAKSHANAA VEDIKE KANNADA MONTHLY | ಫೆಬ್ರವರಿ 2026 | ಪುಟ: 32



ಇನ್ಫೋಸಿಸ್

# ನಾರಾಯಣಮೂರ್ತಿ ಕರ್ಮಕಾಂಡ

## ಭೂ ಕಬಳಿಕೆಯಲ್ಲಿ ಪುಢಾರಿಗಳನ್ನು ಮೀರಿಸುತ್ತಿರುವ ಸಾಫ್ಟ್‌ವೇರ್ ಕಿಂಗ್..!?

ಎಲ್ಲಾದರೂ ಇರು, ಎಂತಾದರೂ ಇರು
ಎಂದೆಂದಿಗೂ ನೀ ಕನ್ನಡವಾಗಿರು



ಕರ್ನಾಟಕ ರಕ್ಷಣಾ ವೇದಿಕೆ
ಕನ್ನಡ, ಕನ್ನಡಿಗ
ಕರ್ನಾಟಕ ಸೇವೆಗಾಗಿ

ಕರವೇ ವಾಹಿನಿ
ಫೆಬ್ರವರಿ - 2026
ಸಂಪುಟ: 18, ಸಂಚಿಕೆ:10
ರೂ. 15/-

ಸಂಪಾದಕೀಯ ಮಂಡಳಿ

ಗೌರವ ಸಂಪಾದಕರು
ಜಾಣಗೆರೆ ವೆಂಕಟರಾಮಯ್ಯ
ಎ. ಬಾಲಚಂದ್ರ
ಎಚ್.ಶಿವರಾಮೇಗೌಡ

ಗೌರವ ಸಲಹೆಗಾರರು
ಲಕ್ಷ್ಮಣ ಕೊಡಸೆ
ಆರ್.ಟಿ.ವಿಠ್ಠಲಮೂರ್ತಿ

ಸಂಪಾದಕ
ಕ.ನ. ಚಂದ್ರಶೇಖರ

ವ್ಯವಸ್ಥಾಪಕ ಸಂಪಾದಕಿ
ಪ್ರತಿಮಾ

ಕಾರ್ಯನಿರ್ವಾಹಕ ಸಂಪಾದಕರು
ಎಸ್.ಪ್ರಕಾಶ್ ಬಾಬು

ಉಪ ಸಂಪಾದಕರು
ಶ್ರೀಪತಿ ಗೋಗಡಿಗೆ
ಆರುಡೋ ಗಣೇಶ

ಸಂಪಾದಕೀಯ ಮಂಡಳಿ
ಕೆ.ಎ.ರಾಮಕೃಷ್ಣ ಮೂರ್ತಿ
ಖಂಡಪರಶು

ಕಾನೂನು ಸಲಹೆ
ಎಂ. ರಕ್ಷಿತ್ ಗೌಡ

ಪ್ರಸರಣ ವ್ಯವಸ್ಥಾಪಕ
ವಿ.ಆರ್. ರಾಧಾಕೃಷ್ಣ

ಶ್ರೀನಂದಿ
#1673, 2ನೇ ಅಡ್ಡರಸ್ತೆ,
ಪ್ರಕಾಶನಗರ, ಬೆಂಗಳೂರು-560021
ದೂ: 9482590674
krvnews2008@gmail.com

## ಒಳ ಪುಟಗಳಲ್ಲಿ...

ಎಲ್ಲರ ಭಾಷೆ ಕನ್ನಡವಾದರೆ 'ನೈಜ ಕರ್ನಾಟಕ ಸಾಧ್ಯ!' 4

ಲೋಕಾಯುಕ್ತ ಮಾದರಿಯ ನೈತಿಕಾಯುಕ್ತರು ಬೇಕು 5

ಅಕ್ರಮ ವಲಸಿಗರಿಗೆ ಅನುಕಂಪ ಬೇಡ 6

ಫೆಬ್ರವರಿ ಕ್ರಾಂತಿಗೆ ಡಿಕೆಶಿ ಬಣ ಸಜ್ಜು? 7

ರಾಜ್ಯದ ರಾಜಧಾನಿಯಲ್ಲಿ ಹಲವು ಕನ್ನಡಂಗಳ್ 8

ಪಾ.ವೆಂ ಆಚಾರ್ಯ ಲೇಖನ ಕೃತಿಗಳ ಸಂಗ್ರಹದಲ್ಲಿ ಛಾಯಾ 9

ಕನ್ನಡಿಗರು ಕಳೆದುಕೊಂಡ ಕನ್ನಡ! 10

ಗುಂಡಿನ ಮತ್ತು ಮದ್ಯದ ಜಗತ್ತು ಗಮ್ಮತ್ತು 12

ಇನ್ಫೋಸಿಸ್ ನಾರಾಯಣಮೂರ್ತಿ ಕರ್ಮಕಾಂಡ 16

ಬೆಂಗಳೂರು ಪ್ರೆಸ್‌ಕ್ಲಬ್‌ವಾರ್ಷಿಕ ಪ್ರಶಸ್ತಿ ಪ್ರದಾನ 20

## ವಿದ್ಯಮಾನ




ಜಾಣಗೆರೆ ವೆಂಕಟರಾಮಯ್ಯ

"ಮೂಲ ಸಂಸ್ಥಾಪಕರು"
ಕರ್ನಾಟಕ ರಕ್ಷಣಾ ವೇದಿಕೆ

ಲಂಕೇಶ್, ನಮ್ಮನಾಡು, ರೂಪಲೇಖಾ, ರೂಪಶಿಲ್ಪಿ ಪತ್ರಿಕೆಗಳಲ್ಲಿ ಸಹಾಯಕ ಸಂಪಾದಕರಾಗಿ ಮತ್ತು ಅಭಿಮಾನಿ, ಈ ಸಂಜೆ, ಅರಗಿಣಿ, ಮಾರ್ದನಿ, ಕರುನಾಡ ಸಂಜೆ, ಜಾಣಗೆರೆ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದವರು

# ಎಲ್ಲರ ಭಾಷೆ ಕನ್ನಡವಾದರೆ 'ನೈಜ ಕರ್ನಾಟಕ ಸಾಧ್ಯ!'

'ಕನ್ನಡ ಭಾಷಾವಾರು ಪ್ರಾಂತ್ಯ ಇದಾಗಬೇಕೆಂದು' ಹೋರಾಟವನ್ನು ನಡೆಸಿದ್ದರಿಂದ ಕನ್ನಡಿಗರಿಗೊಂದು ಕನ್ನಡ ರಾಜ್ಯ ಲಭಿಸಿ 70 ವರ್ಷಗಳು ತುಂಬುತ್ತಿವೆ. ಆದರೂ ಇದು ಅಪ್ಪಟ ಕನ್ನಡ ರಾಜ್ಯವಾಗುವಲ್ಲಿ ವಿಫಲವಾಗಿದೆ. ಇದಕ್ಕೆ ಬರೀ ಸರ್ಕಾರವನ್ನು ದೂಷಿಸುತ್ತಾ ಕೂರುವಂತಿಲ್ಲ. ಕನ್ನಡ ಜನತೆಯ ಪಾಲು ಇದರಲ್ಲಿ ಹೆಚ್ಚಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದಿದ್ದರೆ, ಮನವರಿಕೆ ಮಾಡಿಕೊಂಡು ಆಗಿರುವ ತಪ್ಪನ್ನು ತಿದ್ದಿಕೊಳ್ಳದಿದ್ದರೆ 'ಕನ್ನಡ ರಾಜ್ಯ' ಅನ್ನಿಸಿಕೊಳ್ಳುವುದು ದೂರದ ಮಾತಾಗುತ್ತದೆ.



1960ರ ದಶಕದ ಹಿಂದೆ ರಾಜಧಾನಿ ಬೆಂಗಳೂರು ನಗರವೆ ಕನ್ನಡ ಭಾಷೆಯಿಂದ ದೂರವಿತ್ತು ಎಂಬ ಅಂದಿನ ವಾಸ್ತವ ಸತ್ಯವನ್ನು ನೆನಪಿಸಿಕೊಳ್ಳಬೇಕಾಗಿದೆ. ಭಾಷಾವಾರು ಆಧಾರದ ಮೇಲೆ ಕನ್ನಡ ರಾಜ್ಯ ಉದಯವಾಗಿ 10 ವರ್ಷಗಳಾಗಿದ್ದರೂ, ಮಹಾನಗರದಲ್ಲಿ ಕನ್ನಡವನ್ನು ದೀಪ ಹಿಡಿದುಕೊಂಡು ಹುಡುಕಬೇಕಾಗಿತ್ತು. ಹತ್ತಿಪ್ಪತ್ತು ವರ್ಷಗಳಿಂದ ಇಲ್ಲಿಯೆ ಬದುಕು ಕಂಡುಕೊಂಡಿದ್ದ, ಆಸ್ತಿ-ಪಾಸ್ತಿ ಹೊಂದಿದ್ದ ಪರಭಾಷಿಕರು 'ನನಗೆ ಕನ್ನಡ ಬರಲ್ಲ' ಎಂದು ರಾಜಾರೋಷಾಗಿ ಹೇಳುವ ಮನಸ್ಥಿತಿಯವರಾಗಿದ್ದರು. ಇನ್ನೊಂದು ಅರ್ಥದಲ್ಲಿ 'ನಾನೇಕೆ ಕನ್ನಡ ಕಲಿಯಬೇಕು?' ಎಂಬ ದಾರ್ಷ್ಟ್ಯತನ ಅವರದ್ದಾಗಿತ್ತು. ಅಷ್ಟೇ ಅಲ್ಲ, ಕನ್ನಡದಲ್ಲಿ ಮಾತಾಡಿದವರನ್ನು ಗೇಲಿ ಮಾಡುತ್ತಿದ್ದರು. ಒಮ್ಮೊಮ್ಮೆ ಹಲ್ಲೆಗೈಯ್ಯುತ್ತಿದ್ದರು.

ಕನ್ನಡಿಗರು ಕೂಡಾ ಕನ್ನಡವನ್ನು ಅಪ್ಪಿಕೊಂಡಿರಲಿಲ್ಲ. ಬರೀ ಇಂಗ್ಲಿಷ್ ವ್ಯಾಮೋಹಿಗಳಾಗಿರಲಿಲ್ಲ. ಪರಭಾಷಾ ವ್ಯಾಮೋಹಿಗಳೂ ಆಗಿದ್ದರು. ತಮಿಳರು, ತೆಲುಗರು ಅವರವರ ಭಾಷಾ ಸಿನಿಮಾಗಳನ್ನು ಮಾತ್ರ ನೋಡುತ್ತಿದ್ದರೆ, ಕನ್ನಡಿಗರು ಹಿಂದಿ-ಇಂಗ್ಲಿಷ್ ಸಿನಿಮಾಗಳನ್ನೇ ಅತಿ ಹೆಚ್ಚಾಗಿ ನೋಡುತ್ತಿದ್ದರು. ಅದರ ಜೊತೆಗೆ ತಮಿಳು-ತೆಲುಗು ಚಿತ್ರಗಳನ್ನೂ ನೋಡುತ್ತಿದ್ದರು. ಆ ಹೊತ್ತಿನ ತಮಿಳು-ತೆಲುಗು ನಟರಾಗಿದ್ದ ಎಮ್‌ಜಿಆರ್-ಶಿವಾಜಿಗಣೇಶನ್-ಜೆಮಿನಿಗಣೇಶನ್-ಜೈಶಂಕರ್ ಹಾಗೂ ಎನ್‌ಟಿಆರ್-ನಾಗೇಶ್ವರರಾವ್-ಕಾಂತಾರಾವ್‌ರಂಥವರು ಕನ್ನಡಿಗರ ಮನೆ-ಮನಗಳಲ್ಲಿ ಜನಪ್ರಿಯರಾಗಿದ್ದರೆಂದರೆ ಅಚ್ಚರಿಯೆನಿಸಬಹುದು.

24ನೇ ಪುಟಕ್ಕೆ

## ಕನ್ನಡ ಕಹಳೆ



ಕ.ನ. ಚಂದ್ರಶೇಖರ

# ಲೋಕಾಯುಕ್ತ ಮಾದರಿಯ ನೈತಿಕಾಯುಕ್ತರು ಬೇಕು

ಮಾಜಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಆಗಾಗ ಹೇಳುತ್ತಿದ್ದ ಮಾತು 'ಖಾದಿ–ಖಾವಿ–ಖಾಕಿ ಮೂರೂ ಮಾನ ಬಿಟ್ಟು ಹಣ ಮಾಡಲು ಹೊರಟರೆ, ಆ ರಾಜ್ಯ ಕುಲಗೆಟ್ಟು ಹೋಗುತ್ತೆ' ಅಂತ. ಅದೀಗ ನಿಜವಾಗುತ್ತಿದೆ. ಈ ಮೂರ್ 'ಖಾ' ಗಳಿಂದ ಇನ್ನೂ ಈ ರಾಜ್ಯದ ಜನ ಎಂತೆಂಥ ಅಸಹ್ಯಗಳನ್ನು ನೋಡಬೇಕೋ ಅನ್ನೋ ಆತಂಕವಾಗುತ್ತಿದೆ. ಈ ಮೂರ್ 'ಖಾ'ಗಳಿಗೆ ಕಡಿವಾಣ ಹಾಕದಿದ್ದರೆ ಅನಾಹುತ ತಪ್ಪಿದ್ದಲ್ಲ. ರಾಜ್ಯದ ಹಿರಿಯ ಐಪಿಎಸ್ ಅಧಿಕಾರಿ ಡಿಜಿಪಿ ರಾಮಚಂದ್ರ ರಾವ್ ಮೇಲೆ ಈ ಹಿಂದೆ ಹಲವು ಆರೋಪಗಳಿದ್ದವು, ಆತನ ಮಗಳು ನಟಿ ರನ್ಯಾ ರಾವ್ ಚಿನ್ನ ಕಳ್ಳ ಸಾಗಾಣೆಯಲ್ಲಿ ಸಿಕ್ಕಿ ಬಿದ್ದು ಈಗಲೂ ಜೈಲಿನಲ್ಲಿದ್ದಾಳೆ. ಆ ಸಂದರ್ಭದಲ್ಲೇ ಡಿಜಿಪಿ ರಾಮಚಂದ್ರ ರಾವ್ ವಿರುದ್ದ ಸರಿಯಾದ ತನಿಖೆ ನಡೆಸಿದ್ದರೆ, ಆತ ಕರ್ತವ್ಯದಲ್ಲಿರುವಾಗಲೇ ಸರ್ಕಾರಿ ಕಚೇರಿಯಲ್ಲಿ ಮಹಿಳೆಯರ ಜೊತೆಗೆ ಸರಸವಾಡಿದ ವಿವರಗಳೆಲ್ಲ ಬೆಳಕಿಗೆ ಬರುತ್ತಿದ್ದವು. ಆದರೆ, ರಾಜ್ಯ ಸರ್ಕಾರ ಹಿರಿಯ ಐಪಿಎಸ್ ಅಧಿಕಾರಿ ಡಿಜಿಪಿ ರಾಮಚಂದ್ರ ರಾವ್‌ರನ್ನು ರಜೆ ಮೇಲೆ ಕಳುಹಿಸಿ, ನಂತರ ಮತ್ತೆ ಕೆಲಸಕ್ಕೆ ನಿಯೋಜಿಸಿತ್ತು. ಸರ್ಕಾರದ ತಪ್ಪಿನಿಂದಾಗಿ ಇದೀಗ ಡಿಜಿಪಿ ರಾಮಚಂದ್ರ ರಾವ್ ಅವರ ಅಶ್ಲೀಲ ವಿಡಿಯೋ ಹೊರ ಬಂದು ಪೊಲೀಸ್ ಇಲಾಖೆ ಮಾನ ರಾಜ್ಯದಲ್ಲಿ ಹರಾಜಾಗುತ್ತಿದೆ.





ಡಿಜಿಪಿ ರಾಮಚಂದ್ರ ರಾವ್ ರಾಸಲೀಲೆಯ ವಿಡಿಯೋ ವೈರಲ್ ಆಗುತ್ತಿದ್ದಂತೆ ಮುಖ್ಯಮಂತ್ರಿ ಗರಂ ಆದರಂತೆ, ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಇಲಾಖೆಯಿಂದ ವರದಿ ಕೇಳಿದರಂತೆ, ಗೃಹ ಸಚಿವ ಪರಮೇಶ್ವರ್ ಅವರನ್ನು ಭೇಟಿಯಾಗಲು ಹೋದ ಡಿಜಿಪಿ ರಾಮಚಂದ್ರರಾವ್‌ರನ್ನು ಒಳಗೆ ಸೇರಿಸಲಿಲ್ಲವಂತೆ ಎಂಬಿತ್ಯಾದಿ ಗಿಲೀಟಿನ ಸುದ್ದಿ ತುಣುಕುಗಳು ಸುದ್ದಿ ಮನೆಗಳಲ್ಲಿ ಸುಳಿದಾಡಿದವು. ಇಂಥ ಸರ್ಕಾರದ ಸಾಚಾತನದ ಸುದ್ದಿಗಳನ್ನು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರು ಒಸೆದು ಕೊಟ್ಟಿರುತ್ತಾರೆ, ಅದನ್ನು ಪ್ರಕಟಿಸುವ ಸುದ್ದಿ ಮಾಧ್ಯಮ ಮಂದಿ ಸಿಹಿ ಸಿಕ್ಕಷ್ಟು ಸಂತೋಷದಲ್ಲಿ ಸರ್ಕಾರದ ತಪ್ಪು ಬಿಟ್ಟು ರಾಮಚಂದ್ರರಾವ್ ರಾಸಲೀಲೆ ವಿಷಯ ಇಟ್ಟುಕೊಂಡು ಹಿಗ್ಗಾ–ಮುಗ್ಗಾ ಜರೆಯುತ್ತಿದ್ದಾರೆ. ಅವರನ್ನು ಕೆಲಸದಿಂದ ಅಮಾನತು ಮಾಡಿ ಸರ್ಕಾರ ಆದೇಶ ಹೊರಡಿಸಿದೆ ಅನ್ನೋದನ್ನು ದೊಡ್ಡ ಸುದ್ದಿಯಾಗಿ ಪ್ರಕಟಿಸುತ್ತಿವೆ.

**ಡಿಜಿಪಿ ರಾಮಚಂದ್ರ ರಾವ್ ರನ್ನು ಮತ್ತೆ ಕರ್ತವ್ಯಕ್ಕೆ ಆದೇಶ ನೀಡಲಾಗಿತ್ತು. ಆ ಕಾಲ ಘಟ್ಟದಲ್ಲೇ ಸರಿಯಾದ ತನಿಖೆ ನಡೆದಿದ್ದರೆ, ಡಿಜಿಪಿ ರಾಮಚಂದ್ರರಾವ್ ಹಲವು ಕಾಮ ಪುರಾಣಗಳೂ ಬೆಳಕಿಗೆ ಬರುತ್ತಿದ್ದವು. ಈಗ ಬಯಲಿಗೆ ಬಂದಿರುವ ಬೆಳಗಾವಿ ಪೋಲೀಸ್ ಕಚೇರಿಯಲ್ಲಿನ ಮಹಿಳೆಯರ ಜತೆಗಿನ ರಾಸಲೀಲೆ ವಿವರಗಳು ಆಗಲೇ ಹೊರಬರುತ್ತಿದ್ದವು.**

22ನೇ ಪುಟಕ್ಕೆ

## ಇದ್ದದ್ದು ಇದ್ದಂಗೆ



ಎಚ್.ಶಿವರಾಮೇಗೌಡ
ರಾಜ್ಯಾಧ್ಯಕ್ಷರು, ಕ.ರ.ವೇ.

# ಅಕ್ರಮ ವಲಸಿಗರಿಗೆ ಅನುಕಂಪ ಬೇಡ

ಕರ್ನಾಟಕದ ರಾಜಧಾನಿಯಾಗಿ ಬೆಂಗಳೂರು ದಿನೇ ದಿನೇ ಅತಿಯಾದ ಜನಸಾಂದ್ರತೆ, ಮೂಲಸೌಕರ್ಯಗಳ ಕೊರತೆ, ಔದ್ಯೋಗಿಕ ಸಮಸ್ಯೆ ಹಾಗೂ ವಸತಿ ಸಂಕಷ್ಟಗಳನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಎಲ್ಲಿಂದಲೋ ಬಂದು ಕನ್ನಡ ಮಣ್ಣಿನ ನೆಲದಲ್ಲಿ ಅಕ್ರಮ ಶೆಡ್ಡುಗಳನ್ನು ನಿರ್ಮಿಸಿಕೊಂಡು□ ಭಾಷೆ ಬಾರದ□ ತೆರಿಗೆ ಕಟ್ಟದ□ ಗೊತ್ತು ಗುರಿ ಇರದ ಪರದೇಶಿಗಳಿಗೆಲ್ಲಾ ಅನುಕಂಪದಿಂದ ಉಚಿತ ಮನೆ ಕೊಡುವುದು ಸರಿಯಲ್ಲ. ಬೆಂಗಳೂರಿನ ಯಲಹಂಕದ ಕೋಗಿಲು ಬಳಿ ಕ್ರಮವಾಗಿ ನೆಲೆಯೂರಿದ್ದ ಬಾಂಗ್ಲಾದೇಶೀಯರನ್ನೆಲ್ಲ ಒಕ್ಕಲೆಬ್ಬಿಸಿ ಸರ್ಕಾರಿ ಸ್ವತ್ತನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವುದನ್ನ ಬಿಟ್ಟು□ ಕರ್ನಾಟಕ ಸರ್ಕಾರವೇ ಅವರಿಗೆ ಉಚಿತ ಮನೆಗಳನ್ನು ನೀಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಈ ಕ್ರಮವು ನ್ಯಾಯಸಮ್ಮತವೇ? ರಾಜ್ಯದ ಮೂಲ ನಿವಾಸಿಗಳ ಹಿತಾಸಕ್ತಿಗೆ ಇದು ಧಕ್ಕೆಯಾಗುವುದಿಲ್ಲವೇ? ಎಂಬ ವಿಚಾರದಲ್ಲಿ ನಾಡಪರ ಚಿಂತಕರ ಆಳವಾದ ಚಿಂತನೆ ಮತ್ತು ಅಭಿಪ್ರಾಯದ ಅಗತ್ಯವಿದೆ.





ನಾನಿಂದು ಇಲ್ಲಿ ವಿಚಾರ ಮಾಡುತ್ತಿರುವ ವಿಷಯ ಕೇವಲ ಕೇವಲ ಕೋಗಿಲು ಕ್ರಾಸ್‌ನ ಒಂದು ಜಾಗದ ವಿಚಾರ ಮಾತ್ರ ಅಲ್ಲ. ಇದು ಇಡೀ ಕರ್ನಾಟಕದ ನೆಲ, ಕರ್ನಾಟಕದ ಜನ ಮತ್ತು ಕರ್ನಾಟಕದ ನ್ಯಾಯದ ಪ್ರಶ್ನೆ. ಬೆಂಗಳೂರು ಇಂದು ಯಾವ ಸ್ಥಿತಿಯಲ್ಲಿ ಇದೆ ಎಂಬುದು ನಮಗೆಲ್ಲ ಗೊತ್ತು. ನೀರಿನ ವ್ಯವಸ್ಥೆ ಸರಿ ಇಲ್ಲ, ಸುಸಜ್ಜಿತ ಮನೆಗಳಿಲ್ಲ□ ಉದ್ಯೋಗ ಇಲ್ಲ. ಕನ್ನಡ ನಾಡಿನಲ್ಲಿ ಕನ್ನಡಿಗನೇ ನಿರಾಶ್ರಿತನಾಗುತ್ತಿದ್ದಾನೆ. ಇಂತಹ ಸಂಕಷ್ಟದ ಸಮಯದಲ್ಲಿ ಮತ್ತೊಮ್ಮೆ ರಾಜ್ಯ ಸರ್ಕಾರ ಪರಭಾಷಿಕ ವಲಸಿಗರಿಗೆ ಉಚಿತ ಮನೆಗಳನ್ನು ನೀಡುತ್ತಿದೆ ಎಂಬ ಸುದ್ಧಿ ಪ್ರತಿಯೊಬ್ಬ ಸ್ವಾಭಿಮಾನಿ ಕನ್ನಡಿಗನ ಮನಸ್ಸಿಗೆ ಆಘಾತ ತಂದಿದೆ.

ಕರ್ನಾಟಕ ಸರ್ಕಾರದ ಈ ನೆಲದ ವಿರೋಧಿ ನಿರ್ಧಾರಗಳು ಸರಿಯಲ್ಲ. ಇದು ಯಾರ ಸರ್ಕಾರ? ಕರ್ನಾಟಕದ ಜನರದ್ದಾ? ಅಥವಾ ಅಕ್ರಮವಾಗಿ ಬಂದವರದ್ದಾ? ಸರ್ಕಾರ ಇರುವುದು ನಮಗಾಗಿಯೋ? ಅಥವಾ ಬಾಂಗ್ಲಾ ಪರದೇಶಿಗಳಿಗಾಗಿಯೋ ಎಂಬ ಭಾವನೆ ಬಾರದಿರದು. ಸರ್ಕಾರಿ ಜಾಗ ಎಂದರೆ ಅದು ಯಾರ ವೈಯಕ್ತಿಕ ಆಸ್ತಿಯೂ ಅಲ್ಲ. ಅದು ನಮ್ಮ ತೆರಿಗೆ ಹಣದಿಂದ ಉಳಿಸಿಕೊಂಡಿರುವ ಸಾರ್ವಜನಿಕ ಸಂಪತ್ತು. ಆ ಜಾಗವನ್ನು ಮೊದಲು ಬಳಸಬೇಕಾಗಿರುವುದು; ಇಲ್ಲಿ ಹುಟ್ಟಿ, ಇಲ್ಲಿ ದುಡಿದು, ಇಲ್ಲಿಯ ಸರ್ಕಾರಕ್ಕೆ ತೆರಿಗೆ ಕೊಡುವ ಕನ್ನಡಿಗರಿಗಾಗಿ ಅಲ್ಲವೇ? ಸರ್ಕಾರಿ ಜಾಗವು ಸಾರ್ವಜನಿಕ ಸಂಪತ್ತು.

29ನೇ ಪುಟಕ್ಕೆ

**2026 ರಲ್ಲಿ ಕನ್ನಡಿಗರ ಒಗ್ಗಟ್ಟಿಗೆ ಅಡ್ಡಿಯಾಗುವವರನ್ನು ದೂರವಿಡೋಣ. ಸ್ವಾರ್ಥಕ್ಕೆ ಸಂಘಟನೆಯನ್ನು ಬಳಸುವವರನ್ನು ಹೊರಹಾಕೋಣ. ಕನ್ನಡ ವಿರೋಧಿ ಶಕ್ತಿಗಳಿಗೆ ರಸ್ತೆಯಲ್ಲೇ□ ನಡು ಬೀದಿಯಲ್ಲೇ ಉತ್ತರ ಕೊಡೋಣ ಕಾನೂನಿನ ಮಿತಿಯಲ್ಲಿ ಹೋರಾಟದ ತೀವ್ರತೆಯಲ್ಲಿ ಯಾವುದೇ ಸಂಧಾನ ಇಲ್ಲ.**

ರಾಜಕೀಯ ವಿದ್ಯಮಾನ



ಆರ್.ಟಿ.ವಿಠ್ಠಲಮೂರ್ತಿ

# ಫೆಬ್ರವರಿ ಕ್ರಾಂತಿಗೆ ಡಿಕೆಶಿ ಬಣ ಸಜ್ಜು?

ಕರ್ನಾಟಕದ ರಾಜಕಾರಣಕ್ಕೆ ಸಂಬಂಧಿಸಿದಂತೆ ದಿಲ್ಲಿಯ ಕಾಂಗ್ರೆಸ್ ವರಿಷ್ಠರು ಧರ್ಮಸಂಕಟದಲ್ಲಿದ್ದಾರೆ.

ಅರ್ಥಾತ್, ಅವರಿಗೆ ಸತ್ಯ ಗೊತ್ತಿದೆ. ಆದರೆ ಸತ್ಯವನ್ನು ಅರಗಿಸಿಕೊಳ್ಳುವುದಕ್ಕಿಂತ ಇನ್ನೊಬ್ಬರಿಗೆ ಅರಗಿಸಿಕೊಳ್ಳುವಂತೆ ಹೇಳಲು ಪರದಾಡುತ್ತಿದ್ದಾರೆ. ಅಂದ ಹಾಗೆ, ಅವರಿಗೆ ಗೊತ್ತಿರುವ ಸತ್ಯವೆಂದರೆ; ಕರ್ನಾಟಕದಲ್ಲಿ ಸರ್ಕಾರದ ನೇತೃತ್ವ ವಹಿಸಿರುವ ಸಿದ್ಧರಾಮಯ್ಯ ಅವರನ್ನು ಸಿಎಂ ಹುದ್ದೆಯಿಂದ ಕೆಳಗಿಳಿಸುವುದು ಕಷ್ಟ ಎಂಬುದು. ಆದರೆ ಈ ಸತ್ಯವನ್ನು ಅವರು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಹೇಳಲು ಕಷ್ಟಪಡುತ್ತಿದ್ದಾರೆ. ನೇರವಾಗಿ ಹೇಳಬೇಕೆಂದರೆ ಸಿದ್ದರಾಮಯ್ಯ ಅವರು ಕರ್ನಾಟಕ ಮಾತ್ರವಲ್ಲ, ಇಡೀ ದೇಶದಲ್ಲಿ ಕಾಂಗ್ರೆಸ್ ಗಿರುವ ಅಹಿಂದ ಫೇಸ್ ಕಟ್ಟು. ಈ ಫೇಸ್ ಕಟ್ಟನ್ನು ಬದಲಿಸಿದರೆ ಪರಿಣಾಮ ಏನಾಗುತ್ತದೆ ಎಂಬುದು ಕಾಂಗ್ರೆಸ್ ವರಿಷ್ಟರಿಗೆ ಗೊತ್ತು. ಎಲ್ಲಕ್ಕಿಂತ ಮುಖ್ಯವಾಗಿ ಸ್ವತ: ರಾಹುಲ್ ಗಾಂಧಿಯವರು ದೇಶದೆಲ್ಲೆಡೆ ತಿರುಗಾಡುತ್ತಾ, ಅಹಿಂದ ವರ್ಗಗಳ ವಿಷಯದಲ್ಲಿ ತಮ್ಮ ಪಕ್ಷಕ್ಕಿರುವ ಬದ್ಧತೆಯ ಬಗ್ಗೆ ಮಾತನಾಡುತ್ತಾರೆ. ಬಲಿಷ್ಟ ವರ್ಗಗಳ ಮುಷ್ಟಿಯಲ್ಲಿರುವ ಹರಿಯಾಣ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ನಾಯಕರೊಬ್ಬರನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ.






ಹೀಗೆ ಅವರು ಮಾಡುತ್ತಿರುವ ಕೆಲಸ ಉದ್ದೇಶಪೂರ್ವಕವಲ್ಲ, ಬದಲಿಗೆ ಅನಿವಾರ್ಯದ್ದು. ಇವತ್ತು ದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ನೆಲೆ ಅಂತ ಕಲ್ಪಿಸಿಕೊಡುವ ಶಕ್ತಿ ಇದ್ದರೆ ಅದು ಅಹಿಂದ ವರ್ಗಗಳಿಗೆ. ಹೀಗಾಗಿ ಅಹಿಂದ ವರ್ಗಗಳ ವಿಷಯ ಬಂದರೆ ರಾಹುಲ್ ಗಾಂಧಿ ತುಂಬ ಎಚ್ಚರಿಕೆಯಿಂದಿರುತ್ತಾರೆ. ಇವತ್ತು ಸಿದ್ಧರಾಮಯ್ಯ ಅವರ ವಿಷಯದಲ್ಲೂ ಅವರು ದುಡುಕದೇ ಇರುವುದಕ್ಕೆ ಇದೇ ಮುಖ್ಯ ಕಾರಣ. ಇವತ್ತು ಕರ್ನಾಟಕದ ಅಹಿಂದ ವರ್ಗಗಳ ಪಾಲಿಗೆ ಸಾಲಿಡ್ಡು ನಾಯಕರಾಗಿರುವ ಸಿದ್ದರಾಮಯ್ಯ ಎಲ್ಲಿಯವರಿಗೆ ಸಿಎಂ ಹುದ್ದೆಯಲ್ಲಿರುತ್ತಾರೋ? ಅಲ್ಲಿಯವರೆಗೆ ಅಹಿಂದ ವರ್ಗಗಳ ಮತ ಬ್ಯಾಂಕು ದೊಡ್ಡ ಮಟ್ಟದಲ್ಲಿ ಕಾಂಗ್ರೆಸ್ ಜತೆಗಿರುತ್ತದೆ. ಆದರೆ ಒಂದು ಸಲ ಸಿದ್ಧರಾಮಯ್ಯ ಅವರನ್ನು ಕೆಳಗಿಳಿಲು ಕಾಂಗ್ರೆಸ್ ಹೈಕಮಾಂಡ್ ಬಯಸಿದರೆ ಅನುಮಾನವೇ ಬೇಡ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮಕಾಡೆ ಮಲಗುತ್ತದೆ.

ಇತ್ತೀಚಿನ ದಿನಗಳಲ್ಲಿ ಪದೇ ಪದೇ ಕರ್ನಾಟಕದ ರಾಜಕಾರಣವನ್ನು ಅಧ್ಯಯನ ಮಾಡುತ್ತಿರುವ ರಾಹುಲ್ ಗಾಂಧಿಯವರಿಗೆ ಇದು ಮನದಟ್ಟಾಗಿದೆ. ಆದರೆ ಅವರಿಗೆ ಮನದಟ್ಟಾದರೂ ರಾಹುಲ್ ಗಾಂಧೀಯವರ ಹಿಂದಿರುವ ಶಕ್ತಿಗಳಿಗೆ ಅರ್ಥವಾಗುತ್ತಿಲ್ಲ. ಅರ್ಥಾತ್ ,ರಾಹುಲ್ ಗಾಂಧಿಯುವರ ಸಹೋದರಿ ಪ್ರಿಯಾಂಕಾ ಗಾಂಧಿ ಇರಬಹುದು, ಪ್ರಿಯಾಂಕಾ ಗಾಂಧಿಯವರ ಪತಿ ರಾಬರ್ಟ್ ವಾಧ್ರಾ ಇರಬಹುದು ಮತ್ತು ಮಗಳು,ಅಳಿಯನ ವಿಷಯ ಬಂದರೆ ವಿವಶರಾಗುವ ಸೋನಿಯಾಗಂಧಿ ಅವರಿರಬಹುದು. ಈ ಮೂವರು ಸಿದ್ದರಾಮಯ್ಯ ಅವರ ವಿರೋಧಿಗಳೇನಲ್ಲ. ಆದರೆ ಅವರು ಡಿ.ಕೆ.ಶಿವಕುಮಾರ್ ಅವರ ಪರವಾಗಿರುವವರು. 28ನೇ ಪುಟಕ್ಕೆ

**ಈ ಬಾರಿಯ ಬಜೆಟ್ ಅನ್ನು ಸಿದ್ಧರಾಮಯ್ಯ ಮಂಡಿಸುವುದು ಡಿ.ಕೆ.ಶಿವಕುಮಾರ್ ಅವರಿಗೆ ಇಷ್ಟವಿಲ್ಲ.ಯಾಕೆಂದರೆ ಮುಖ್ಯಮಂತ್ರಿಯಾದ ನಂತರ ತಮ್ಮ ಸಾಮರ್ಥ್ಯವನ್ನು ತೋರಿಸಲು ಬಜೆಟ್ ಮಂಡಿಸುವುದು ತುಂಬ ಮುಖ್ಯ.ಹೀಗಾಗಿ ಬಜೆಟ್ ಅನ್ನು ತಾವೇ ಮಂಡಿಸಬೇಕು ಎಂದು ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದಿದ್ದಾರೆ ಎಂಬುದು. ಯಾವಾಗ ಇಂತಹ ಮಾತು, ಪ್ರತಿಮಾತುಗಳ ಅಬ್ಬರ ಹೆಚ್ಚಾಗತೊಡಗಿತೋ? ಆಗ ಕಾಂಗ್ರೆಸ್ ವರಿಷ್ಟರು ಪೇಚಿಗೆ ಸಿಲುಕಿದ್ದು ನಿಜ.**

**ಲಕ್ಷ್ಮಣ ರೇಖೆ**




ಲಕ್ಷ್ಮಣ ಕೊಡಸೆ

**ರಾಜ್ಯದಲ್ಲಿ ಕನ್ನಡಕ್ಕೆ ಉಳಿಗಾಲ ಇಲ್ಲ ಎನ್ನುವುದು ಅತಿರೇಕದ ಹೇಳಿಕೆಯಾಗುತ್ತದೆ. ಕನ್ನಡ ರಾಜ್ಯದಲ್ಲಿ ಸುಭದ್ರ ನೆಲೆಯಲ್ಲಿದೆ. ಭದ್ರಬುನಾದಿಯ ಮೇಲೆ ಬೆಳೆದಿದೆ. ಎರಡೂವರೆ ಸಾವಿರ ವರ್ಷಗಳ ಸಾಂಸ್ಕೃತಿಕ ಪರಂಪರೆ, ಒಂದೂವರೆ ಸಾವಿರ ವರ್ಷದ ಲಿಖಿತ ಸಾಹಿತ್ಯದ ಸಮೃದ್ಧಿ, ಈಗಲೂ ಮುಂದುವರಿಯುತ್ತಿರುವ ಸೃಜನಶೀಲ ಪ್ರವೃತ್ತಿಯ ಹಿನ್ನೆಲೆಯಲ್ಲಿ ಕನ್ನಡಕ್ಕೆ ಯಾವತ್ತೂ ಅಳಿವಿಲ್ಲ ಎಂಬುದು ಸ್ಪಷ್ಟ.**

# ರಾಜ್ಯದ ರಾಜಧಾನಿಯಲ್ಲಿ ಹಲವು ಕನ್ನಡಂಗಳ್

ಬೆಂಗಳೂರಿನಲ್ಲಿ ಕನ್ನಡದ ವ್ಯವಹಾರ ಧಾಟಿಯನ್ನು ಕೇಳಿದವರಿಗೆ ಕನ್ನಡ ಭಾಷೆಗೆ ಮುಂದೆ ಭವಿಷ್ಯ ಇದೆಯೇ ಎಂಬ ಸಂಶಯ ಮೂಡುವುದು ಸಹಜ. ಕವಿರಾಜಮಾರ್ಗದಲ್ಲಿ ಹಲವು 'ಕನ್ನಡಂಗಳ್' ಎಂದು ಹೇಳಿದ್ದು ಬೆಂಗಳೂರಿನಲ್ಲಿ ವಿಭಿನ್ನ ರೀತಿಯಲ್ಲಿ ಕಂಡುಬರುತ್ತಿದೆ. ಶುದ್ಧ ಕನ್ನಡದಲ್ಲಿ ವ್ಯವಹರಿಸುವುದನ್ನು ನೋಡುವುದಕ್ಕೆ ಪತ್ರಿಕೆಗಳನ್ನು ನೋಡಬೇಕು, ಇಲ್ಲವೇ ಕನ್ನಡ ಪುಸ್ತಕಗಳನ್ನು ಓದಬೇಕು. ಕೆಲವು ಪತ್ರಿಕೆಗಳ ಜಾಹೀರಾತು ಪುರವಣಿಗಳಲ್ಲಿ ಕನ್ನಡ ಲಿಪಿಯಲ್ಲಿ ವರದಿಗಳಿರುತ್ತವೆ. ಇಂಗ್ಲಿಷ್ ಪದಗಳ ಮಧ್ಯೆ ಪ್ರತ್ಯಯ, ಕ್ರಿಯಾಪದಗಳಲ್ಲಿ ಕನ್ನಡ ಇರುತ್ತದೆ. ಅದನ್ನು 'ಅಡ್ವಟೋರಿಯಲ್' ಎಂದು ಕರೆಯುತ್ತಾರೆ. ಜಾಹೀರಾತು ಮತ್ತು ಸಂಪಾದಕೀಯ ಭಾಷೆಯ ಸಂಕರವಂತೆ ಅದು. ಪತ್ರಿಕೆಗಳಲ್ಲಿನ ಕನ್ನಡ ಮತ್ತು ಬೆಂಗಳೂರಿಗರ ಮಾತಿನ ಕನ್ನಡವನ್ನು ಗಮನಿಸಿದವರಿಗೆ ಭಾಷೆಯ ಭವಿಷ್ಯದ ಬಗ್ಗೆ ಅನುಮಾನ ಬಂದರೆ ಆಶ್ಚರ್ಯವಿಲ್ಲ.






ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನದ ವ್ಯವಹಾರ ನಡೆಸುತ್ತಿರುವ ಈ ರಾಜಧಾನಿಯಲ್ಲಿ ಇಂಗ್ಲಿಷಿನಲ್ಲಿ ವ್ಯವಹರಿಸುವುದು ಸಲೀಸು ಮತ್ತು ಅದು ಅವಶ್ಯಕವೂ ಆಗಿರುವುದರಿಂದ ಕನ್ನಡದ ವ್ಯವಹಾರ ಮತ್ತು ಕಲಿಯುವುದು ಎರಡೂ ಅಪ್ರಯೋಜಕ ಎಂದೇ ಹೆಚ್ಚಿನವರು ಭಾವಿಸಿದ್ದಾರೆ. ಇದರ ಪರಿಣಾಮ ಬಡಾವಣೆಗಳಲ್ಲಿ ಅಂತರರಾಷ್ಟ್ರೀಯ ಎಂಬ ಹೆಸರು ಹೊತ್ತ ಇಂಗ್ಲಿಷ್ ಮಾಧ್ಯಮ ಶಾಲೆಗಳ ಭರಾಟೆ. ಮತ್ತು ಅವುಗಳಿಗೆ ಮಕ್ಕಳನ್ನು ಕರೆತರುವ ಕಿತ್ತಳೆ ಹಳದಿ ಮಿಶ್ರ ಬಣ್ಣದ ವ್ಯಾನುಗಳ ಸಾಲು ಸಾಲು. ಮುಂಜಾವಿನಲ್ಲಿ ಹಾಗೂ ಇಳಿಹಗಲಿನಲ್ಲಿ ಶಾಲಾಮಕ್ಕಳನ್ನು ಹೊತ್ತ ವ್ಯಾನುಗಳು, ಬಸ್ಸುಗಳು ಬಡಾವಣೆಗಳ ಕಿರು ರಸ್ತೆಗಳಲ್ಲಿಯೂ

■ 31ನೇ ಪುಟಕ್ಕೆ



**ನುಡಿ ಸಾಧಕರು**



ಕೆ.ಎ.ರಾಮಕೃಷ್ಣಮೂರ್ತಿ

# ಪಾ.ವೆಂ ಆಚಾರ್ಯ ಲೇಖನ ಕೃತಿಗಳ ಸಂಗ್ರಹದಲ್ಲಿ ಛಾಯಾ

ಪಾ.ವೆಂ ಆಚಾರ್ಯ (ಪಾಡಿಗಾರು ವೆಂಕಟರಮಣ ಆಚಾರ್ಯ) ಎಂದರೆ ಶಬ್ದಗಳ ಗಾರುಡಿಗ. 'ಪದಾರ್ಥ ಚಿಂತಾಮಣಿ'ಯ ಮೂಲಕ ಶಬ್ದಗಳ ಉಗಮ, ಬೆಳವಣಿಗೆ, ಅರ್ಥ ಮುಂತಾದವುಗಳ ಬಗ್ಗೆ ವಿಶ್ಲೇಷಣೆ ಮಾಡಿದವರು. ಓದುಗರೊಡನೆ ಹರಟೆಯ ಮೂಲಕ ಲಾಂಗೂಲಾಚಾರ್ಯರೆಂದು ಮನೆ ಮಾತಾದವರು. ಕನ್ನಡ ಪತ್ರಿಕೋದ್ಯಮ ಕ್ಷೇತ್ರಕ್ಕೆ ಗೋಯೆಂಕಾ ಪ್ರಶಸ್ತಿಯನ್ನು ತಂದುಕೊಟ್ಟವರು. ಪಾ.ವೆಂ. ಅವರ ಮೊದಲ ಮಗಳು ಸುಕನ್ಯರ ಪುತ್ರಿ ಛಾಯಾ, ಅಜ್ಜನ ಕುರಿತು ಮತ್ತು ಅವರ ಕೃತಿಗಳನ್ನು ಕಾಪಾಡುವ, ಸಂಗ್ರಹಿಸುವ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದ್ದಾರೆ.



ಛಾಯಾ ಬಾಲ್ಯದ ದಿನಗಳಲ್ಲಿ ಬೇಸಿಗೆ ರಜೆಗೆಂದು ಹುಬ್ಬಳ್ಳಿಯಲ್ಲಿರುವ ಪಾವೆಂ ಅವರ ಮನೆಗೆ ಹೋಗುತ್ತಿದ್ದರು. ಅಜ್ಜನೆಂದರೆ ಎಲ್ಲರಂತೆ ಮಾತಿಗೆ, ಹರಟೆಗೆ ಸಿಗುವ ಮನುಷ್ಯನಲ್ಲ. ಬದಲಾಗಿ ಅವರು ಬರೆಯುತ್ತಾ ಕೂತರೆಂದರೆ ಇಡೀ ಮನೆಯಲ್ಲಿ ಒಂಥರಾ ಮೌನ.

ಛಾಯಾ ಅವರ ತಾಯಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. 'ದಾಸರ ಪದಗಳನ್ನು ಹೇಳುವಾಗಲೆಲ್ಲ ಅಜ್ಜ ಬಂದು ಕುಳಿತು ತಮಗೆ ಬೇಕಾದ ಹಾಡುಗಳನ್ನು ಅಮ್ಮನ ಕಂಠದಿಂದ ಕೇಳಿ, ಆನಂದಿಸಿ, ಆ ಹಾಡಿನ ಬಗ್ಗೆ ನನಗೆ ಸಣ್ಣ ಪುಟ್ಟ ವ್ಯಾಖ್ಯಾನ ಮಾಡುತ್ತಿದ್ದರು' ಎಂದು ಛಾಯಾ ಈಗ ನೆನಪು ಮಾಡಿಕೊಳ್ಳುತ್ತಾರೆ.

ರಸಾಸ್ವಾದಕ್ಕೆ ಯಾವ್ಯಾವ ವಿಷಯಗಳಿವೆಯೋ ಅವೆಲ್ಲದರಲ್ಲೂ ಅಜ್ಜನಿಗೆ ಆಸಕ್ತಿ, ಸದಾ ಕುತೂಹಲ ಜೀವಂತವಾಗಿ ಇದ್ದದ್ದು ಬಹಳ ಆಶ್ಚರ್ಯ. ಏಕೆಂದರೆ ಪಾವೆಂ ಅವರು ಕೊನೆಯ ದಿನಗಳಲ್ಲಿ ಜ್ವರದಿಂದ ಬಳಲಿ ಮೇಲೇಳಲಾಗದಿದ್ದ ಸಂದರ್ಭದಲ್ಲಿಯೂ ಕಾದಂಬರಿಯೊಂದು ಅವರ ದಿಂಬಿನ ಕೆಳಗಿದ್ದುದು ಅವರ ಜ್ಞಾನದಾಹಕ್ಕೆ ನಿದರ್ಶನ.

ಪಾವೆಂ ಆಚಾರ್ಯರಿಗೆ ರಾಜಕೀಯ, ಸಂಗೀತ, ಸಾಹಿತ್ಯ, ಚಿತ್ರಕಲೆಯಲ್ಲಿದ್ದ ಆಸಕ್ತಿ ಕಸ್ತೂರಿ ಪತ್ರಿಕೆಗಳನ್ನು ಓದಿದರೆ ಹೇಗೆ ಗೊತ್ತಾಗಿರುತ್ತೋ, ಹಾಗೆಯೇ ಕರ್ಮವೀರ ಪತ್ರಿಕೆಯಲ್ಲಿ ಅವರು ಸಿನಿಮಾ ವಿಮರ್ಶೆ ಬರೆಯುತ್ತಿದ್ದುದ್ದನ್ನು ಛಾಯಾ ಕಂಡಿದ್ದಾರೆ.

ಪಾವೆಂ ಅವರಿಗೆ ಬಂಗಾಳಿ, ಹಿಂದಿ, ಸಂಸ್ಕೃತ, ಇಂಗ್ಲಿಷ್ ಭಾಷೆಯ ಪಾಂಡಿತ್ಯ ಇರುವುದನ್ನು ಕಸ್ತೂರಿ ಮಾಸ ಪತ್ರಿಕೆಯ ಲೇಖನಗಳನ್ನು ಓದುತ್ತಿದ್ದರೆ ಗೊತ್ತಾಗುತ್ತದೆ.

34ನೇ ಪುಟಕ್ಕೆ

**ಆರೂವರೆ ದಶಕ ಕಳೆದಿದ್ದರೂ ಕನ್ನಡ–ಕನ್ನಡಿಗ–ಕರ್ನಾಟಕಕ್ಕೆ ಪೂರ್ಣ ಪ್ರಮಾಣದ ನ್ಯಾಯ ಸಿಕ್ಕಿರುವುದಿಲ್ಲ. ಪರಮ ಅನ್ಯಾಯವನ್ನೇ ಅನುಭವಿಸುವ ಸ್ಥಿತಿ ಉಳಿದುಕೊಂಡಿದೆ. ಕನ್ನಡವನ್ನು ಎಲ್ಲ ಹಂತದಲ್ಲೂ ಬಳಸುವಲ್ಲಿ ಆಳುವ ಸರ್ಕಾರಗಳು ವಿಫಲಗೊಂಡಿವೆ. ರಾಜ್ಯ ಸರ್ಕಾರಗಳದ್ದೆ ಈ ಕತೆಯಾದರೆ, ಮೊದಲಿನಿಂದಲೂ ಕನ್ನಡನಾಡನ್ನು ಕೇವಲವಾಗಿ ಕಾಣುತ್ತಿರುವ ದೆಹಲಿ ದೊರೆಗಳು ಈ ಹೊತ್ತಿಗೂ ಆ ಚಾಳಿಯನ್ನು ಮುಂದುವರಿಸಿದ್ದಾರೆ.**

## ಒಳಬಗೆಯ ಪಿಸುಮಾತು



ಶ್ರೀಪತಿ ಗೋಗಡಿಗೆ

pisumathu@gmail.com

# ಕನ್ನಡಿಗರು ಕಳೆದುಕೊಂಡ ಕನ್ನಡ!

ನಾವು ಕನ್ನಡಿಗರು ಕನ್ನಡವನ್ನು ಕಳೆದುಕೊಂಡಿದ್ದೇವೆ, ಮತ್ತು ಈಗಲೂ ಅಳಿದುಳಿದ ನುಡಿಯನ್ನೂ ಕಳೆದುಕೊಳ್ಳುತ್ತಲೇ ಇದ್ದೇವೆ. ಆದರೆ ಹೇಗೆ ಕಳೆದುಕೊಳ್ಳುತ್ತಿದ್ದೇವೆ ಎಂಬ ಅರಿವು ಹೆಚ್ಚಿನ ಮಂದಿಗೆ ಇಲ್ಲ. ಇಂದು ನಮ್ಮ ನುಡಿಯೊಳಗೆ ಬಂದು ಸೇರಿಕೊಳ್ಳುತ್ತಿರುವ ಆಂಗ್ಲ ಸೊಲ್ಲುಗಳು ಹೆದರಿಕೆ ಹುಟ್ಟಿಸುತ್ತಿವೆ. ಆದರೆ ಬರಿಯ ಆಂಗ್ಲ ಒರೆಗಳಷ್ಟೇ ಅಲ್ಲದೇ, ಈ ಹಿಂದೆಯೇ ಬೆರೆತಿರುವ ಸಂಸ್ಕೃತ, ಪರ್ಶಿಯನ್ ಹಾಗೂ ಮರಾಟಿ ಒರೆಗಳು ಅಶ್ಟಿಶ್ಟಲ್ಲ. ನಾವು ಯಾವಾಗಲೂ ಬಳಸುವ 'ಬಾವುಟ' ಅನ್ನುವುದು ಮರಾಟಿಯದ್ದಾದರೆ, ಕಾನೂನು ಹಾಗೂ ಅದಕ್ಕೆ ನಂಟಿರುವ ಹೆಚ್ಚಿನ ಒರೆಗಳೆಲ್ಲವೂ ಪರ್ಶಿಯನ್ ನುಡಿಯಿಂದ ಬಂದಿರುವಂತವು! ಕನ್ನಡಿಗರ 'ಭಾಷೆ, ಅಸ್ಮಿತೆ, ಅಭಿಮಾನ, ಸ್ವಾಭಿಮಾನ'ಗಳ ಬಗ್ಗೆ ಯಾವಾಗಲೂ ಮಾತಾಡುತ್ತಲೇ ಇರುತ್ತೇವೆ. ಆದರೆ ಈ ಯಾವ ಒರೆಗಳೂ ನಮ್ಮವಲ್ಲ ಅನ್ನುವುದು ನಮಗೆ ತಿಳಿದಿಲ್ಲ! ಇವೆಲ್ಲವೂ ಸಕ್ಕದ, ಅಂದರೆ ಸಂಸ್ಕೃತದ ಎರವಲು ಒರೆಗಳು.



### ನುಡಿಯ ತೊಡಕು ಮತ್ತು ತೊಡಕಿನ ನುಡಿ:

ಒಂದು ನುಡಿಯ ತೊಡಕುಗಳು ಏನೇನು? ಅದು ಬೆಳೆಯುತ್ತಾ ಹೋಗುವುದಕ್ಕೆ ಇಲ್ಲವೇ ಉಳಿದುಕೊಂಡು ಮುಂದುವರಿಯುವುದಕ್ಕೆ ಎದುರಾಗುವ ಎಲ್ಲಾ ಅಡೆತಡೆಗಳೂ ನುಡಿಯ ತೊಡಕುಗಳೆ ಆಗಿವೆ. ಅವು ಆ ನುಡಿಯ ಹೊರಗಿನಿಂದ ಎದುರಾಗುವಂತವು ಆಗಿರಬಹುದು. ಇಲ್ಲವೇ, ಅದೇ ನುಡಿಯ ಒಳಗಿನಿಂದಲೇ ಹುಟ್ಟಿಕೊಂಡಂತವೂ ಆಗಿರಬಹುದು. ಈಗ ಈ ಎರಡೂ ಬಗೆಯ ತೊಡಕುಗಳ ಬಗ್ಗೆ ಗಮನ ಹರಿಸೋಣ.

ಒಂದು ನುಡಿಗೆ ಹೊರಗಿನಿಂದ ಬೇಕಾದಶ್ಟು ತೊಡಕುಗಳು ಎದುರಾಗಬಹುದು. ಅದರಲ್ಲೂ ಆ ನುಡಿಯು ಆಡಳಿತದ ಬೆಂಬಲವನ್ನು ಹೊಂದಿಲ್ಲದೆ ಹೋದರಂತೂ ಆ ನುಡಿಯು ಉಳಿಯುವುದೇ ತೊಡಕಿನದು. ಒಂದು ನುಡಿಗೆ ಆಡಳಿತದ ಬೆಂಬಲ ಇಲ್ಲದೇ ಹೋದಾಗ, ಆ ನುಡಿಗೆ ಎದುರಾಗುವ ದೊಡ್ಡ ತೊಡಕೇ ಆಡಳಿತದ್ದು! ಅದರಲ್ಲೂ ಆಡಳಿತವೂ ಒಂದು ನುಡಿಯ ಇಲ್ಲವೇ ಆ ನುಡಿ ಮಂದಿಯ ಎದುರಾಗಿದ್ದರಂತೂ ಅವರ ನೆಲೆಪಾಡು ಹೇಳುವುದೇ ಬೇಡ. ಈ ಬಗೆಯಲ್ಲಿ ನಮ್ಮ ಒಕ್ಕೂಟದ ಹಾಗೂ ನೆಲತರಳೆಯ ಎಶ್ಟೋ ನುಡಿಗಳು ಕಣ್ಮರೆಯಾಗಿ ಹೋಗಿವೆ. ಇನ್ನಶ್ಟು ನುಡಿಗಳು ಅಳಿವಿನ ಹೊದ್ದಿನಲ್ಲಿ ಇವೆ. ನಮ್ಮ ನಾಡಿನದೇ ಆಗಿರುವ ಕೊರಗ ನುಡಿಯು ಹೀಗೆ ಆಡಳಿತದ ಬೆಂಬಲವಿಲ್ಲದೆ ಅಳಿವಿನ ಹೊದ್ದಿಗೆ ಹೋಗಿರುವ ನುಡಿಯಾದರೆ, ಬಡಗು ಇಂಡಿಯಾದ ನೂರಾರು ನುಡಿಗಳು ಹಿಂದಿಯ ಅಬ್ಬರಕ್ಕೆ ಸಿಲುಕಿ ಹೇಳ ಹೆಸರಿಲ್ಲದಂತೆ ಮರೆಯಾಗಿವೆ. ಅವದಿ, ಮಗದಿ, ಕುಮೋನಿ, ಹರಿಯಾಣ್ವಿ, ಬಾಗಿರಿಯಂತಹ ನೂರಾರು ನುಡಿಗಳು ಈಗಾಗಲೇ ಹೆಚ್ಚು ಕಡಿಮೆ ಮರೆಯಾಗಿದ್ದರೆ, ಮಯ್ತಿಲಿ, ಬೋಜಪುರಿ, ಸಂತಾಲಿಯಂತಹ ಮುಡಿಗಟ್ಟಲೆ ಮಂದಿ ಆಡುವ ನುಡಿಗಳು ಕೂಡ ಇಂದು ಆಡಳಿತದ ನೆರವು ಇಲ್ಲದೇ ಸಾಯುತ್ತಿವೆ. ನೆರವು ನೀಡದಿದ್ದರೂ ಬೇಡ, ಅವುಗಳನ್ನು ಅವುಗಳಶ್ಟಕ್ಕೆ ಬಿಟ್ಟರೂ ಅವೆಲ್ಲ ಬದುಕಿಕೊಳ್ಳುತ್ತವೆನೋ. ಆದರೆ ಆಡಳಿತವು ಕೆಟ್ಟ ಮುನ್ನೋಟದಿಂದ ಹಿಂದಿಯನ್ನುಳಿದು ಬೇರೆಲ್ಲಾ ನುಡಿಗಳನ್ನೂ ಕೊಲ್ಲುತ್ತಲೇ ಹೊರಟಿದೆ.

**ಎರಡು–ಮೂರು ಸಾವಿರ ವರ್ಷಗಳ ಹಿಂದೆ ಆದಿ ದ್ರಾವಿಡ ಭಾಷೆಯಿಂದ ಕವಲೊಡೆದ ಕನ್ನಡ ಭಾಷೆ ಆಯಾ ಕಾಲ ಘಟ್ಟದಲ್ಲಿ ಬಂದ ವಲಸಿಗರು, ಅವರು ತಂದ ಭಾಷೆ ಮಿಳಿತವಾಗಿ ಅಚ್ಚ ಕನ್ನಡ ಪದಗಳೇ ಮರೆಯಾಗಿ ಹೋಗಿವೆ. ಸಾವಿರ ವರ್ಷಗಳ ಹಿಂದಿನ ಪ್ರಾಕೃತದ ಪ್ರಭಾವ ಮತ್ತು ಸಾವಿರ ವರ್ಷದ ನಂತರದ ಸಂಸ್ಕೃತದ ಪ್ರಭಾವ ಹಾಗೂ ಕಳೆದೊಂದು ಶತಮಾನದ ಇಂಗ್ಲೀಷ್ ಪ್ರಭಾವ ಕನ್ನಡ ಮೂಲ ಪದಗಳನ್ನೇ ಮರೆಸಿ ಬಿಟ್ಟಿವೆ.**

ಇನ್ನೂ ನಮ್ಮ ಕನ್ನಡ ನುಡಿಯ ಕುರಿತಾಗಿ ಬಂದರೆ, ಕನ್ನಡಕ್ಕೆ ನಮ್ಮ ನಾಡಾಳಿತದ ಒತ್ತಾಸೆ ಇದೆಯಾದರೂ ಒಕ್ಕೂಟದಾಳ್ವಿಕೆಯ ನೆರವಾಗಲೀ, ಬೆಂಬಲವಾಗಲೀ ಇಲ್ಲ. ಆದರೆ ನಮ್ಮ ಅಡಿಕಟ್ಟಳೆಯು ಹೆಚ್ಚಾಗಿ ಒಕ್ಕೂಟ ಆಡಳಿತಕ್ಕೆ ಹೆಚ್ಚಿನ ಕಸುವು ನೀಡಿರುವುದರಿಂದಾಗಿ ಅದರ ಬೆಂಬಲವಿಲ್ಲದೆ ಈ ಒಕ್ಕೂಟದಲ್ಲಿ ಒಂದು ನುಡಿಯು ತುಂಬಾ ಹೊತ್ತು ಉಳಿಯುವುದು ಆಗದು ಎಂಬುದು ನಮ್ಮ ಕನ್ನಡದ ನೆಲೆಯನ್ನು ನೋಡಿದರೆ ಗೊತ್ತಾಗುತ್ತದೆ. ನಾಡಾಳಿತವು ಕನ್ನಡದ ಕಡೆಗೆ ಇರುವಂತೆ ಕಂಡರೂ ಕೂಡ 'ಮೂರು ಕೊಟ್ಟರೆ ಮಾವನ ಕಡೆ, ಆರು ಕೊಟ್ಟರೆ ಅತ್ತೆ ಕಡೆ' ಎಂಬ ನಿಲುವಿನ ಆಳ್ಮೆಗರಿಂದಾಗಿ ಈಗಾಗಲೇ ಕುಂಟುತ್ತಿರುವ ನಮ್ಮ ನುಡಿಯು ತುಂಬಾ ತೆರಹು ನಡೆಯಲಾರದು ಅನ್ನುವುದು ಬಗೆಯರಿಕೆಯಾಗುತ್ತದೆ. ಒಕ್ಕೂಟ ಆಳ್ವಿಕೆಯು ಆಡಳಿತದ ಎಲ್ಲೆಡೆಯೂ ಹಿಂದಿಯನ್ನೇ ತಂದು ತುರುಕುತ್ತಿರುವುದು, ಹಾಗೂ ಅದರ ಹಿಂದೆ ತೆರೆ ಮರೆಯಲ್ಲಿ ಸಂಸ್ಕೃತವನ್ನು ಅಣಿಗೊಳಿಸಿ ಇಟ್ಟಿರುವುದು ಕನ್ನಡದ ಬೆಳವಣಿಗೆಗೆ ದೊಡ್ಡ ತಡೆಯಾಗಿದೆ. ಏಕೆಂದರೆ ನಾವು ನಾಡಳಿತದ ಕೆಲಸಮನೆಗಳಿಗಿಂತಲೂ ಒಕ್ಕೂಟದ ಆಳ್ವಿಕೆಯಲ್ಲಿರುವ ಕೆಲಸಮನೆಗಳಿಗೇ ಹೆಚ್ಚಿಗೆ ಅಲೆದಾಡುತ್ತೇವೆ, ಬಳಸುತ್ತೇವೆ.



ಇದಕ್ಕೆ ಒಳ್ಳೆಯ ಎತ್ತುಗೆಗಳೆಂದರೆ ಹಣಮನೆ ಹಾಗೂ ಅಂಚೆ ಮನೆಗಳು. ಇವೆರಡಕ್ಕೂ ಹೋಗುವಷ್ಟು ನಾವು ನಾಡಳಿತದ ಕೆಲಸಮನೆಗಳಿಗೆ ಹೋಗುವುದಿಲ್ಲ. ಏಕೆಂದರೆ ಹಣಮನೆಯ ಬಳಕೆ ಇಂದಿನ ಬದುಕಿನಲ್ಲಿ ನಾಳೂ ಬೇಕಾಗಿರುವಂತಹ ಒಂದು ಬೇಕಿಗೆಯಾಗಿದೆ. ಹಾಗೆಯೇ ಉಗಿಬಂಡಿ, ಬಾನೋಡ, ಹೆದ್ದಾರಿ ಹೀಗೆ ಇನ್ನೂ ಹಲವಾರು ಬಳಸುಗೆಗಳನ್ನು ಈ ಪೇರಿಕೆಯಲ್ಲಿ ಸೇರಿಸುತ್ತಾ ಹೋಗಬಹುದು. ಇಲ್ಲೆಲ್ಲಾ ಒಕ್ಕೂಟದಾಳ್ವಿಕೆಯ ಕರಿನೆರಳು ಬಿದ್ದಿರುವುದರಿಂದಾಗಿ, ಎಲ್ಲೆಡೆಯೂ ಹಿಂದಿಯೇ ತುಂಬಿ ತುಳುಕುತ್ತಿದೆ! ಇಲ್ಲೆಲ್ಲ ಬೂತಗನ್ನಡಿಯನ್ನು ಹಿಡಿದು ಹುಡುಕಿದರೂ ಒಂದು ಸೊಲ್ಲು ಕನ್ನಡವೂ ಕಾಣಲು ಸಿಗದು. ಇಂತಹ ಕೆಟ್ಟ ನೆಲೆಯಲ್ಲಿ ಕನ್ನಡದಂತಹ ನುಡಿಯೊಂದು ಉಳಿದು ಬೆಳೆಯುವುದಾದರೂ ಹೇಗೆ?

## ತೊಡಕಿನ ನುಡಿ ಅಂದರೇನು?

ಹೀಗೆ ನುಡಿ ಬೆಳವಣಿಗೆಗೆ ಇರುವ ತೊಡಕುಗಳ ಬಗ್ಗೆ ಪೇರಿಕೆಯಾಗಿ ಹೇಳುತ್ತಲೇ ಹೋಗಬಹುದಾದರೂ ಈಗ 'ತೊಡಕಿನ ನುಡಿ'ಯ ಕುರಿತಾಗಿ ಒಂದಿಷ್ಟು ನೋಡೋಣ. ಒಂದು ನುಡಿಯಲ್ಲಿ ಹಲವು ತೊಡಕುಗಳಿರುವುದನ್ನು ನೋಡಿದ್ದೇವೆ. ಆದರೆ ಯಾವುದಿದು ತೊಡಕಿನ ನುಡಿ? ಒಂದು ನುಡಿಯೆ ತೊಡಕಿನದಾಗಿ ಇರಬಹುದೇ? ಹಾಗೆ ಇದ್ದುದೆ ಆದಲ್ಲಿ ಅದು ನಡೆದು, ಬೆಳೆದು ಬರಬಹುದೇ? ಎಂಬೆಲ್ಲ ಕೇಳ್ವಿಗಳು ಹುಟ್ಟುವುದೂ ಇದೆ. ಆದರೆ ಯಾರು ಒಪ್ಪಲಿ, ಬಿಡಲಿ ಸಂಸ್ಕೃತವು ಒಂದು ತೊಡಕಿನ ನುಡಿಯೆ ಆಗಿದೆ. ನಾನಿದನ್ನು ಕನ್ನಡಿಗರ ನೋಟದಲ್ಲಿ ಮತ್ತು ಮಾತನಾಡುವ ನೋಟದಲ್ಲಿ ಹೇಳುತ್ತಿದ್ದೇನೆ. ಸಕ್ಕದಲ್ಲಿ ಎಷ್ಟೇ ದೊಡ್ಡ ನಲ್ಬರಹಗಳು ಬರೆಯಲ್ಪಟ್ಟಿರಬಹುದು. ಅದು ಎಷ್ಟೋ ನುಡಿಗಳಿಗೆ ತನ್ನ ಒರೆಗಳನ್ನು ಎರವಲು ಕೊಟ್ಟಿರಬಹುದು. ಆದರೆ ಒಂದು ಮಾತನಾಡುವ ನುಡಿಯಾಗಿ ಅದು ಒಳ್ಳೆಯ ನುಡಿಯಲ್ಲವೇ ಅಲ್ಲ.

ಸಕ್ಕದ ಮಾಟನುಡಿಗಳನ್ನು ಗುಡಿಗಳಲ್ಲಿ ಕೇಳಿ ನಾವೆಲ್ಲರೂ ತಲೆದೂಗುತ್ತೇವೆ. ಆದರೆ ಅದನ್ನು ಯಾರಾದರೂ ಚೆನ್ನಾಗಿ ಮಾತಾಡುವುದನ್ನು ನಾವು ಯಾರಾದರೂ ಕೇಳಿದ್ದೇವೆಯೇ? 'ಅಲ್ಲಿ ಮಾತಾಡುತ್ತಾರಂತೆ, ಇಲ್ಲಿ ಮಾತಾಡುತ್ತಾರಂತೆ. ಆ ಊರಲ್ಲಿ ಎಲ್ಲರೂ ಸಕ್ಕ (ಸಂಸ್ಕೃತ) ವನ್ನೇ ಮಾತಾಡುವುದಂತೆ' ಎಂಬೆಲ್ಲ ಗಾಳಿಸುದ್ದಿಯ ಮಾತುಗಳನ್ನು ಕೇಳುತ್ತೇವೆಯೇ ಹೊರತಾಗಿ ನೇರವಾಗಿ ಒಂದಿಬ್ಬರು ಸಕ್ಕದಲ್ಲಿಯೇ ಹರಟುವುದನ್ನು ನೋಡಲು ನನಗಂತೂ ಇಂದಿಗೂ ಆಗಿಲ್ಲ! ಮತ್ತು ನಾವು ನೋಡಿದ್ದೇವೆ ಎಂದು ಹೇಳುವ ಯಾರೊಬ್ಬರೂ ಇದುವರೆಗೂ ಸಿಕ್ಕಿಲ್ಲ. ಸಂಸ್ಕೃತದ ನುಡಿಗಟ್ಟುಗಳನ್ನು ಗಮನಿಸಿದರೆ, ಎಂತವರಿಗಾದರೂ ತಿಳಿಯುತ್ತದೆ, ಇವನ್ನಿಟ್ಟುಕೊಂಡು ಸುಳುವಾಗಿ ಮಾತಾಡಲು ಆಗುವುದೇ ಇಲ್ಲ ಎಂದು! ಅದು ಏನಿದ್ದರೂ ಹಾಡಿಕೆಗಳನ್ನು ಬರೆಯಲು ಮತ್ತು ಅವುಗಳನ್ನು ಒಂದು ಸರಿಯಾದ ಅಲೆಯಾಗಿ ಹಾಡಲು ತಕ್ಕುದಾದ ನುಡಿಯೆ ಹೊರತಾಗಿ, ಮಾತಾಡಲು ತಕ್ಕುದಾದ ನುಡಿಯಲ್ಲ. ಯಾಕೆ ಹೀಗೆ ಅಂದರೆ ನನ್ನ ತಿಳಿವಿಗೆ ನಿಲುಕಿದ್ದು ಏನೆಂದರೆ, ಆ ನುಡಿಯನ್ನು ಕಟ್ಟಿಕೊಂಡಿದ್ದೇ ತಮ್ಮ ನಲ್ಬರಹಗಳನ್ನು ಬೇರೆಯವರಿಗೆ ಗೊತ್ತಾಗದಂತೆ ಬರೆದಿಡಲು ಹೊರತಾಗಿ ಮಾತಾಡಲು ಅಲ್ಲ.

ಕನ್ನಡವೂ ಸೇರಿದಂತೆ ನೆಲತರಳೆಯ ಹನ್ನೂರಾರು ನುಡಿಗಳು ಮಂದಿಯ ಆಡುಮಾತಿನೊಂದಿಗೆ ಹುಟ್ಟಿ ಬೆಳೆದಿವೆ. ಆದರೆ ಸಕ್ಕದಂತಹ ಕೆಲವು ನುಡಿಗಳನ್ನು ಕೆಲವೇ ಮಂದಿ ಕೂತು ತಮಗಾಗಿ ಕಟ್ಟಿಕೊಂಡಿದ್ದಾರೆ. ಮೊದಲಿನವು ಆ ಸುತ್ತೆಡೆಯ ಮಂದಿಯ ನಾಲಗೆಯ ಮೇಲೆ ನಲಿದು ಬೆಳೆದರೆ, ಎರಡನೆಯವು ಕೆಲ ಮಂದಿಯ ಓಲೆಗರಿಯ ಮೇಲೆ ಹುಟ್ಟಿಕೊಂಡಿವೆ. ಈ ಎರಡಕ್ಕೂ ಇರುವ ಬೇರ್ಮೆಯನ್ನು ತಿಳಿದುಕೊಂಡರೆ ಅದೇ ಮಂದಿ ಇಂದು ಬಂದು 'ಇರುವ ನುಡಿಗಳಿಗೆಲ್ಲಾ ಇದುವೇ ತಾಯಿ, ಕನ್ನಡಕ್ಕೂ ಇದೇ ತಾಯಿ..' ಎಂದು ಹೇಳುವ ಸುಳ್ಳುಗಳನ್ನು ನಾವು ಒಡೆಯಲು ಆಗುತ್ತದೆ.

ಇಷ್ಟಾಗಿಯೂ ಸಕ್ಕವು ಹೇಗೆ ತೊಡಕಿನ ನುಡಿ ಎಂಬುದಾಗಿ ತಿಳಿಯಲಿಲ್ಲವೆಂದರೆ, ಇನ್ನೊಂದೆರಡು ಎತ್ತುಗೆಗಳನ್ನು ಕೊಡಬಹುದು.

23ನೇ ಪುಟಕ್ಕೆ

**“ಕಳೆದ ಜನವರಿ.17 ರಂದು ಬೆಂಗಳೂರಿನಲ್ಲಿ ಅಬಕಾರಿ ಇಲಾಖೆಯ ಉಪ ಆಯುಕ್ತ ಜಗದೀಶ್ ನಾಯಕ್, ಸೂಪರಿಂಟೆಂಡೆಂಟ್ ತಮ್ಮಣ್ಣ, ಕಾನ್ಸ್ಟೇಬಲ್ ಲಕ್ಕಪ್ಪ ಅವರುಗಳು ಬ್ಯಾಟರಾಯನಪುರದಲ್ಲಿ 25 ಲಕ್ಷರೂಪಾಯಿ ಲಂಚ ಪಡೆಯುವ ಲೋಕಾಯುಕ್ತ ಪೋಲೀಸರಿಗೆ ಸಿಕ್ಕಿಬಿದ್ದು ಜೈಲು ಸೇರಿದ್ದಾರೆ. ನಕಲಿ ಮದ್ಯಗಳ ಹಾವಳಿಗೆ ಭ್ರಷ್ಟ ಅಬ್ಕಾರಿ ಅಧಿಕಾರಿಗಳು ಹೇಗೆ ಕಾರಣರಾಗುತ್ತಾರೆ ಮತ್ತು ಅದರ ದುಷ್ಪರಿಣಾಮದಿಂದ ವರ್ಷಕ್ಕೆ ಕರ್ನಾಟಕವೊಂದರಲ್ಲೇ ಲಕ್ಷಾಂತರ ಜನ ಸಾಯುತ್ತಿದ್ದಾರೆಂಬ ಬಗ್ಗೆ ಒಂದು ವಿಶ್ಲೇಷಣಾತ್ಮಕ ತನಿಖಾ ಲೇಖನವಿದು, ಓದಿ”...**

# ಗುಂಡಿನ ಮತ್ತು ಮದ್ಯದ ಜಗತ್ತು ಗಮ್ಮತ್ತು

● ಬಾಬು

ಗುಂಡು ಬಂದೂಕಿನಿಂದ ಸಿಡಿದರೂ ಅಪಾಯ, ಬಾಟಲಿಯಿಂದ ಬಂದರೂ ಅಪಾಯವೆ. ಬಂದೂಕಿನ ಗುಂಡು ದೇಹ ಸೇರಿದರೆ ಎಷ್ಟು ಅಪಾಯವೊ, ಬಾಟಲಿ ಗುಂಡು ಕರುಳು ತೂರಿಕೊಂಡರೂ ಅಷ್ಟೇ ಗಂಡಾಂತರಕಾರಿಯಾಗಿರುತ್ತೆ. ಯುರೋಪಿಯನ್ನರಿಂದ ಬಂದ ಈ ಎರಡೂ ರೀತಿಯ ಗುಂಡುಗಳು ವಿಶ್ವದ ಎಲ್ಲಾ ಮನುಷ್ಯನ ಗುಂಡಿಗೆಯನ್ನು ಸೀಳಿ ಗುಳುಂ ಮಾಡಿ ಬಿಡುತ್ತಿವೆ. ದೇಹ ಮತ್ತು ಮನಸಿನ ಆರೋಗ್ಯ ಹಾಳು ಮಾಡುವ ಮದ್ಯಪಾನದ ಬಗ್ಗೆ ಪಾಶ್ಚಾತ್ಯ ದೇಶದಲ್ಲಿ ಜಾಗೃತಿ ಅಭಿಯಾನ ಯಶಸ್ವಿಯಾಗಿ ಅಲ್ಲೀಗ ಕುಡುಕರ ಸಂಖ್ಯೆ ಕಡಿಮೆಯಾಗುತ್ತಿದೆ. ಅಂತಹ ಒಳ್ಳೆ ಮದ್ಯ ಸಿಗುವ ಪಾಶ್ಚಾತ್ಯ ದೇಶದಲ್ಲೆ ಗುಂಡಿನ ಅಪಾಯ ಎದುರಾಗುತ್ತಿದೆ ಮತ್ತು ಅದರ ಬಗ್ಗೆ ಜನ ಜಾಗೃತರಾಗುತ್ತಿದ್ದಾರೆ. ಆದರೆ ಭಾರತದಂತಹ ಮೂರ್ಖರ ದೇಶದಲ್ಲಿ ಕಚಡಾಮದ್ಯ ಸುರಿದಾಡುತ್ತಿವೆ ಎಂಬುದು ಗೊತ್ತಿದ್ದರೂ, ಮದ್ಯಸೇವನೆ ಪ್ರತಿಷ್ಠೆಯ ಸಂಕೇತದಂತೆ ಹದಿವಯಸ್ಕರಿಂದ ಮುದಿ ವಯಸ್ಕರವರೆಗೂ ಸುರೆಯಾಡುತ್ತಿದೆ.



ಇತ್ತೀಚೆಗೆ ಯೂರೋಪ್‌ನ ಸ್ಕಾಚ್ ವಿಸ್ಕಿ ಅಸೋಸಿಯೇಷನ್ ಪದಾಧಿಕಾರಿಗಳು ಭಾರತದಲ್ಲಿ ತಯಾರಾಗುವ  ಮದ್ಯ ವೈಖರಿ ನೋಡಿ ಹೌಹಾರಿದ್ದಾರೆ. ಕಜ್ಜಿ ಗಾಯಗಳಿಗೆ ಹಾಕುವ ಡೆಟಾಲ್ ಮತ್ತು ನೆಲ ಒರೆಸುವ ಫಿನಾಯಿಲ್‌ಗಳಿಗೆ ಉಪಯೋಗಿಸುವ ಕಳಪೆ ದರ್ಜೆಯ ಸ್ಪಿರಿಟನ್ನು  ನೇರ ಬಾಟಲಿ ತುಂಬಿ ಜನರಿಗೆ ಕುಡಿಯಲು ನೀಡುವ ರೀತಿ ಕಂಡು ಅವರ ಎದೆ ಧಸಕ್ಕೆಂದಿದೆ.

ಈ ಬಗ್ಗೆ ಭಾರತದ ಮದ್ಯ ಸರಬರಾಜು ಸಂಘದವರಿಗೆ ಎಚ್ಚರಿಕೆ ನೀಡಿದರೆ, ಭಾರತದ ಮದ್ಯದ ದೊರೆಗಳು ಹಾರಿಕೆಯ ಉತ್ತರ ನೀಡಿ ನಗಾಡಿದ್ದಾರೆ. "ಭಾರತೀಯರ ಕುಡುಕರಿಗೆ ಮದ್ಯ ಖಡಕ್ ಕ್ವಾರವಾಗೇ ಇರಬೇಕು. ಮೃದು ಕ್ವಾರವಾಗಿದ್ದರೆ ಕಳಪೆ ಮದ್ಯ ಎಂದು ದೂಷಿಸುತ್ತಾರೆ" ಎಂದು ಭಾರತೀಯ ಮದ್ಯ ಉದ್ಯಮಿಗಳು ಯೂರೋಪ್ ಸ್ಕಾಚ್ ವಿಸ್ಕಿ ಅಸೋಸಿಯೇಷನ್ ನಿಯೋಗಕ್ಕೆ ಸಮಜಾಯಿಷಿ ನೀಡಿದ್ದಾರಂತೆ.

ಭಾರತದಲ್ಲಿ ತಯಾರಾಗುವ ಹೆಸರಾಂತ ಕಂಪೆನಿಗಳ ವಿಸ್ಕಿ, ರಮ್, ಬ್ರಾಂಡಿ, ವೋಡ್ಕಾ, ಜಿನ್‌ಗಳ ಕತೆ ಹೀಗಾದರೆ, ವಿದೇಶಿ ಇಂಪೋರ್ಟೆಡ್ ಸ್ಕಾಚ್ ಎಂದು ತಯಾರಾಗುವ 1500 ರಿಂದ ಸಾವಿರಾರು ರೂಪಾಯಿ ಗಳ ಸ್ಕಾಚ್ ವಿಸ್ಕಿ



ತಯಾರಿಕೆ ನೋಡಿ ಯೂರೋಪ್ ನಿಯೋಗ ಮತ್ತಷ್ಟು ಬೆಚ್ಚಿಬಿದ್ದಿದೆ. ಯುರೋಪ್‌ನಿಂದ ಖರೀದಿಸಿದ ಉತ್ತಮ ದರ್ಜೆಯ ಸ್ಕಾಚ್‌ನಲ್ಲಿ ಶೇ.5ರಷ್ಟನ್ನು ಮಾತ್ರ ಬಳಸಿ, ಉಳಿದ ಶೇ.95 ಭಾಗವನ್ನು ಕಾಕಂಬಿ ಸ್ಪಿರಿಟ್ ಸೇರಿಸಿ ತಯಾರಿಸುವ ಭಾರತೀಯರ ಸ್ಕಾಚ್ ವಿಸ್ಕಿ ನೋಡಿ ದಂಗಾಗಿ ಹೋಗಿದ್ದಾರೆ. ಪುಣ್ಯಕ್ಕೆ ಇಲ್ಲಿ ಬಳಸುವ ಕಾಕಂಬಿ ಸ್ಪಿರಿಟನ್ನು ರೆಕ್ಟಿಫೈಡ್ (ತಾಜಾತನದಲ್ಲಿ ಶುದ್ಧೀಕರಿಸಿದ) ಮಾಡಿದ ಮೊದಲ ದರ್ಜೆಯದಾಗಿದ್ದು ಬಿಟ್ಟರೆ ಉಳಿದಂತೆ ಉತ್ತಮ ದರ್ಜೆಯ ಅರಾಕ್ (ಸಾರಾಯಿ)ಗೂ ಇದಕ್ಕೂ ಯಾವುದೂ ವ್ಯತ್ಯಾಸವಿಲ್ಲ ಎಂದು ದೂಷಿಸಿದ್ದಾರೆ. ಭಾರತದಲ್ಲಿ ಮಾರಾಟವಾಗುವ ಇಂಥ ಸ್ಕಾಚ್ ವಿಸ್ಕಿಗಳನ್ನು ಯೂರೋಪ್ ನಿಯೋಗ "ಭಾರತದಲ್ಲಿ ತಯಾರಾದ ವಿದೇಶಿ ಸ್ಕಾಚ್ ವಿಸ್ಕಿ" ಎಂದು ಲೇವಡಿ ಮಾಡಿದ್ದಾರೆ. ಬ್ರಿಟನ್ ದೇಶದ ಭಾಗವಾಗಿರುವ ಸ್ಕಾಟ್‌ಲ್ಯಾಂಡ್‌ನಲ್ಲಿ ತಯಾರಾಗುವ 'ಸ್ಕಾಟಿಷ್ ಮದ್ಯ' ಅಥವ ಶ್ರೀಮಂತ ಕುಡುಕರು ಕುಡಿವ "ಸ್ಕಾಚ್ ವಿಸ್ಕಿ" ತಯಾರಾಗುವುದು ಸಹ ಗೋಧಿಯನ್ನು ಹತ್ತಾರು ವರ್ಷ ನೆನೆ (ಮಾಲ್ಟ್) ಸಹ ಹಾಕಿ ಮಾಡುವುದರಿಂದ. ಇಂಥ ಹುದುಗಿಸಿ ಮಾಡುವ ಮದ್ಯ ಕ್ವಾರ ಸಹ ಹತ್ತಾರು ವರ್ಷ



ಹಳೆಯದಾಗಿರುತ್ತೆ. ಹಳೆಯದಾದಷ್ಟು ಮದ್ಯದ ಕ್ವಾರ ಉತ್ತಮವಾಗಿರುತ್ತೆ. ಇದಕ್ಕೆ ಸಾವಿರಾರು ರೂಪಾಯಿಗಳಾಗುತ್ತವೆ. ಅಂಥದರಲ್ಲಿ ಡೆಟಾಲ್ ಮತ್ತಿತರ ಗಾಯಗಳಿಗೆ ಹಾಕುವ ಕಳಪೆ ದರ್ಜೆಯ ರಾಸಾಯನಿಕ ಸ್ಪಿರಿಟ್‌ಗೆ ಕಲರ್-ಫ್ಲೇವರ್ ಹಾಕಿ ಮಾರುವ ನಕಲಿ ವಿಸ್ಕಿ-ರಮ್-ಬ್ರಾಂದಿಗಳನ್ನು ಕುಡಿದವರು ಸುಡುಗಾಡು ಸೇರುವುದು ನಿಶ್ಚಿತ.

## ಭಾರತದ ಬಿಯರ್ ಪಾನ ಪ್ರಾಣಕ್ಕೆ ಅಪಾಯ

ವಿಶ್ವದಲ್ಲಿ ಮಾನವರು ನೀರಿನ ನಂತರ ಅತಿ ಹೆಚ್ಚು ಕುಡಿಯುವ ಪಾನೀಯ ಬಿಯರ್. ನಂತರದ ಸ್ಥಾನ ಕಾಫಿ, ಟೀ ಪಡೆದುಕೊಂಡಿದೆ. ಮದ್ಯ ಪದಾರ್ಥಗಳಲ್ಲಿ ವೈನ್‌ಗಿಂತ ಉತ್ತಮ ಪಾನೀಯ ಎನಿಸಿದ ಬಿಯರ್‌ನ್ನು ಭಾರತದಲ್ಲಿ ಕುಡಿದ ಯೂರೋಪ್ ನಿಯೋಗ ಹೊಟ್ಟೆ ಉಬ್ಬರಿಸಿ ತೊಳಲಾಡಿ ಹೋದರಂತೆ. ಇಷ್ಟೊಂದು ಕಳಪೆ ದರ್ಜೆಯಲ್ಲಿ ತಯಾರಾಗುವ ಬಿಯರ್ ದಿನಾ ಕುಡಿದರೆ ತಿಂಗಳೊತ್ತಿಗೆ ಹೊಟ್ಟೆ ಉಬ್ಬರಿಸಿ, ಗುಡಾಣವಾಗುತ್ತದೆ. ಹಾಗೇ ವರ್ಷದೊತ್ತಿಗೆ ಪಿತ್ತಜನಕಾಂಗ, ಯಕೃತ್ ನಿಷ್ಕ್ರಿಯವಾಗಿ ಅಜೀರ್ಣ ಸಮಸ್ಯೆಯಿಂದ ಕಿಡ್ನಿ ವೈಫಲ್ಯದಿಂದ ಸಾವಿನಂಚು ತಲುಪಬಹುದು ಎಂದು ಆರೋಪಿಸಿದ್ದಾರೆ.

ಬಿಯರ್ ತಯಾರಿಸುವುದು ಇತರೆಲ್ಲಾ ಮದ್ಯಗಳಿಗಿಂತ ಭಿನ್ನ ಮತ್ತು ಸೂಕ್ಷ್ಮವಾದುದು. ಈ ತಂತ್ರಗಾರಿಕೆ ನುರಿತ ತಜ್ಞರಷ್ಟೆ ನಿರ್ವಹಿಸಬಲ್ಲರು. ಇದಕ್ಕೆ ಸಮಯ, ಶ್ರಮ, ಬುದ್ದಿವಂತಿಕೆ ಮೂರೂ ಅಗತ್ಯ. ಬಿಯರ್‌ನಲ್ಲಿರುವ ಯೀಸ್ಟ್‌ನಂತಹ ಸೂಕ್ಷ್ಮ ಜೀವಾಣುಗಳು ಸಾಯದಂತೆ ಶೈತ್ಯೀಕರಣ ಸದಾ ಇರಬೇಕು. ಇದರಲ್ಲಿ ಹುದುಗಿಸುವ ಆಮ್ಲಜನಕದ ಗಾಳಿಯೂ ಉತ್ತಮ ಮಟ್ಟ ದಲ್ಲಿರಬೇಕು. ಬಹುಮುಖ್ಯವಾಗಿ ಎಷ್ಟೇ ಗರಿಷ್ಠ ಮಟ್ಟದ ಶೈತ್ಯೀಕರಣವಾದರೂ ಬಾಟಲಿಯೊಳಗಿನ ಬಿಯರ್ ಮಂಜುಗಟ್ಟಬಾರದು. ಆ ರೀತಿಯ ತಂತ್ರಗಾರಿಕೆಯಿಂದ ವಿದೇಶದಲ್ಲಿ ಬಿಯರ್ ತಯಾರಿಸಲಾಗುತ್ತದೆ. ಆದರೆ, ದುರಾದೃಷ್ಟದ ಭಾರತದಲ್ಲಿ ಯಾವ ಉತ್ತಮ ತಂತ್ರಗಾರಿಕೆಯೂ




ಇಲ್ಲದೆ, ಕುತಂತ್ರಗಾರಿಕೆಯಿಂದ ಕಳಪೆ ಬಿಯರ್ ತಯಾರಿಸಲಾಗುತ್ತದೆ. ಅರ್ಧ ದಿನ ಫ್ರಿಜ್‌ನಲ್ಲಿಟ್ಟರೂ ಬಿಯರ್ ಮಂಜುಗಟ್ಟಿ ಹೋಗುತ್ತದೆ. ಇನ್ನೂ ಶುದ್ಧ ಬಿಯರ್ ಸ್ವಾದದ ಪರಿಯೆ ಬೇರೆ, ಅದರ ವಗರು ಬಿಯರ್ ಪ್ರಿಯರನ್ನು ಆಕರ್ಷಿಸುತ್ತದೆ. ಆದರೆ ಭಾರತದ ಕಳಪೆ ದರ್ಜೆಯ ಬಿಯರ್ ವಗರು ಕಹಿಯಾಗಿರುತ್ತದೆ.

ಶುದ್ಧವಾದ ಬಿಯರ್‌ನ್ನು ಯೂರೋಪಿನಂತಹ ಶೀತ ವಲಯದಲ್ಲೂ ದಿನಗಟ್ಟಲೆ, ಲೀಟರುಗಟ್ಟಲೆ ಕುಡಿಯುತ್ತಾರೆ. ಮಾಂಸವನ್ನಷ್ಟೆ ಸೇವಿಸುವ ವಿದೇಶಿಯರಿಗೆ, ಅದು ಜೀರ್ಣವಾಗಲು ಕನಿಷ್ಟ ಒಂದು ಮಗ್ ಬಿಯರ್ ಆದರೂ ಕುಡಿಯಬೇಕೆನ್ನುತ್ತಾರೆ. ಆದರೆ ಭಾರತದ ಕಳಪೆ ಬಿಯರ್ ಕುಡಿದರೆ ಒಂದೇ ಬಾಟಲಿಗೆ ಹೊಟ್ಟೆ ಉಬ್ಬರಿಸಿದರೆ, ಎರಡನೇ ಬಾಟಲಿಗೆ ತಲೆ ರಚ್ಚೆಹಿಡಿಯುತ್ತದೆ. ಇನ್ನು ಅಕ್ರಮ ಮದ್ಯ ತಯಾರಿಕಾ ಖದೀಮರು ವಿಸ್ಕಿ, ರಮ್, ಬ್ರಾಂದಿ ಸೇರಿದಂತೆ ಎಲ್ಲಾ ರೀತಿಯ ಮದ್ಯವನ್ನು ಕಳಪೆ ದರ್ಜೆಯ ಸ್ಪಿರಿಟ್‌ಗೆ ಫ್ಲೇವರ್ (ವಾಸನೆ) ಕಲರ್ (ಬಣ್ಣ) ಬಳಸಿ ತಯಾರಿಸುತ್ತಿದ್ದರಾದರೂ, ಬಿಯರ್ ತಯಾರಿಸಲು ಸಾಧ್ಯವಿಲ್ಲ ಎಂದು ಕೈಚೆಲ್ಲಿ ಕೂತಿದ್ದರು. ಯಾವಾಗ ಪಬ್ ಸಂಸ್ಕೃತಿ ಹೆಚ್ಚಾಗಿ ಬ್ಯಾರೆಲ್‌ಗಳಲ್ಲಿ ಬಿಯರ್ ಸಿಗತೊಡಗಿತೊ, ಆಗ ಅದಕ್ಕೆ ಒಂದಿಷ್ಟು ನೀರು, ಸೋಡಾ ಬೆರೆಸಿ ಬಾಟಲಿಗಳಲ್ಲಿ ತುಂಬಿ ಮಾರುವ ಹಂತಕ್ಕೂ ಬಂದಿದ್ದಾರೆ. ಯಾವುದೇ ವಿದೇಶಿ ಸ್ಕಾಚ್ ಬ್ರಾಂಡಿನ ಮದ್ಯವಾಗಲಿ, ಅದನ್ನು ನಕಲಿ ಮಾಡಿ ಯಥೇಚ್ಛವಾಗಿ ಮಾರುವ ದಂಧೆ ಕಳ್ಳಭಟ್ಟಿ ತಯಾರಿಕೆಗಿಂತ ಅವ್ಯಾಹತವಾಗಿ ನಡೆಯುತ್ತಿದೆ. ಇದು ಬೆಂಗಳೂರು, ಮಂಗಳೂರು, ಮೈಸೂರಿನಂತಹ ನಗರವಿರಲಿ, ಹಳ್ಳಿಹಳ್ಳಿಗಳಲ್ಲೂ ಕಳಪೆ ಸ್ಪಿರಿಟ್‌ನಿಂದ ಫ್ಲೇವರ್-ಕಲರ್ ಬಳಸಿ ಬಾಟಲಿ ಕ್ಯಾಪ್ ಯಂತ್ರದಿಂದ ಪ್ಯಾಕ್ ಮಾಡಿ ಸರಬರಾಜು ಮಾಡುತ್ತಿದ್ದಾರೆ. ಇದೆಲ್ಲಾ ಅಬ್ಕಾರಿ ಅಧಿಕಾರಿಗಳಿಗೆ ಗೊತ್ತಿದೆ. ನಕಲಿ ಮದ್ಯ ತಯಾರಕರು ಮತ್ತು ಮಾರಾಟಗಾರರು ಎಷ್ಟು ಸಂಪಾದಿಸುತ್ತಾರೆ ಅನ್ನೋದು ಗೊತ್ತಿದೆ. ಅದೆಲ್ಲಿ ತಯಾರಾಗುತ್ತೆ ಮತ್ತು ಅದನ್ಯಾರೂ ತಯಾರಿಸುತ್ತಾರೆ ಅನ್ನೋದು ಗೊತ್ತಿದೆ. ಆದರೂ, ಅಮೇಧ್ಯ ತಿಂದು ಅಕ್ರಮ ಮದ್ಯಗಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ.

## ಬಾರ್, ವೈನ್‌ಸ್ಟೋರ್ ಮಾಲಿಕರಿಗಿಂತ ಅಧಿಕಾರಿಗಳೇ ಭ್ರಷ್ಟರು

ಕಂಪೆನಿಗಳು ತಯಾರಿಸುವ ಅಸಲಿ ಮದ್ಯಗಳೆ ಆರೋಗ್ಯಕ್ಕೆ ಅಪಾಯಕಾರಿಯಾಗಿದ್ದರೆ, ಇನ್ನೂ ಅಕ್ರಮವಾಗಿ ತಯಾರಾಗುವ ನಕಲಿ ಮದ್ಯಗಳು ಮತ್ತಷ್ಟು ಗಂಡಾಂತರಕಾರಿ. ಕಳ್ಳಭಟ್ಟಿಗೂ ನಕಲಿ ಮದ್ಯಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಇಂಥ ನಕಲಿ ಮದ್ಯಗಳು ರಾಜ್ಯಾದ್ಯಂತ ಎಲ್ಲೆಡೆ ಅವ್ಯಾಹತವಾಗಿ ಮಾರಾಟ ವಾಗುತ್ತಿವೆ. ಇದಕ್ಕೆ ದುರಾಸೆ, ದುಷ್ಟಬುದ್ಧಿಯ ಬಾರ್ ಮತ್ತು ವೈನ್‌ಸ್ಟೋರ್‌ನವರಿಗಿಂತ ಅಬ್ಕಾರಿ ಅಧಿಕಾರಿಗಳ ಭ್ರಷ್ಟತನ ಮೂಲಕಾರಣ. ಹೀಗಾಗಿಯೇ, ನಕಲಿ ಮದ್ಯ ಮಾರಾಟ ಮತ್ತು ಅಕ್ರಮ ನಕಲಿ ಮದ್ಯ ತಯಾರಿಕೆ ಅವ್ಯಾಹತವಾಗಿ ಸಾಗುತ್ತಿದೆ. ಕಳೆದ ಜನವರಿ.17 ರಂದು ಬೆಂಗಳೂರಿನಲ್ಲಿ ಅಬಕಾರಿ ಇಲಾಖೆಯ ಉಪ ಆಯುಕ್ತ ಜಗದೀಶ್ ನಾಯಕ್, ಸೂಪರಿಂಟೆಂಡೆಂಟ್ ತಮ್ಮಣ್ಣ, ಕಾನ್ಸ್ಟೆಬಲ್ ಲಕ್ಕಪ್ಪ ಅವರುಗಳು ಬ್ಯಾಟರಾಯನಪುರದಲ್ಲಿ 25 ಲಕ್ಷರೂಪಾಯಿ ಲಂಚ ಪಡೆಯುವ ಲೋಕಾಯುಕ್ತ ಪೋಲೀಸರಿಗೆ ಸಿಕ್ಕಿಬಿದ್ದು ಜೈಲು ಸೇರಿದ್ದಾರೆ. ಮೈಕ್ರೋ ಬ್ರೂವರಿ ಅಂದರೆ ಬಿಯರ್ ತಯಾರಕ ಘಟಕ ಮತ್ತು ಲಾಡ್ಜ್-ಬಾರ್-ಬೋರ್ಡಿಂಗ್ ಇರುವ ಹೋಟೆಲ್‌ಗಳಿಗೆ ನೀಡುವ 'ಸಿಎಲ್-7' ಎಂಬಪರವಾನಗಿ ನೀಡಲು 2.30 ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತದ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

'ಕುಡುಕರಿಗೆ ವಿಸ್ಕಿಯಾದರೂ ಕುಡಿಸು, ವಿಷವಾದರೂ ಕುಡಿಸು. ನಮಗೆ ಬರೋ ಮಾಮೂಲಿ ಕೊಡು. ಹಿಂದಿನಷ್ಟು ಕಡಿಮೆ ಕೊಟ್ಟರೆ ಆಗೊಲ್ಲ. ಮಾಮೂಲಿ ಜಾಸ್ತಿ ಕೊಡಬೇಕು' ಎಂಬಿತ್ಯಾದಿ ಧಮಕಿ ಹಾಕುವ ಅಬ್ಕಾರಿ ಅಧಿಕಾರಿಗಳ ದುಂಡಾವರ್ತನೆಯಿಂದ ಯಾವ ಬಾರ್ ಮತ್ತು ವೈನ್‌ಸ್ಟೋರ್ ಮಾಲಿಕನೂ ಸರ್ಕಾರಕ್ಕೆ ತೆರಿಗೆ ವಂಚಿಸದೆ, ನಕಲಿ ಮದ್ಯ ಮಾರದೆ, ಲಾಭದ ಮದ್ಯ ವ್ಯವಹಾರ ನಡೆಸಲು ಸಾಧ್ಯವಿಲ್ಲ. ಹೀಗಾಗಿ ಇಂಥ ಕಳಪೆ-ನಕಲಿ ಮದ್ಯಗಳನ್ನು ಬಹುತೇಕ ಎಲ್ಲಾ ಮದ್ಯದಂಗಡಿ ಮತ್ತು ಬಾರ್‌ಗಳಲ್ಲಿ ಸೇವಿಸಿದ ಕುಡುಕರು ಬಹುಬೇಗ ಲಿವರ್ ಸಂಬಂಧಿ ಖಾಯಿಲೆಗಳಾದ ಜಾಂಡೀಸ್, ಸೋರಿಯಾಸಿಸ್, ಕಿಡ್ನಿಯಲ್ಲದೆ, ಇತ್ತೀಚೆಗೆ ಹೃದಯ ಸಂಬಂಧಿ ಸಮಸ್ಯೆಗಳಿಂದ ಬಹುಬೇಗ ಮಸಣದ ಹಾದಿ ಹಿಡಿಯುತ್ತಿದ್ದಾರೆ.



## ಸಾಯುವವರಲ್ಲಿ ಬಡ ಕಾರ್ಮಿಕರೆ ಹೆಚ್ಚು

ಕಳಪೆ–ನಕಲಿ ಮದ್ಯ ಸೇವನೆ ಯಿಂದ ಹೆಚ್ಚು ಸಂಕಷ್ಟಕ್ಕೀಡಾಗುತ್ತಿರುವುದು ಬಡ– ಮಧ್ಯಮ ವರ್ಗದ ಕುಟುಂಬ. ಅದರಲ್ಲೂ ಕೂಲಿ ಕಾರ್ಮಿಕರ ಕುಟುಂಬಗಳು ನಕಲಿ ಮದ್ಯದ ಕರಾಮತ್ತಿಗೆ ನಲುಗಿ ಹೋಗು ತ್ತಿವೆ. 10 ರಿಂದ 20 ರೂಪಾಯಿಗೆ ಸಾರಾಯಿ ಕುಡಿಯುತ್ತಿದ್ದ ಜನ ದುಪ್ಪಟ್ಟು– ಮುಪ್ಪಟ್ಟು ಹಣ ಕೊಟ್ಟು ಕಳಪೆ ದರ್ಜೆಯ ಬಾಟಲಿ ಮದ್ಯ ಸೇವಿಸಿ, ಒಂದು ಕಡೆ ಹಣ ಮತ್ತೊಂದು ಕಡೆ ಪ್ರಾಣ ಎರಡನ್ನೂ ಕಳೆದುಕೊಳ್ಳು ತ್ತಿದ್ದಾರೆ. ಅಕಾಲಿಕವಾಗಿ ಅನಾರೋಗ್ಯ ಕ್ಕೀಡಾದರೆ, ಔಷಧಿ ಖರ್ಚಿಗಿರಲಿ, ಊಟದ ಖರ್ಚಿಗೂ ಹಣವಿಲ್ಲ ದಂತೆ ಇಡೀ ಕುಟುಂಬ ಉಪವಾಸದಿಂದ ನರಳ ಬೇಕಾಗುತ್ತದೆ. ದುಡಿಯುವ ಯಜಮಾನನ ಪ್ರಾಣವೇ ಹೋಗಿಬಿಟ್ಟರಂತೂ ಒಂದು ಇಡೀ ಕುಟುಂಬ ಬೀದಿಗೆ ಬೀಳುತ್ತದೆ.

ಕುಟುಂಬದ ಜವಾಬ್ದಾರಿಯನ್ನು ಮನೆ ಯಜಮಾನಿ ಸಾತ್ವಿಕ ಕೆಚ್ಚಿನಿಂದ ಕೂಲಿ ಮಾಡಿ ಮಕ್ಕಳನ್ನು ಒಳ್ಳೆಯ ರೀತಿಯಲ್ಲಿ ಓದಿಸಿ ಬೆಳೆಸಿದರೆ, ಆ ಮಕ್ಕಳು ಸಮಾಜಕ್ಕೆ ಸತ್ಪ್ರಜೆಗಳಾಗಿ, ದೇಶದ ಅಭಿವೃದ್ಧಿಗೆ ಕೊಡುಗೆಯಾಗಿ ಮಾರ್ಪಡುತ್ತವೆ. ಹಾಗಲ್ಲದೆ ಯಜಮಾನಿಗೆ ಕುಟುಂಬ ಸಲಹುವ ಧೈರ್ಯ ಸಾಲದಿದ್ದರೆ, ಆತ್ಮಹತ್ಯೆ ಬಗ್ಗೆ ಯೋಚಿಸುತ್ತಾಳೆ. ತಾನು ಸತ್ತ ನಂತರ ಮಕ್ಕಳು ಅನಾಥರಾಗಿ ನರಳಬಾರದೆಂಬ ಮೂರ್ಖ ಯೋಚನೆ ಬಂದರಂತೂ, ಅವರಿಗೆ ವಿಷ ಹಿಕ್ಕಿಯೋ, ಬೆಂಕಿ ಹಾಕಿಯೊ, ನೀರಿಗೆ ಹಾಕಿಯೊ ಸಾಯಿಸಿ ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇತ್ತೀಚೆಗೆ ಹೆತ್ತ ತಾಯಿಯೆ ಅಮಾನುಷವಾಗಿ ಮಕ್ಕಳನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಳ್ಳುವ ಪಿಡುಗು ಹೆಚ್ಚಾಗಿರುವುದು ಇಂಥ ಮದ್ಯವ್ಯಸನದ ಸಮಸ್ಯೆ ಯಿಂದ. ಆದರೆ ಇದ್ಯಾವ ಯೋಚನೆಯೂ ಇಲ್ಲದ ಸರ್ಕಾರ, ಅಧಿಕಾರಿಗಳು, ವ್ಯಾಪಾರಿಗಳು ಮದ್ಯದಿಂದ ಹಣಗೆಬರುವ ಕುಕೃತ್ಯ ಮುಂದುವರೆಸೇ ಇದ್ದಾರೆ. ಬಡ ಜನರ ಹೆಣದಲ್ಲೂ ಹಣ ಮಾಡುವುದೆಂದರೆ ಹೀಗೇನಾ?!

ಸಾರಾಯಿ ನಿಷೇಧದ ಹಿಂದೆ ನಕಲಿ ಮತ್ತು ಕಳಪೆ ದರ್ಜೆಯ ಮದ್ಯ ತಯಾರಿಕೆಗೆ ಬೇಕಾದ ಸ್ಪಿರಿಟ್ ಅಭಾವ ಕಾರಣವೆನ್ನಲಾಗುತ್ತಿದೆ. ಸರ್ಕಾರ ಸಾರಾಯಿ ಗುತ್ತಿಗೆದಾರರಿಗೆ ಅಗತ್ಯವಾದ ರೆಕ್ಟಿಫೈಟ್ ಸ್ಪಿರಿಟನ್ನು ಸರಬರಾಜು ಮಾಡುತ್ತಿದ್ದಾಗ್ಯೂ, ಸರ್ಕಾರಕ್ಕೆ ತೆರಿಗೆ ವಂಚಿಸಲು ಮತ್ತು ರೆಕ್ಟಿಫೈಟ್ ಸ್ಪಿರಿಟ್‌ಗಿಂತ ಕಡಿಮೆ ದರದಲ್ಲಿ ಸಿಗುವ ಸ್ಪಿರಿಟನ್ನು ಪೌಲ್ಟ್ರಿಫೀಡ್ ತಯಾರಕರಿಂದ ಖರೀದಿಸಿ ನಕಲಿ ಸಾರಾಯಿ ಮಾರುತ್ತಿದ್ದರು. ವಿಸ್ಕಿ, ಬ್ರಾಂದಿ, ರಮ್‌ಗೆ ಸೇರಿಸುವ ರೆಕ್ಟಿಫೈಟ್ ಸ್ಪಿರಿಟ್ ಸಾರಾಯಿ ಕುಡಿದವರ ಆರೋಗ್ಯ ಅಷ್ಟೇನೂ ಹಾಳಾಗುತ್ತಿರಲಿಲ್ಲ. ಹೊಟ್ಟೆ ಒಳಗಿರುವ ಕೆಟ್ಟ ಹುಳ, ಕಚಡಾಗಳು ಒಂದು ಬಾರಿ ಕುಡಿದರೆ ಸ್ವಚ್ಛವಾಗು ತ್ತಿದ್ದವು. ಈ ಹಿಂದಿನ ಸಾರಾಯಿ ಮಹಿಮೆ ಕಂಡೇ 'ಸರ್ವರೋಗಕ್ಕೂ ಸಾರಾಯಿ ಮದ್ದು' ಅಂತ ಉತ್ಪ್ರೇಕ್ಷಿತವಾಗಿ ಹೊಗಳಲಾಗುತ್ತಿತ್ತು.

ಯಾವಾಗ ಸಾರಾಯಿ ಗುತ್ತಿಗೆದಾರರು ಸರ್ಕಾರ ನೀಡುವ ಉತ್ತಮ ದರ್ಜೆ ರೆಕ್ಟಿಫೈಡ್ ಸ್ಪಿರಿಟನ್ನು ವಿಸ್ಕಿ, ಬ್ರಾಂದಿ, ರಮ್ ತಯಾರಿಸುವ ಕೆಲ ಡಿಸ್ಟಿಲರಿ ಘಟಕಗಳಿಗೆ ಅಕ್ರಮವಾಗಿ ಮಾರಿಕೊಂಡು ಕೋಳಿಫಾರಂನ ಆಹಾರ ತಯಾರಿಕೆಗೆ ಬೇಕೆಂದು ಖರೀದಿಸಿದ ಕಾಕಂಬಿಯಿಂದ ಬಂದ ತೃತೀಯ ದರ್ಜೆಯ ಸ್ಪಿರಿಟನ್ನು ಸಾರಾಯಿಗಳಿಗೆ ಅವ್ಯಾಹತವಾಗಿ ಬಳಸ ತೊಡಗಿದರೊ ಆಗ ಸಾರಾಯಿ ಕುಡುಕರ ಆರೋಗ್ಯ ಹದಗೆಟ್ಟಿತು. ಅಕ್ರಮ ಸಾರಾಯಿ ತಯಾರಿಕೆಗೆ ಬೇಕಾದ ಸ್ಪಿರಿಟ್‌ಗಾಗಿಯೆ ನಾಯಿಕೊಡೆಗಳಂತೆ ಲೆಟರ್ ಪ್ಯಾಡ್‌ನಲ್ಲಿ ಮಾತ್ರವಿರುವ ಪೌಲ್ಟ್ರಿಫೀಡ್ ತಯಾರಿಕಾ ಘಟಕಗಳು ಹುಟ್ಟಿಕೊಂಡವು. ಇಂಥ ಕಳಪೆ ದರ್ಜೆಯ ಸ್ಪಿರಿಟ್‌ಗೂ ಅಭಾವ ಸೃಷ್ಟಿಯಾದಾಗ ಸಾರಾಯಿ ನಿಷೇಧಿಸಿದ ಸರ್ಕಾರ, ತಾನೇನೊ ಸಮಾಜಕ್ಕೆ ಒಳ್ಳೇದು ಮಾಡಿದ್ದೇವೆಂದು ತನ್ನ ಬೆನ್ನು ತಾನು ತಟ್ಟಿಕೊಳ್ಳುತ್ತಿದೆ. ವಾಸ್ತವವಾಗಿ ಸಾರಾಯಿ ನಿಷೇಧಿಸಿದ್ದರಿಂದ ಸಮಾಜದ ಮೇಲೆ ಎಂಥ ಪರಿಣಾಮ ಬೀರುತ್ತಿದೆ ಎಂಬುದನ್ನು ಮುಂದಿನ ಸಂಚಿಕೆಯಲ್ಲಿ ವಿಶ್ಲೇಷಿಸೋಣ. ಒನ್ ಮೋರ್ ಪೆಗ್‌ಗೆ ವೇಯ್ಟ್ ಪೀಸ್....!

## ಭೂ ಕಬಳಿಕೆಯಲ್ಲಿ ಪುಢಾರಿಗಳನ್ನು ಮೀರಿಸುತ್ತಿರುವ ಸಾಫ್ಟ್‌ವೇರ್ ಕಿಂಗ್

# ಇನ್ಫೋಸಿಸ್ ನಾರಾಯಣಮೂರ್ತಿ ಕರ್ಮಕಾಂಡ



● ಎಸ್.ಪ್ರಕಾಶ್

ಇನ್ಫೋಸಿಸ್ ನಾರಾಯಣಮೂರ್ತಿ ರಾಜಕೀಯ ಪುಢಾರಿಗಳನ್ನೂ ಮೀರಿಸುವಂತೆ ಭೂ ಕಬಳಿಕೆ ಮಾಡುತ್ತಿದ್ದಾರಾ? ಹೀಗೊಂದು ಪ್ರಶ್ನೆ ಮೂರು ದಶಕಗಳಿಂದಲೂ ಕೇಳಿ ಬರುತ್ತಿತ್ತು. ಅದೀಗ ನಿಜವಾಗುವಂಥ ನಿಖರ ಸುದ್ದಿಗಳು ಹೊರ ಬರುತ್ತಿವೆ. ಇತ್ತೀಚೆಗೆ ಆನೇಕಲ್ ತಾಲೂಕಿನಲ್ಲಿ ಸರ್ಕಾರ ರಿಯಾಯಿತಿ ದರದಲ್ಲಿ ಕೈಗಾರಿಕಾಭಿವೃದ್ಧಿ ಮಂಡಳಿ ನೀಡಿದ್ದ 53.5 ಎಕರೆ ಭೂಮಿಯನ್ನು ಇನ್‌ಫೋಸಿಸ್ ಸಂಸ್ಥೆ ರಿಯಲ್ ಎಸ್ಟೇಟ್ ಸಂಸ್ಥೆಯಾದ ಬ್ಲೂ ಹೋಮ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಅಕ್ರಮವಾಗಿ ಭಾರಿ ಬೆಲೆಗೆ ಮಾರಿಕೊಂಡಿದೆ. ಇದಕ್ಕಾಗಿ 40 ಸೇಲ್ ಡೀಡ್ ಮಾಡಿ ಸರ್ಜಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಇನ್‌ಫೋಸಿಸ್ ಸಂಸ್ಥೆಯು ಬ್ಲೂ ಹೋಮ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಮಾರುವ ಅಗ್ರಿಮೆಂಟ್ ಮಾಡಿಕೊಟ್ಟಿದೆ. ಇಂಥ ಅಕ್ರಮ ಭೂ ವ್ಯಾಪಾರವನ್ನು ತಡೆಯಬೇಕಿದ್ದ ಸರ್ಜಾಪುರ ಉಪನೋಂದಣಾಧಿಕಾರಿ ರವಿ ಸಂಕನಗೌಡ ಎಂಬ ಭ್ರಷ್ಟ ಅಧಿಕಾರಿ ಅಮೇಧ್ಯದ ರುಚಿಗೆ ಮಾರುಹೋಗಿ, ಅಕ್ರಮ ವ್ಯಾಪಾರಕ್ಕೆ ಸಹಕಾರ ನೀಡಿ ಈಗ ಅವಮಾನತು ಶಿಕ್ಷೆ ಅನುಭವಿಸುತ್ತಿದ್ದಾನೆ.

70 ಗಂಟೆಗಳ ಕಾಲ ಕೆಲಸ ಮಾಡಿದರೆ, ದೇಶವನ್ನು ಅಭಿವೃದ್ಧಿಗೆ ತರಬಹುದು ಅಂತ ಮಹಾ ಸಾಚಾ ರೀತಿ ನೀತಿ ಪಾಠ ಹೇಳಿದ್ದ  ಐಟಿ ದೈತ್ಯ ಇನ್ಫೋಸಿಸ್ ಒಡೆಯ ಎನ್.ಆರ್.ನಾರಾಯಣಮೂರ್ತಿಗೆ ಈಗ ಭೂಮಿ ಸಂಕಷ್ಟ ಶುರುವಾಗಿದೆ. ಹೀಗ್ಗೆ 45 ವರ್ಷಗಳ ಹಿಂದೆ, ಅಂದರೆ 1981ರ ಜುಲೈ.2ರಂದು ನಾರಾಯಣಮೂರ್ತಿ ತಮ್ಮ ಸ್ನೇಹಿತರಾದ ನಂದನ್ ನೀಲೇಕಣಿ, ಕ್ರಿಸ್ ಗೋಪಾಲಕೃಷ್ಣನ್, ಶಿಬುಲಾಲ್, ದಿನೇಶ್ ಮತ್ತು ಮೋಹನದಾಸ್ ಪೈ ಜೊತೆ ಸೇರಿ ಕೇವಲ 10,000 ರುಪಾಯಿ ಬಂಡವಾಳದೊಂದಿಗೆ ಇನ್ಫೋಸಿಸ್ ಸ್ಥಾಪಿಸಿ, ಸಾವಿರಾರು ಕೋಟಿ ರೂಪಾಯಿ ದುಡಿದರೂ, ಸರ್ಕಾರ ಬಡ ರೈತರಿಂದ ಕಡಿಮೆ ಬೆಲೆಗೆ ಕೊಟ್ಟ 53 ಎಕರೆ ಭೂಮಿಯನ್ನು ಅಕ್ರಮವಾಗಿ ಮಾರಿಕೊಳ್ಳಲು ಯತ್ನಿಸಿರುವುದು ನಾಚಿಕೆಗೇಡಿನ ಸಂಗತಿ.

ಇನ್‌ಫೋ (ಇನ್‌ಫಾರ್ಮೇಶನ್) ಸಿಸ್ ಎಂದರೆ (ಸಿಸ್ಟಮ್) ಅನ್ನೋ ಅರ್ಥದಲ್ಲಿ 'ಮಾಹಿತಿ ವ್ಯವಸ್ಥೆ' ಎಂಬ ಐಟಿ ದಿಗ್ಗಜ ಸಂಸ್ಥೆ ಕಟ್ಟಿದ ಈ ಆರು ಜನರಿಂದ ಇಂದು ಇನ್ಫೋಸಿಸ್ ಸಂಸ್ಥೆಯಲ್ಲಿ 1,00,000ಕ್ಕೂ ಹೆಚ್ಚು ಕೆಲಸಗಾರರಿದ್ದಾರೆ. ಅಮೆರಿಕಾ ಯುರೋಪ್, ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳಲ್ಲಿ ಕಾರ್ಪೋರೇಟ್ ಕಛೇರಿಗಳನ್ನು ಹೊಂದಿರುವ ಇನ್‌ಫೋಸಿಸ್ ಸಂಸ್ಥೆ ವಿಶ್ವಾದ್ಯಂತ ಮಾಹಿತಿ ತಂತ್ರಜ್ಞಾನ ಮತ್ತು ಸಂಬಂಧಿತ ಸೇವೆಗಳಲ್ಲಿ ಪಾರಮ್ಯ ಮೆರೆದಿದೆ.

ನಾಗಾವಾರ ರಾಮರಾವ್ ಎಂಬುವರ ಮಗನಾದ ಎನ್.ಆರ್. ನಾರಾಯಣಮೂರ್ತಿ ಬಹಳ ಬಡತನದಲ್ಲಿ ಬೆಳೆದು ಓದಿ ವಿದ್ಯಾವಂತರಾಗಿ, ತಮ್ಮ ದೂರದೃಷ್ಟಿ, ಉತ್ತಮ ನಿರ್ವಾಹಣಾ ನೈಪುಣ್ಯ ಮತ್ತು ದಿಟ್ಟ ಆಡಳಿತತ್ವದಿಂದ ಇನ್ಪೋಸಿಸ್ ಎಂಬ ಸಣ್ಣ ಉದ್ಯಮವನ್ನು ವಿಶ್ವ ಮಟ್ಟಕ್ಕೆ ಬೆಳೆಸಿದರು. 1981ರಿಂದ 2002ರ ಮಾರ್ಚ್‌ವರೆಗೂ ಇನ್ಪೋಸಿಸ್ ಸಂಸ್ಥೆಯ ಕಾರ್ಯಾಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ನಾರಾಯಣಮೂರ್ತಿ ಕೇವಲ 21 ವರ್ಷದಲ್ಲಿ ಕೇವಲ ಹತ್ತು ಸಾವಿರ ರೂಪಾಯಿಯ ಉದ್ಯಮವನ್ನು ಲಕ್ಷಾಂತರ ಕೋಟಿ ವ್ಯವಹಾರದ ಸಂಸ್ಥೆಯನ್ನಾಗಿಸಿದರು. ಇವರ ಕಾರ್ಯ ವೈಖರಿ ಮತ್ತು ಅತ್ಯುತ್ತಮ ವಾಗ್ಝರಿಗಳಿಂದ ವಿಶ್ವದಾದ್ಯಂತ ಜನರ ಮನಸೂರೆಗೊಂಡಿದ್ದರು ನಾರಾಯಣಮೂರ್ತಿ. ಅಳಿಯ ಋಷಿ ಸುನಕ್ ಬ್ರಿಟನ್ ಪ್ರಧಾನಿಯಾಗಲು ಸಾಕಷ್ಟು ಹಣ ಸುರಿದರೆಂಬ ಆರೋಪ ಕೇಳಿ ಬಂದಿತ್ತು. ಇದೇನೆ ಇರಲಿ, ಇವರ ಮಗಳು ಅಕ್ಷತಾ ಮತ್ತು ಮಗ ರೋಹನ್ ಮತ್ತು ಪತ್ನಿ ಶ್ರೀಮತಿ ಸುಧಾ ಮೂರ್ತಿ ತಮ್ಮ ಸಮಾಜ ಸೇವಾ ಮನೋಭಾವದಿಂದ ಜನರ ಪ್ರೀತಿ ಸಂಪಾದಿಸಿದ್ದರು. ಹೀಗೇ ಹಣ–ಜನ ಸಂಪಾದಿಸಿ ನೆಮ್ಮದಿಯಾಗಿರಬಹುದಾಗಿದ್ದ ನಾರಾಯಣಮೂರ್ತಿ ಕುಟುಂಬದ ಇನ್‌ಫೋಸಿಸ್ ಸಂಸ್ಥೆ ಬೆರಳೆಣಿಕೆ ಕೋಟಿಗಳಲ್ಲಿ ಬಡ ರೈತರ ಭೂಮಿ ಪಡೆದು, ಈಗ 250 ಕೋಟಿ ರೂಪಾಯಿಗೆ ಮಾರಿಕೊಳ್ಳುವ ದುರ್ಬುದ್ಧಿ ಬರಬಾರದಿತ್ತು.

2001–2002ರ ಸಾಲಿನಲ್ಲಿ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಬೆಂಗಳೂರನ್ನು ವಿಶ್ವದ ನಂಬರ್ ಒನ್ ಐಟಿ ಹಬ್ ಮಾಡಬೇಕೆಂದು ಬೆಂಗಳೂರು ಹೊರವಲಯದ ಆನೇಕಲ್ ತಾಲೂಕಿನಲ್ಲಿ ನೂರಾರು ಎಕರೆಗಳಷ್ಟು ಭೂಮಿಯನ್ನು ಇನ್‌ಫೋಸಿಸ್ ಸಂಸ್ಥೆಗೆ ಸಾಫ್ಟ್‌ವೇರ್ ಕಂಪೆನಿ ಸ್ಥಾಪಿಸಲು ನೀಡಿದ್ದರು. ಆನೇಕಲ್‌ನ ಬಡ ರೈತರಿಂದ ಎಕರೆಗೆ ಕೆಲ ಲಕ್ಷಗಳಲ್ಲಿ ಭೂಸ್ವಾಧೀನ ಮಾಡಿಕೊಂಡ ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿ ಕೊಟ್ಟ ನೂರಾರು ಎಕರೆ ಭೂಮಿಯಲ್ಲಿ 53.5 ಎಕರೆಯಲ್ಲಿ ಯಾವುದೇ ಕೈಗಾರಿಕೆ ಆರಂಭಿಸದೆ, ಬೀಳು ಬಿಟ್ಟಿದ್ದರು. ಅದನ್ನು ಸರ್ಕಾರಕ್ಕೆ ಒಪ್ಪಿಸದೆ, ರಿಯಲ್ ಎಸ್ಟೇಟ್ ಸಂಸ್ಥೆಗೆ ಮಾರಿಕೊಳ್ಳುವುದೆಂದರೆ ನಿಜಕ್ಕೂ ನಿರ್ಲಜ್ಜಕರ. ಇನ್‌ಫೋಸಿಸ್‌ನಂಥ ಸಂಸ್ಥೆಯಿಂದ ಇಂಥ ಮರಾಮೋಸ ಆಗುತ್ತೆ ಅಂತ ಯಾರೂ ನಿರೀಕ್ಷಿಸಿರಲಿಲ್ಲ. ಅದರಲ್ಲೂ ನಾರಾಯಣಮೂರ್ತಿ ಮತ್ತು ಡಾ.ಸುಧಾಮೂರ್ತಿ ದಂಪತಿ ಕೊಡುಗೈ ದಾನಿಗಳು ಅನ್ನೋ ಹೆಗ್ಗಳಿಕೆ ಸಂಪಾದಿಸಿದವರು. ಹಾಗೇ, ಅವರ ನಡವಳಿಕೆ ಸಹ ಇತ್ತು. ಆದರೆ,ಈಗ ಬ್ಲೂ ಹೋಮ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಸರ್ಕಾರಿ ಭೂಮಿಯನ್ನು ಮಾರಿಕೊಳ್ಳುವುದಕ್ಕಿಂತ ಅಸಹ್ಯಕರವಾದುದು ಕೋರ್ಟ್‌ನಿಂದ ಬಾರದ ಸುಳ್ಳು ಆದೇಶವನ್ನು ಸೃಷ್ಟಿಸಿರುವುದು.



ಕೆಐಎಡಿಬಿ ಅಥವ ಯಾವುದೇ ಸರ್ಕಾರಿ ಸಂಸ್ಥೆಯಿಂದ ಪಡೆದ ಭೂಮಿಯನ್ನು ಉದ್ದೇಶಿತ ಕಾರ್ಯಕ್ಕೆ ಬಳಸಿಕೊಳ್ಳದಿದ್ದರೆ, ಅದನ್ನು ಸರ್ಕಾರಕ್ಕೆ ವಾಪಸ್ ಕೊಡಬೇಕು. ಇಲ್ಲವೇ, ನ್ಯಾಯಾಲಯದಿಂದ ಭೂಮಿ ಮಾರಾಟ ಮಾಡುವ ಬಗ್ಗೆ ಆದೇಶ ತರಬೇಕು. ಇದಕ್ಕೆ ಕೈಗಾರಿಕೆ ಸ್ಥಾಪಿಸಲು ಸಾಧ್ಯವಾಗದ ಆರ್ಥಿಕ ಪರಿಸ್ಥಿತಿ ಮತ್ತು ಸೂಕ್ತ ಕಾರಣಗಳನ್ನು ನೀಡಿ, ನ್ಯಾಯಾಲಯದಿಂದ ಭೂಮಿ ಮಾರಾಟ ಮಾಡುವ ಆದೇಶ ಪಡೆಯಬೇಕು. ಆದರೆ, ಇನ್‌ಫೋಸಿಸ್‌ನಂಥ ಐಟಿ ದೈತ್ಯ ಸಂಸ್ಥೆ ಆನೇಕಲ್‌ನಲ್ಲಿ ಸರ್ಕಾರ ನೀಡಿದ್ದ ಭೂಮಿಯನ್ನು ಮಾರಾಟ ಮಾಡಲು ನ್ಯಾಯಾಲಯ ಆದೇಶ ನೀಡಿದೆ ಅಂತ ಸುಳ್ಳು ಆದೇಶದ ಪ್ರತಿ ನೀಡಿ ಸರ್ಜಾಪುರ ಉಪ ನೋಂದಣಾಧಿಕಾರಿಯಿಂದ ಬ್ಲೂ ಹೋಮ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಮಾರಾಟ ಮಾಡಿದ್ದರು.

, ರಾಜ್ಯ ನೋಂದಣಿಮಹಾಪರಿವೀಕ್ಷಕ ಹಾಗೂ ಮುದ್ರಾಂಕಗಳ ಆಯುಕ್ತ ಮುಲ್ಲೈ ಮುಗಿಲನ್ ದಾಖಲೆ ಪರಿಶೀಲನೆ ಮಾಡಿದಾಗ ಇನ್‌ಫೋಸಿಸ್ ಅಕ್ರಮ ಬಯಲಿಗೆ ಬಂತು. ಜೊತೆಗೆ, ಬೆಂಗಳೂರಿನ ಬಾಣಸವಾಡಿ, ವರ್ತೂರು ಮತ್ತು ಹಲಸೂರು ಉಪನೋಂದಣಾಧಿಕಾರಿಗಳ ಕಚೇರಿಯಲ್ಲೂ, ಕಾವೇರಿ ತಂತ್ರಾಂಶ–2ಕ್ಕೆ ನ್ಯಾಯಾಲಯ ಆದೇಶ ನೀಡಿದೆ ಎನ್ನುವ ನಕಲಿ ಪತ್ರ ಸೃಷ್ಟಿಸಿ ಭೂ ಮಾರಾಟಕ್ಕೆ ನೋಂದಣಿ ಮಾಡಿಕೊಟ್ಟಿರುವುದು ಬೆಳಕಿಗೆ ಬಂತು. ತಕ್ಷಣವೇ, ರಾಜ್ಯ ನೋಂದಣಿ ಮಹಾಪರಿವೀಕ್ಷಕ ಹಾಗೂ ಮುದ್ರಾಂಕಗಳ ಆಯುಕ್ತ ಮುಲ್ಲೈ ಮುಗಿಲನ್ ಉಪನೋಂದಣಾಧಿಕಾರಿಗಳಾದ ರವಿ ಸಂಕನಗೌಡ, ಎನ್.ಸತೀಶ್‌ಕುಮಾರ್, ಶ್ರೀಧರ್ (ಪ್ರಭಾರ ಉಪ ನೋಂದಣಾಧಿಕಾರಿ), ಗಿರೀಶ್ ಚಂದ್ರ, ಆರ್.ಪ್ರಭಾವತಿ ಅವರುಗಳನ್ನು ಅಮಾನತುಗೊಳಿಸಿ, ವಿಚಾರಣೆಗೆ ಆದೇಶಿಸಿದ್ದಾರೆ. ಅಮಾನತುಗೊಂಡ ಐವರು ಉಪನೋಂದಣಾಧಿಕಾರಿಗಳಲ್ಲಿ ಒಬ್ಬರು ನಿವೃತ್ತರಾಗಿದ್ದಾರೆ.

ಸಾರ್ವಜನಿಕವಾಗಿ ಬಿಂಬಿಸಿಕೊಳ್ಳುವ ನಾರಾಯಣಮೂರ್ತಿ ದಂಪತಿ, ತಮ್ಮ ಇನ್‌ಫೋಸಿಸ್ ಸಂಸ್ಥೆಯ ಲಾಭಕ್ಕೆ ಕಟ್ಟುವ ತೆರಿಗೆಯಲ್ಲಿ ಶೇ.3 ರಷ್ಟು ಸಾಮಾಜಿಕ ಸೇವೆಗೆ ಕೊಡುವ ಸಿಎಸ್‌ಆರ್ ನಿಧಿಯನ್ನು ಬೇರೆ ಸೇವಾಸಂಸ್ಥೆ (ಎನ್‌ಜಿಓ) ಗಳಿಗೆ ಕೊಡುವ ಬದಲು ತಾವೇ ಸ್ಥಾಪಿಸಿದ "ಇನ್‌ಫೋಸಿಸ್ ಫೌಂಡೇಷನ್" ಹೆಸರಿನಡಿ ಪಡೆದುಕೊಳ್ಳುತ್ತಿದ್ದಾರೆ. ಪ್ರತಿವರ್ಷ ಬರುವ ಸಾವಿರಾರು ಕೋಟಿ ರೂಪಾಯಿ ಸಿಎಸ್‌ಆರ್ ಹಣದಿಂದಲೇ ಕೊಡಗಿನ ನೆರೆಪೀಡಿತ ಜನರಿಗೆ ಮನೆ ಕಟ್ಟಿಕೊಡುವುದೂ ಸೇರಿದಂತೆ ಹಲವು ಸಾಮಾಜಿಕ ಕಾರ್ಯಕ್ರಮಗಳನ್ನು "ಇನ್‌ಫೋಸಿಸ್ ಫೌಂಡೇಷನ್" ಅಧ್ಯಕ್ಷೆ ಡಾ.ಸುಧಾಮೂರ್ತಿ ಮಾಡುತ್ತಿದ್ದಾರೆ. ಇದರಿಂದ ಜನ



ಸಮೂಹದಲ್ಲಿ ಕೊಡುಗೈ ದಾನಿ ಅಂತ ಹೊಗಳಿಸಿಕೊಳ್ಳುತ್ತಿದ್ದಾರೆ.

1981ರ ಜುಲೈ ನಿಂದ 2002ರ ಮಾರ್ಚ್‌ವರೆಗೂ ಇನ್ಫೋಸಿಸ್ ಸಂಸ್ಥೆಯ ಕಾರ್ಯಾಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯನ್ನು ನಾರಾಯಣಮೂರ್ತಿ ತಮ್ಮ ಸಹ ಪಾಲುದಾರ ನಂದನ್ ನೀಲೇಕಣಿಯವರಿಗೆ ಹಸ್ತಾಂತರಿಸಿದ ನಂತರ, ವ್ಯವಸ್ಥಾಪಕ ಮಂಡಳಿಯ ಅಧ್ಯಕ್ಷ ಮತ್ತು ಹಿತಚಿಂತಕ ಅಧಿಕಾರಿಯ ಹುದ್ದೆಯಲ್ಲಿ ಮುಂದುವರೆದಿದ್ದರು. ಕಳೆದ 2011ರ ಆಗಸ್ಟ್ 19 ರಂದು ತಮ್ಮ 65ನೇ ವಯಸ್ಸಿನಲ್ಲಿ ವ್ಯವಸ್ಥಾಪಕ ಮಂಡಳಿಯ ಅಧ್ಯಕ್ಷ ಸ್ಥಾನದಿಂದಲೂ ನಿವೃತ್ತಿ ಹೊಂದಿ, ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಆದರೆ, ಇಂಥ ಅಕ್ರಮ ವ್ಯವಹಾರಗಳು ಇನ್‌ಫೋಸಿಸ್‌ನಲ್ಲಿ ನಡೆಯುತ್ತಿರುವುದು ಗೊತ್ತಿಲ್ಲದೆ ಏನೂ ಇಲ್ಲ. ಗೊತ್ತಿದ್ದೂ ಸುಮ್ಮನಿರುವುದು ಸರಿಯಲ್ಲ. ಮಾತೆತ್ತಿದರೆ, ಬೆಂಗಳೂರಿನ ರಸ್ತೆ ಮತ್ತು ಸ್ವಚ್ಛತೆ ವಿಷಯ ಮಾತಾಡಿ ರಾಜ್ಯ ಸರ್ಕಾರದ ವಿರುದ್ಧ ಸಿಡುಕುವ ಇನ್‌ಫೋಸಿಸ್ ಪಾಲುದಾರ ಮೋಹನ್‌ದಾಸ್ ಪೈಗೇ ಈ ಭೂ ಅಕ್ರಮಗಳು ಗೊತ್ತಿಲ್ಲ ಎನ್ನುವುದು ತಮಾಷೆಯಾಗಿದೆ.

ಇನ್‌ಫೋಸಿಸ್ ಭೂ ಅವ್ಯವಹಾರದ ಬಗ್ಗೆ ಎಕ್ಸ್ (ಟ್ವಿಟರ್) ನಲ್ಲಿ ವರುಣ್ ರಾವ್ ಎಂಬುವವರು ಪ್ರಶ್ನೆಗಳ ಸುರಿಮಳೆಗೈದು ಐಟಿ ದಿಗ್ಗಜರ ಬಟಾ ಬಯಲು ಮಾಡಿದ್ದಾರೆ. "ಸರ್ಕಾರದಿಂದ ಪಡೆದ ಬಡ ರೈತರ ಭೂಮಿಯನ್ನು, ಈಗ ರಿಯಲ್ ಎಸ್ಟೇಟ್ ದಂಧೆಗೆ ಮಾರಿಕೊಳ್ಳುವುದು ಎಷ್ಟು ಸರಿ?" ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಇದರ ಬೆನ್ನಲ್ಲೇ ಕಾಂಗ್ರೆಸ್ ವಕ್ತಾರೆ ಲಾವಣ್ಯ ಬಲ್ಲಾಳ್ ಎಂಬುವರು ಸಹ ಇನ್‌ಫೋಸಿಸ್ ಒಡೆಯರನ್ನು ಹೀನಾಮಾನವಾಗಿ ಜಾಡಿಸಿದ್ದಾರೆ. ಬೆಂಗಳೂರಿನ ಸಣ್ಣ ಸಮಸ್ಯೆಗಳಿಗೂ ಸರ್ಕಾರವನ್ನು ಟೀಕಿಸುವ ಮೋಹನ್‌ದಾಸ್ ಪೈ ಮತ್ತು ಸಾಮಾಜಿಕ ಕಳಕಳಿಯ ಮಾತಾಡುವ ಬಗ್ಗೆ ಉದ್ದುದ್ದ ಭಾಷಣ ಮಾಡುವ ಸುಧಾಮೂರ್ತಿ ಅವರುಗಳು, ಸರ್ಕಾರದಿಂದ ರಿಯಾಯಿತಿ ದರದಲ್ಲಿ ಭೂಮಿ ಪಡೆದು, ಅದನ್ನು ನ್ಯಾಯಾಲಯದಿಂದ ಸುಳ್ಳು ಆದೇಶ ಸೃಷ್ಟಿಸಿ, ಅಕ್ರಮ ಮಾರುತ್ತಿರುವ ತಮ್ಮ ಒಡೆತನದ ಇನ್‌ಫೋಸಿಸ್ ಬಗ್ಗೆ ಯಾಕೆ ತುಟಿ ಬಿಚ್ಚುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ. ಇನ್ಫೋಸಿಸ್ ಕಂಪೆನಿಯ ಹೊಸ ಸಿ.ಇ.ಒ. ಆಗಿ 'ಸಲೀಲ್ ಪರೇಖ್' 2018ರ ಜನವರಿ.2 ರಿಂದ ನಿಯುಕ್ತರಾಗಿರಬಹುದು. ಆತನೇ, ಇಂಥ ಭೂ ಅಕ್ರಮಕ್ಕೆ ಕುಮ್ಮಕ್ಕು ಕೊಟ್ಟಿರಬಹುದು. ಹಾಗಂತ, ಇನ್‌ಫೋಸಿಸ್‌ನ ನಿಜ ಮಾಲಿಕರಾದ ಆರು ಜನ ದಿಗ್ಗಜರು, ತಮ್ಮ ಗಮನಕ್ಕೆ ಇದು ಬಂದಿಲ್ಲ ಅಂತ ಈಗಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ 'ಸಲೀಲ್ ಪರೇಖ್' ಮೇಲೆ ಆಪಾದನೆ ಹೊರಿಸಬಹುದು. ಆದರೆ, ಸತ್ಯಕ್ಕೆ ಯಾವುದೇ ಮುಖವಾಡ ಇರುವುದಿಲ್ಲ, ಯಾವುದೇ ನೆಪಗಳು ಸಹ ಸಲ್ಲುವುದಿಲ್ಲ. ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿ ಲಾಭ ಗಳಿಸುವ ಇನ್‌ಫೋಸಿಸ್‌ನಂಥ ಶ್ರೀಮಂತ ಸಂಸ್ಥೆ, ಪುಡಿ ಭೂಗಳ್ಳರು ಮಾಡುವ ಅಕ್ರಮ ಕಾರ್ಯಗಳಿಗೆ ಇಳಿದರೆ, ಏನನ್ನಬೇಕು. ಹಣ ಅನ್ನೋದು ಮಾನ-ಮರ್ಯಾದೆ, ನ್ಯಾಯ-ನೀತಿಗಿಂತ ದೊಡ್ಡದು ಅಂದುಕೊಂಡಿದ್ದಾರಾ ಇನ್‌ಫೋಸಿಸ್ ಸಾಹುಕಾರರು?!





# ಮೈಸೂರಿನಲ್ಲೂ ಇನ್‌ಫೋಸಿಸ್ ಭೂ ಅಕ್ರಮ ಮಾಡಿದೆ

ಮೈಸೂರಿನಲ್ಲೂ 350 ಎಕರೆ ನುಂಗಿರುವ ಇನ್‌ಫೋಸಿಸ್: ಅದನ್ನು ಯಾವ ರಿಯಲ್ ಎಸ್ಟೇಟ್ ಕಳ್ಳರ ಬಾಯಿಗೆ ಕಕ್ಕುತ್ತಾರೋ ಗೊತ್ತಿಲ್ಲ. 2000 ಇಸವಿಯಲ್ಲಿ ಕರ್ನಾಟಕದ ಹೈಟೆಕ್ ಮುಖ್ಯಮಂತ್ರಿ ಎನಿಸಿದ ಎಸ್.ಎಂ.ಕೃಷ್ಣ ಬೆಂಗಳೂರಿನ ಆನೇಕಲ್ ತಾಲೂಕಿನಲ್ಲಿ ನೂರಾರು ಎಕರೆ ಭೂಮಿಯನ್ನು ಇನ್‌ಫೋಸಿಸ್‌ಗೆ ಕೊಟ್ಟಂತೆ, ರಾಜ್ಯದ ಎರಡನೇ ಐಟಿ ಸಿಟಿ ಎನಿಸಿದ ಮೈಸೂರಿನ ಬೆಳಗೊಳದಲ್ಲೂ 350 ಎಕರೆಗಳಷ್ಟು ಬೃಹತ್ ಪ್ರದೇಶ ಕೊಟ್ಟಿದೆ. ಈ ಬೆಳಗೊಳ ಗ್ರಾಮ ಮೈಸೂರು ನಗರದ ಪಕ್ಕದಲ್ಲೇ ಇದ್ದರೂ, ಅದು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿಗೆ ಸೇರುತ್ತೆ. ಕೆ.ಆರ್.ಎಸ್ ಅಣೆಕಟ್ಟೆಯ ಆಸುಪಾಸಿನಲ್ಲಿರುವ ಬೆಳಗೊಳ ಗ್ರಾಮದ ಭೂಮಿ ಅಚ್ಚ ಹಸುರಿನ ನೀರಾವರಿ ಭೂಮಿ. ಇಂಥ ಫಲವತ್ತಾದ ಭೂಮಿಯನ್ನು ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿ ಬಡ ರೈತರಿಂದ ಕಡಿಮೆ ಬೆಲೆಗೆ ಸ್ವಾಧೀನ ಮಾಡಿಕೊಂಡು, ಇನ್‌ಫೋಸಿಸ್‌ನಂಥ ಕೈಗಾರಿಕಾ ಸಂಸ್ಥೆಗಳಿಗೆ ನೀಡಿದೆ. ಇಲ್ಲಿ ಬಹುತೇಕ ಉದ್ಯಮಿಗಳು ಕೈಗಾರಿಕೆ ಸ್ಥಾಪನೆ ಮಾಡದೆ, ಮನೆ ನಿರ್ಮಾಣಕ್ಕೆ, ರೆಸಾರ್ಟ್ ಹೋಟೆಲ್‌ಗಳಂಥ ಅನ್ಯ ಉದ್ದೇಶಗಳಿಗೆ ಬಳಸಿದ್ದಾರೆ. ಇದಕ್ಕೆ ಇನ್‌ಫೋಸಿಸ್ ಸಹ ಹೊರತಲ್ಲ.

ಇನ್‌ಫೋಸಿಸ್ ಸಂಸ್ಥೆಗೆ ಸರ್ಕಾರ ನೀಡಿದ ಭೂಮಿ ಮಂಡ್ಯಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಬೆಳಗೊಳ ಗ್ರಾಮಕ್ಕೆ ಸೇರಿದ್ದರೂ, ಅದು ಏಷ್ಯಾದಲ್ಲೇ ಅತಿ ದೊಡ್ಡ ಕೈಗಾರಿಕಾ ಪ್ರದೇಶ ಎನಿಸಿದ ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಪ್ರದೇಶದ ವ್ಯಾಪ್ತಿಗೆ ಬರುತ್ತೆ. 2002ರಲ್ಲಿ ಸುಮಾರು 350 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಇನ್‌ಫೋಸಿಸ್ ಕ್ಯಾಂಪಸ್‌ನಲ್ಲಿ ದೇಶ–ವಿದೇಶಗಳ ಹತ್ತು ಸಾವಿರಕ್ಕೂ ಹೆಚ್ಚು ಐಟಿ ವಿದ್ಯಾರ್ಥಿಗಳಿಗೆ ತರಬೇತಿ ಶಿಕ್ಷಣ ನೀಡುತ್ತಿದೆ. ಇಲ್ಲಿ ತರಬೇತಿಯಾದ ಹುಡುಗ–ಹುಡುಗಿಯರು ಒಳ್ಳೊಳ್ಳೆ ಕಂಪನಿಗಳಿಗೆ ಸೇರಿ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಅನ್ನಿಸಿಕೊಳ್ಳುತ್ತಾರೆ. ಅತ್ಯುನ್ನತ ಕಠಿಣ ಸುರಕ್ಷತೆಯ ಕಣ್ಗಾವಲಿನಲ್ಲಿರುವ ಇನ್‌ಫೋಸಿಸ್ ಕ್ಯಾಂಪಸ್‌ನಲ್ಲಿ ಸುಸಜ್ಜಿತ ಕ್ರೀಡಾ ಮೈದಾನವಿದೆ. ಬೆಂಗಳೂರಿನಲ್ಲೂ ಇಲ್ಲದಂಥ ಒಳ್ಳೆ 5ಸ್ಟಾರ್ ಹೋಟೆಲ್ ಇದೆ. ದೇಶದ ಯಾವ ನಗರದಲ್ಲೂ ಇಲ್ಲದ ಬಹು ತಂತ್ರಜ್ಞಾನದ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಿವೆ, ಶ್ರೀಮಂತ ರೆಸ್ಟಾರೆಂಟ್‌ಗಳಿವೆ. ಒಳಗೆ ಹೋದರೆ, ಯಾವುದೋ ವಿದೇಶಿ ನಗರಕ್ಕೆ ಕಾಲಿಟ್ಟಂತೆ ಭಾಸವಾಗುತ್ತೆ. ಅಷ್ಟು ಅಚ್ಚುಕಟ್ಟಾಗಿದೆ ಇನ್‌ಫೋಸಿಸ್ ಕ್ಯಾಂಪಸ್. ಆದರೆ, ಈ ಬೃಹತ್ತಾದ ಮತ್ತು ಸುಂದರವಾದ ಕಟ್ಟಡಗಳ ಬಾಳಿಕೆ ಮಾತ್ರ 30 ವರ್ಷಗಳಷ್ಟೆ. ಅಂದರೆ ಇನ್ನೂ ಏಳೆಂಟು ವರ್ಷಗಳಲ್ಲಿ ಇನ್‌ಫೋಸಿಸ್ ಕಟ್ಟಡಗಳನ್ನು ಕೆಡವಬೇಕು. ಆ ಮಟ್ಟಿನ ತಂತ್ರಜ್ಞಾನ ಉಪಯೋಗಿಸಿ, ಕಡಿಮೆ ಖರ್ಚಿನ ಕಟ್ಟಡಗಳ ನಿರ್ಮಾಣವಾಗಿದೆ.

ಇಂಥ ನೀರಿನ ಮೇಲೆ ಗುಳ್ಳೆಯಂತಿರುವ ಇನ್‌ಫೋಸಿಸ್ ಕಟ್ಟಡಗಳನ್ನು 2032ರ ಹೊತ್ತಿಗೆ ಕೆಡವಬೇಕಾಗುತ್ತದೆ. ಆಗ ಮತ್ತೆ ಕಟ್ಟಡ ಕಟ್ಟಲು ಹಣ ಹೂಡಿಕೆ ಮಾಡಿ, ಸಾಫ್ಟ್‌ವೇರ್ ತಂತ್ರಜ್ಞಾನ ತರಬೇತಿ ಕಾಲೇಜು ನಡೆಸುವ ಉದ್ದೇಶ ಇನ್‌ಫೋಸಿಸ್‌ಗೆ ಇರಲಾರದು. ಏಕೆಂದರೆ, ಇನ್‌ಫೋಸಿಸ್‌ನ ದುರಾಸೆ ಹಣ ಗಳಿಕೆ ಕಾರಣದಿಂದ, ದುಬಾರಿ ಫೀಸ್ ಕಟ್ಟಲು ಸಾಧ್ಯವಾಗದ ಕಾರಣ ಮೊದಲಿಗಿಂತ ಅರ್ಧದಷ್ಟು ವಿದ್ಯಾರ್ಥಿಗಳು ಕಡಿಮೆಯಾಗಿದ್ದಾರೆ. ದಿನ ಕಳೆದಂತೆ ಇನ್‌ಫೋಸಿಸ್ ಕ್ಯಾಂಪಸ್‌ಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಕುಗ್ಗುತ್ತಲೇ ಇದೆ. ಹೀಗಾಗಿ 2032ರಲ್ಲಿ ಇನ್‌ಫೋಸಿಸ್ ಒಡೆಯರು, ಮತ್ತೆ ಹೊಸ ಕಟ್ಟಡ ಕಟ್ಟಿ ಕ್ಯಾಂಪಸ್ ಮುಂದುವರೆಸುವುದು ಅನುಮಾನವಿದೆ. ಹಾಗೇ, ಇಷ್ಟೊಂದು ದೊಡ್ಡ ಭೂ ಪ್ರದೇಶವನ್ನು ಸುಮ್ಮನೆ ಇಟ್ಟುಕೊಳ್ಳುವುದು ಇನ್‌ಫೋಸಿಸ್‌ಗೆ ಹೊರೆ ಎನಿಸಿದರೆ, ಬೆಂಗಳೂರು ಜಿಲ್ಲೆ ಆನೇಕಲ್ ತಾಲೂಕಿನ ಭೂಮಿಯನ್ನು ರಿಯಲ್ ಎಸ್ಟೇಟ್ ಮಾಲೀಕರಿಗೆ ಮಾರಿದಂತೆ, ಭೂಗಳ್ಳರಿಗೆ ಮಾರಿಕೊಳ್ಳಬಹುದು. ಇದಕ್ಕಾಗಿ, ಕಳೆದ 25 ವರ್ಷಗಳಿಂದ ಭೂಮಿ ಕಳೆದುಕೊಂಡ ರೈತರು ಇನ್‌ಫೋಸಿಸ್ ಸಂಸ್ಥೆ ಮತ್ತು ಸರ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸುತ್ತಿದ್ದಾರೆ. ಆದರೆ, ಈವರೆಗೂ ನ್ಯಾಯ ಸಿಕ್ಕಿಲ್ಲ. ರೈತರ ಕೂಗು ಅರಣ್ಯ ರೋಧನವಾಗಿದೆ. ಬಡವರ ನೋವು–ನಿಟ್ಟುಸಿರು ಯಾವುದೂ, ಎಮ್ಮೆ ಚರ್ಮದ ಸರ್ಕಾರಕ್ಕೇ ಕೇಳಿಸುತ್ತಿಲ್ಲ.



# ಬೆಂಗಳೂರು ಪ್ರೆಸ್‌ಕ್ಲಬ್ ವಾರ್ಷಿಕ ಪ್ರಶಸ್ತಿ ಪ್ರದಾನ



● ಪ್ರತಿಮಾ

ಪ್ರತಿ ವರ್ಷದಂತೆ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ಸಾಧಕ ಪತ್ರಕರ್ತರಿಗೆ ಬೆಂಗಳೂರು ಪ್ರೆಸ್‌ಕ್ಲಬ್ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿದೆ. ಈ ಬಾರಿ ಪ್ರಶಸ್ತಿಗೆ ಭಾಜನರಾದ 55 ಮಂದಿ ಪತ್ರಕರ್ತರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಸಹ ಒಬ್ಬರು. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ ನಿತ್ಯ 12–14 ಗಂಟೆಗಳ ಕಾಲ ರಾಜಕಾರಣದಲ್ಲೇ ಕಳೆದು ಹೋಗುತ್ತಿದ್ದರೂ, ರಾಜಕೀಯವನ್ನು ಮೈಗೆ ಅಂಟಿಸಿಕೊಳ್ಳದ ನಿಸ್ಪೃಹಜೀವಿ. ಪತ್ರಿಕಾ ವೃತ್ತಿಯನ್ನೇ ತಮ್ಮ ಸರ್ವಸ್ವ ಎಂದು ನಂಬಿರುವ ಪ್ರಭಾಕರ್ ಅವರು ಇಂದು ಸಂಪುಟ ದರ್ಜೆಯ ಸ್ಥಾನಮಾನ ದಕ್ಕಿದರೂ ಯಾವುದೇ ಅಹಂ ಇಲ್ಲದೇ ಎಲ್ಲಾ ಪತ್ರಕರ್ತರನ್ನು ತಮ್ಮ ಕುಟುಂಬದವರೆಂದೇ ಭಾವಿಸಿ ಅಪ್ಪಿಕೊಂಡು ಹೋಗುವ ಮನೋಭಾವದವರು. ಇಂಥ ಮಾನವೀಯ ನಡವಳಿಕೆ ಕೆ.ವಿ.ಪ್ರಭಾಕರ್ ಅವರಲ್ಲಿ ಒಡಮೂಡಲು ಕಾರಣ ಪತ್ರಿಕೆಗಳ ವಿತರಕರಾಗಿ ಕೆಲಸ ಮಾಡಿದ್ದು, ಬಾಲ್ಯದಲ್ಲೇ ಕಷ್ಟಕಾರ್ಪಣ್ಯ ಕಂಡಿದ್ದು ಎಂದರೆ ತಪ್ಪಾಗಲಾರದು. ತಳಮಟ್ಟದಿಂದ ಬಂದವರಿಗೆ ಮಾತ್ರವೇ ಮತ್ತೊಬ್ಬರ ಕಷ್ಟ ಏನೂ ಅನ್ನೋದು ಅರ್ಥವಾಗುತ್ತದೆ.

ಕೋಲಾರ ಮೂಲದ ಕೆ.ವಿ.ಪ್ರಭಾಕರ್ ಪ್ರಸ್ತುತ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರಾಗಿದ್ದರ ಹಿಂದೆ ಅವರದ್ದೇ ಆದ ಪರಿಶ್ರಮದ ರೋಚಕ ಪಯಣವಿದೆ. ಪ್ರಭಾಕರ್ ನೇರ ವರದಿಗಾರರಾಗಿ ಬಂದವರಲ್ಲ. ಕೋಲಾರದ ಕುರುಬರಪೇಟೆಯ ಬಡ ವೆಂಕಟೇಶಪ್ಪ ಮತ್ತು ಲಕ್ಷ್ಮೀದೇವಿ ಅವರ ಪುತ್ರರಾಗಿ ಕಡುಕಷ್ಟದಲ್ಲಿ ಬೆಳೆದು, ಸ್ವಂತ ಪರಿಶ್ರಮದಿಂದ ಮೇಲೆ ಬಂದರು. ಕೆ.ವಿ.ಪ್ರಭಾಕರ್ ತಮ್ಮ ಪ್ರಾಥಮಿಕ ಮತ್ತು ಪದವಿ ಹಂತದವರೆಗಿನ ಶಿಕ್ಷಣವನ್ನು ಕೋಲಾರ ಮತ್ತು ಕೆಜಿಎಫ್‌ನಲ್ಲಿ ಪೂರ್ಣಗೊಳಿಸಿದರು. ಹೇಳಿಕೊಳ್ಳುವಂತಹ ಯಾವುದೇ ಆರ್ಥಿಕ ಸುಸ್ಥಿತಿ ಇಲ್ಲದ ಪ್ರಭಾಕರ್ ಅವರು ಕೋಲಾರದ ಧ್ವನಿಯಾಗಿದ್ದ 'ಕೋಲಾರ ಪತ್ರಿಕೆ'ಯ ವಿತರಣೆ ಮಾಡುವ ಹುಡುಗನಾಗಿ ವೃತ್ತಿ ಬದುಕು ಆರಂಭಿಸಿದರು. ತಮ್ಮ ವೃತ್ತಿಪರತೆ–ಮಹತ್ವಾಕಾಂಕ್ಷೆ–ಕಾರ್ಯಕ್ಷಮತೆ ಮತ್ತು ಸ್ವಯಂ ಶ್ರಮದಿಂದ ಪತ್ರಿಕಾ ವಿತರಕ ವೃತ್ತಿಯಿಂದ 'ಕೋಲಾರ ಪತ್ರಿಕೆ' ' ಸುದ್ದಿ ಸಂಚಯ' 'ಕೋಲಾರ ವಾಣಿ' ಪತ್ರಿಕೆಯ ವರದಿಗಾರನ ಹುದ್ದೆ ಅಲಂಕರಿಸಿದರು. ಪತ್ರಿಕಾ ವರದಿಗಾರನ ಹುದ್ದೆಯಿಂದ ಹಂತಹಂತವಾಗಿ ಬೆಳೆದು 'ಕೋಲಾರ ಪತ್ರಿಕೆ' ಉಪಸಂಪಾದಕರೂ ಆದರು. ಹೀಗೇ ಅವರ ಕೋಲಾರದ ಮಣ್ಣಿನ ಅನುಭವ ಪಡೆದುಕೊಂಡು ಮಾಯಾನಗರಿ ಬೆಂಗಳೂರಿಗೆ 1999ರಲ್ಲಿ ಬೆಂಗಳೂರಿಗೆ ಕಾಲಿಟ್ಟರು.

ಪ್ರಭಾಕರ್ ಮೊದಲಿಗೆ ರಾಜ್ಯದ ಪ್ರತಿಷ್ಠಿತ ದಿನಪತ್ರಿಕೆಯಾದ 'ವಿಜಯಕರ್ನಾಟಕ' ಸೇರಿದರು. ಮುಂದೆ 'ಕನ್ನಡಪ್ರಭ' ಪತ್ರಿಕೆಗಳ ಮೂಲಕ ವೃತ್ತಿ ಬದುಕಿನ ಮತ್ತೊಂದು ಮಹತ್ತರ ಮಜಲಿಗೆ ಬೆಳೆದರು. ರಾಜಕೀಯ, ಅಪರಾಧ, ಸಮಾಜಸೇವೆ ಸೇರಿದಂತೆ ಹಲವಾರು ವಿಭಾಗಗಳಲ್ಲಿ ತಮ್ಮ ವೃತ್ತಿ ಬದ್ಧತೆ ಪ್ರದರ್ಶಿಸಿದರು. ಕಾಲು ಶತಮಾನ ಕಾಲದ ವೃತ್ತಿಪರತೆ ಇವರ ಕೈ ಹಿಡಿದು ವಿಧಾನಸೌಧದ ಅಧಿಕಾರ ಕೇಂದ್ರಕ್ಕೆ ಕರೆ ತಂದಿತು. ಇಲ್ಲಿಯವರೆಗೂ ಹನ್ನೊಂದು ವರ್ಷಗಳ ಕಾಲ ನಿರಂತರವಾಗಿ ತಮ್ಮ ಪಾಲಿಗೆ ಬಂದ ಹೊಣೆಗಾರಿಕೆಯನ್ನು

ಅತ್ಯಂತ ಪರಿಣಾಮಕಾರಿಯಾಗಿ, ಜವಾಬ್ದಾರಿಯಿಂದ ಮತ್ತು ಘನತೆಯಿಂದ ನಿರ್ವಹಿಸಿದ್ದರ ಪರಿಣಾಮವಾಗಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ಮೊದಲ ಅವಧಿಯಲ್ಲಿ ಮಾಧ್ಯಮ ಸಂಯೋಜಕರಾಗಿ ನೇಮಿಸಿಕೊಂಡಿದ್ದರು. ಈಗ ಎರಡನೇ ಅವಧಿಯಲ್ಲಿ ಮುಖ್ಯಮಂತ್ರಿಯಾದಾಗ ಮಾಧ್ಯಮ ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದಾರೆ. ಆದರೂ ಪತ್ರಕರ್ತ ಎಂಬುದಕ್ಕಿಂತ ದೊಡ್ಡ ಸ್ಥಾನಮಾನ ತಮಗೆ ಯಾವುದೂ ಇಲ್ಲ ಎನ್ನುವ ಮನೋಧರ್ಮಕ್ಕೇ ಪ್ರಭಾಕರ್ ಸೀಮಿತಗೊಳಿಸಿಕೊಂಡು "ಡೌನ್ ಟು ಅರ್ಥ್" ಆಗಿದ್ದಾರೆ. ಆ ಕಾರಣಕ್ಕೆ ಅನೇಕ ಪತ್ರಕರ್ತರ ಬೆಟ್ಟದಂಥ ಕಷ್ಟಗಳನ್ನು ನಿರಾಯಸವಾಗಿ ಕರಗಿ ಹೋಗುವಂತೆ ಸಹಾಯ ಹಸ್ತ ಚಾಚುತ್ತಾ ಬಂದಿದ್ದಾರೆ.

ತನ್ನ ಹಾಗೆ ಉಳಿದ ಪತ್ರಕರ್ತರೂ ಬೆಳೆಯಬೇಕು, ಸಿಕ್ಕ ಅವಕಾಶಗಳನ್ನು ಸದುಪಯೋಗಿಸಿಕೊಳ್ಳಬೇಕು ಎಂಬ ಕಾರಣಕ್ಕೆ ಅನೇಕ ಪತ್ರಕರ್ತರನ್ನು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಮಾಧ್ಯಮ ಸಲಹೆಗಾರರಾದ ಬಳಿಕ ಹಲವು ವರ್ಷಗಳಿಂದ ಬಾಕಿ ಉಳಿದಿರುವ ಪತ್ರಕರ್ತ ಸಮುದಾಯದ ಸಮಸ್ಯೆಗಳಿಗೆ ಶರವೇಗದಲ್ಲಿ ಪರಿಹಾರ ಒದಗಿಸುತ್ತಿರುವುದು ಅವರ ವೃತ್ತಿಪರತೆಗೆ ಸಾಕ್ಷಿ. ಸಂಕಷ್ಟದಲ್ಲಿರುವ ಹಿರಿಯ ಪತ್ರಕರ್ತರ ಮಾಸಾಶನವನ್ನು 3 ಸಾವಿರ ರೂಪಾಯಿಯಿಂದ 15 ಸಾವಿರ ರೂಗೆ ಏರಿಸಿರುವುದರ ಹಿಂದೆ ಅವರ ಶ್ರಮದ ಜೊತೆಗೆ ಕಾಳಜಿಯನ್ನೂ ಕಾಣಬಹುದು. ಮುಖ್ಯಮಂತ್ರಿಗಳ ಆರೋಗ್ಯ ಸಂಜೀವಿನಿ ಯೋಜನೆಗೆ ಚಾಲನೆ ದೊರಕಿದ್ದು, 3 ದಶಕಗಳ ಗ್ರಾಮೀಣ ಪತ್ರಕರ್ತರ ಉಚಿತ ಬಸ್‌ಪಾಸ್ ಕನಸು ನನಸಾಗಿದ್ದು ಮತ್ತು ಪತ್ರಕರ್ತ ಸಮುದಾಯ ಸರ್ಕಾರಿ ಸವಲತ್ತುಗಳ್ನು ಪಡೆಯಲು ವಿಧಿಸಲಾಗಿದ್ದ ಕಠಿಣ ಷರತ್ತುಗಳನ್ನು ಸರಳಗೊಳಿಸಿದ್ದರ ಹಿಂದೆ ಇದ್ದದ್ದು ಇದೇ ಪ್ರಭಾಕರ್. ಇವರ ಸಹೃದಯತೆಯಿಂದಾಗಿ ಈ ಬಾರಿ ಪತ್ರಿಕಾ ವಿತಕರರಿಗೂ ರಾಜ್ಯೋತ್ಸವ ಪ್ರಶಸ್ತಿ ಲಭಿಸುವಂತಾಯಿತು. ಇಂಥಾ ಸಹೃದಯಿ ಸ್ನೇಹಜೀವಿ ಹಾಗೂ ಕಾಯಕ ಯೋಗಿಗೆ ಪ್ರೆಸ್‌ಕ್ಲಬ್ ವಿಶೇಷ ಪ್ರಶಸ್ತಿ ನೀಡಿದ್ದು ಅರ್ಥಪೂರ್ಣವಾಗಿತ್ತು.

## ● ರವಿಕುಮಾರ್ ಅತ್ತಿಕುಪ್ಪೆ

ಬೆಂಗಳೂರು ಪ್ರೆಸ್‌ಕ್ಲಬ್ ವಾರ್ಷಿಕ ಪ್ರಶಸ್ತಿ ಪ್ರಶಸ್ತಿಗೆ ಭಾಜನರಾದ ಪತ್ರಕರ್ತರಲ್ಲಿ ರವಿಕುಮಾರ್ ಅತ್ತಿಕುಪ್ಪೆ ಅವರು ಮಾಧ್ಯಮದ ಜಗಲಿಕಟ್ಟೆಯಲ್ಲಿ 'ಪಾರಿವಾಳ ಫಸ್ಟ್ ಪಂಚ್' ಎಂದೇ ಪ್ರಸಿದ್ಧರು. ಕನ್ನಡ ಹೋರಾಟಗಾರರಾದ ಜಾಣಗೆರೆ ವೆಂಕಟರಾಮಯ್ಯನವರಂತಹ ಪತ್ರಿಕೋದ್ಯಮ ಮತ್ತು ಚಳವಳಿ ಭೀಷ್ಮರ ಮಾರ್ಗದರ್ಶನದಲ್ಲಿ ನಿರ್ಭೀತಿಯಿಂದ ಪಾರಿವಾಳ ಪತ್ರಿಕೆಯ ಸಂಪಾದಕ ಮತ್ತು ಬರಹಗಾರರಾಗಿ ರವಿಕುಮಾರ್ ಎರಡು ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಸುದ್ದಿ ಪ್ರಕಟಿಸೋ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ. ಐಎಎಸ್ ಅಧಿಕಾರಿಯೊಬ್ಬರು ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣವೊಂದು 2000ದಿಂದ 2023 ರವರೆಗೆ ಬೆಂಗಳೂರು ಎಸಿಎಂಎಂ, ಸೆಷನ್ಸ್ ಕೋರ್ಟ್, ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ನೂ ತಲುಪಿ 9 ಮಂದಿ ನ್ಯಾಯಮೂರ್ತಿಗಳಿಂದ ತೀರ್ಪು ಬರಬೇಕಾಯ್ತು. ಕೊನೆಗೂ ಸತ್ಯಕ್ಕೇ ಜಯ ಸಿಕ್ಕಿದ್ದು ಅವರ ನಿಷ್ಠಾವಂತ ವರದಿಗಾರಿಕೆಗೆ ಸಾಕ್ಷಿ. ನೂರೆಂಟು ಮೊಕದ್ದಮೆಗಳನ್ನು ಎದುರಿಸುತ್ತಲೇ ಪತ್ರಿಕಾ ಹೋರಾಟದೊಂದಿಗೆ ಬದುಕು ಸಾಗಿಸುತ್ತಿದ್ದಾರೆ. ಹಲವು ಮಾಧ್ಯಮ ಪ್ರಶಸ್ತಿ ಪಡೆದಿರುವ ಇವರು, ಒಡಿಶಾ



ರಾಜ್ಯಪಾಲರಿಂದ 'ರಾಷ್ಟ್ರೀಯ ರತ್ನ', ಇಂಟರ್‌ನ್ಯಾಷನಲ್ ಗ್ಲೋಬಲ್ ಪೀಸ್ ಯೂನಿವರ್ಸಿಟಿಯಿಂದ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದಿಂದ 'ಪಾಟೀಲ್ ಪುಟ್ಟಪ್ಪ' ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿವೆ.

## ● ಅಂತೋಣಿ ಮೇರಿ (ಮೇರಿ ರಾಜ್)

ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಕನ್ನಡ ಭಾಷೆಯಲ್ಲೇ ಬದುಕು ಕಟ್ಟಿಕೊಳ್ಳಲು ಹೊರಟು ಪತ್ರಿಕೋದ್ಯಮ ಕ್ಷೇತ್ರವನ್ನು ಆಯ್ದು ಕೊಂಡವರು ಮೇರಿ. ಒಂದು ಕಾಲದಲ್ಲಿ ಸಂಚಲನ ಮೂಡಿಸಿದ್ದ 'ಹಾಯ್ ಬೆಂಗಳೂರು' ಪತ್ರಿಕೆಯ ರವಿ ಬೆಳಗೆರೆ ಹಾಗೂ ಮಾಜಿ ಪತ್ರಕರ್ತೆ ಪ್ರಸ್ತುತ ಮಾಜಿ ಸಂಸದೆ ತೇಜಸ್ವಿನಿ ಗೌಡ ಇವರಿಗೆ ಸ್ಫೂರ್ತಿ. ಭಾರತೀಯ ವಿದ್ಯಾಭವನದಲ್ಲಿ ಪತ್ರಿಕೋಧ್ಯಮ ಡಿಪ್ಲೊಮಾ ಮಾಡುತ್ತಿರುವಾಗಲೇ ಕನ್ನಡ ಪ್ರಭ ಹಾಗೂ ವಿಜಯ ಕರ್ನಾಟಕ ಪತ್ರಿಕೆಗಳಿಗೆ ಲೇಖನ ಬರೆಯುತ್ತಾ ಮಾಧ್ಯಮದಲ್ಲಿ ದುಡಿಯುವುದನ್ನು ರೂಢಿಸಿಕೊಂಡರು. ಮಂಡ್ಯ ಶಾಸಕ ರವಿ ಗಣಿಗ ಅವರು ಇದ್ದ 'ಇನ್ ಬೆಂಗಳೂರು' ಎಂಬ ಲೋಕಲ್ ಕೇಬಲ್ ಚಾನೆಲ್ ಸೇರಿದರು. ಬಳಿಕ ಸಂಜೆವಾಣಿ ಪತ್ರಿಕೆಯತ್ತ ಮುಖ ಮಾಡಿದರು. ಪ್ರೆಸ್‌ಕ್ಲಬ್‌ನಲ್ಲಿ ನಡೆಯುತ್ತಿದ್ದ ಐದಾರು ಪತ್ರಿಕಾಗೋಷ್ಠಿಗಳನ್ನು ಡೆಡ್‌ಲೈನ್‌ನಲ್ಲಿ ವರದಿ ಮಾಡುತ್ತಾ ಅದರ ಜೊತೆಯಲ್ಲೇ ವಿಶೇಷ ವರದಿಗಳನ್ನೂ ದಾಖಲಿಸುತ್ತಾ



ಸಮಾಜದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತಾ ದಿಟ್ಟ ಪತ್ರಕರ್ತೆ ಎನಿಸಿಕೊಂಡರು. ಅಂದು ಸಂಜೆವಾಣಿಯಲ್ಲಿ ಇವರು ಬರೆಯುತ್ತಿದ್ದ ಬ್ರೇಕಿಂಗ್ ನ್ಯೂಸ್‌ಗಳನ್ನು ನಾಡಿನ ಹೆಸರಾಂತ ಟಿವಿ ಮಾಧ್ಯಮದವರೆಲ್ಲ ಫಾಲೋ ಮಾಡುತ್ತಿದ್ದರು. ಸಂಜೆವಾಣಿಯಲ್ಲಿ 8 ವರ್ಷ ಸೇವೆ ಸಲ್ಲಿಸಿದ ಬಳಿಕ ಮುದ್ರಣ ಮಾಧ್ಯಮದಿಂದ ದೃಶ್ಯ ಮಾಧ್ಯಮಕ್ಕೆ ಹೊರಳಿದ ಅವರು ಪ್ರಜಾ ಟಿವಿಯಲ್ಲಿ ಕ್ರೈಂಸ್ಟೋರಿಗಳನ್ನು ಪ್ರಸ್ತುತ ಪಡಿಸುತ್ತಿದ್ದರು. ಪ್ರಸ್ತುತ ಪಬ್ಲಿಕ್ ಟಿವಿಯಲ್ಲಿ ಕ್ರೈಂ ಮತ್ತು ರಾಜಕೀಯ ವಿಶ್ಲೇಷಣಾ ಕಾರ್ಯಕ್ರಮಗಳನ್ನು ರೂಪಿಸುವ ಪ್ರೋಗ್ರಾಂ ಪ್ರೊಡ್ಯೂಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗಲೂ ಇವರನ್ನು ಮಾಧ್ಯಮದಂಗಳದಲ್ಲಿ 'ಸಂಜೆವಾಣಿ ಮೇರಿ' ಎಂದೇ ಹೆಸರಾಗಿದ್ದಾರೆ.

# ಲೋಕಾಯುಕ್ತ ಮಾದರಿಯ ನೈತಿಕಾಯುಕ್ತರು ಬೇಕು

5ನೇ ಪುಟದಿಂದ

ರಾಜ್ಯ ಸರ್ಕಾರಕ್ಕೆ ಇಂಥ ಭ್ರಷ್ಟ-ದುಷ್ಟ ಸರ್ಕಾರಿ ಅಧಿಕಾರಿಗಳ ಮಟ್ಟ ಹಾಕಬೇಕೆಂಬ ದೃಢವಾದ ಇಚ್ಛೆ ಇದ್ದಿದ್ದರೆ, ಹೈಕೋರ್ಟ್ ಅಥವ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಶಾಶ್ವತ ತನಿಖಾ ಸಂಸ್ಥೆಯನ್ನೇ ಸ್ಥಾಪಿಸಬೇಕಿತ್ತು. ಇಲ್ಲವೇ, ಲೋಕಾಯುಕ್ತ ಮಾದರಿಯಲ್ಲಿ ನೈತಿಕಾಯುಕ್ತರ ಕಚೇರಿ ತೆರೆಯಬೇಕಿತ್ತು.

ಬೃಹತ್ ಚಿನ್ನ ಸಾಗಾಣೆ ಪ್ರಕರಣದಲ್ಲಿ ಬಂಧನವಾಗಿ ಜೈಲಲ್ಲಿರುವ ನಟಿ ರನ್ಯಾ ರಾವ್ ಪ್ರಕರಣದಲ್ಲೇ ಡಿಜಿಪಿ ರಾಮಚಂದ್ರ ರಾವ್ ಕುಚರಿತ್ರೆ ಬಗ್ಗೆ ಗುಸು ಗುಸು ಕೇಳಿ ಬರುತ್ತಿತ್ತು. ರನ್ಯಾರಾವ್‌ರೊಂದಿಗಿನ ನಿಜವಾದ ಸಂಬಂಧವೇನು ಎಂಬ ಬಗ್ಗೆ ಸ್ವಲ್ಪ ತನಿಖೆ ನಡೆಸಿದ್ದರೂ, ರಾಮಚಂದ್ರರಾವ್‌ನ ಅಸಲಿ ಕಾಮದ ಮುಖ ಬಯಲಾಗುತ್ತಿತ್ತು. ರನ್ಯಾರಾವ್‌ಗೆ ಮಲತಂದೆ ಎಂದು ಹೇಳಿಕೊಳ್ಳುವ ರಾಮಚಂದ್ರ ರಾವ್ ಸಹಕಾರದಿಂದಲೇ, ಆಕೆ ಸುಲಭವಾಗಿ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳನ್ನು ಯಾಮಾರಿಸಿ ಚಿನ್ನ ಕಳ್ಳ ಸಾಗಾಣಿಕೆ ಮಾಡುತ್ತಿದ್ದಳು ಅನ್ನೋ ಗುರುತರ ಆರೋಪ ಕೇಳಿ ಬಂದಿತ್ತು. ಆಗ ಅವರನ್ನು ಸುದೀರ್ಘ ರಜೆ ಮೇಲೆ ಕಳುಹಿಸಿ, ನಂತರ ತನಿಖೆಯ ನಾಟಕದಲ್ಲಿ ಪರಿಶುದ್ಧ ಅಂತ ವರದಿ ಕೊಡಲಾಯಿತು. ಈ ತನಿಖಾ ವರದಿ ಆದರಿಸಿ, ಡಿಜಿಪಿ ರಾಮಚಂದ್ರ ರಾವ್ ರನ್ನು ಮತ್ತೆ ಕರ್ತವ್ಯಕ್ಕೆ ಆದೇಶ ನೀಡಲಾಗಿತ್ತು. ಆ ಕಾಲ ಘಟ್ಟದಲ್ಲೇ ಸರಿಯಾದ ತನಿಖೆ ನಡೆದಿದ್ದರೆ, ಡಿಜಿಪಿ ರಾಮಚಂದ್ರರಾವ್ ಹಲವು ಕಾಮ ಪುರಾಣಗಳೂ ಬೆಳಕಿಗೆ ಬರುತ್ತಿದ್ದವು. ಈಗ ಬಯಲಿಗೆ ಬಂದಿರುವ ಬೆಳಗಾವಿ ಪೋಲೀಸ್ ಕಚೇರಿಯಲ್ಲಿನ ಮಹಿಳೆಯರ ಜತೆಗಿನ ರಾಸಲೀಲೆ ವಿವರಗಳು ಆಗಲೇ ಹೊರಬರುತ್ತಿದ್ದವು. ಅದೆಲ್ಲಾ ಬಿಟ್ಟು, ರಾಸಲೀಲೆ ವಿಡಿಯೋ ವೈರಲ್ ಆದ ಬಳಿಕ ಸರ್ಕಾರ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತಿದೆ ಎಂಬ ಬೃಹನ್ನಾಟಕವಾಡುವ ಅವಶ್ಯಕತೆ ಇರಲಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಜಿಪಿ ರಾಮಚಂದ್ರ ರಾವ್ ರಾಸಲೀಲೆಯ ವಿಡಿಯೋ ಇಂದು ಬೆಳಗ್ಗೆಯಷ್ಟೇ ಗೊತ್ತಾಗಿದೆ. ಕಾನೂನಿಗಿಂತ ಯಾರು ದೊಡ್ಡವರಲ್ಲ. ಸರ್ಕಾರ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಿದೆ ಅಂತ ಮಾಮೂಲಿ ತೇಪೆ ಹಾಕುವ ಕೆಲಸ ಮಾಡುತ್ತಿದ್ದಾರೆ. ಹತ್ತು ವರ್ಷಗಳ ಹಿಂದೆ, ಅಬ್ಕಾರಿ ಮಂತ್ರಿ ಆಗಿದ್ದ ಎಂ.ವೈ. ಮೇಟಿ ವಿಧಾನಸೌಧದಲ್ಲೇ ರಾಸಲೀಲೆ ನಡೆಸಿದ ವಿಡಿಯೋ ಹೊರ ಬಂದಿತ್ತು. ಆಗಲೇ ಭ್ರಷ್ಟರ ಹೆಡೆಮುರಿಕಟ್ಟುವ ಲೋಕಾಯುಕ್ತ ಮಾದರಿಯಲ್ಲಿ, ದುಷ್ಟರ ಹೆಡೆಮುರಿಕಟ್ಟುವ ನೈತಿಕಾಯುಕ್ತರ ಕಚೇರಿ ಸ್ಥಾಪಿಸಿದ್ದರೆ, ಅದೆಷ್ಟೋ ಭ್ರಷ್ಟ-ದುಷ್ಟ ಕಾಮುಕ ಕ್ರಿಮಿಗಳು ಆಡಳಿತ ವ್ಯವಸ್ಥೆಯಿಂದ ದೂರ ಹೋಗುತ್ತಿದ್ದರು. ರಮೇಶ್ ಜಾರಕಿಹೊಳಿಯಂಥ ಕಾಮಿಗಳು ರಾಜಕಾರಣದಲ್ಲಿ ಉಳಿಯುತ್ತಲೇ ಇರಲಿಲ್ಲ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಬ್ಕಾರಿ ಮಂತ್ರಿ ಎಂ.ವೈ.ಮೇಟಿ ಪ್ರಕರಣ ಕುರಿತು ಸಂಪೂರ್ಣ ಮಾಹಿತಿ ಪಡೆದು, ತನಿಖೆ ನಡೆಸಿ ಕ್ರಮ ಜರುಗಿಸುತ್ತೇನೆ. ಕಾನೂನಿಗಿಂತ ಯಾರು ದೊಡ್ಡವರಲ್ಲ ಅಂತ ಹೇಳಿದ್ದರು. ಆದರೆ, ಅಬ್ಕಾರಿ ಮಂತ್ರಿ ಮೇಟಿ ಕಾಮಕಾಂಡವನ್ನು ಬಯಲಿಗೆಳೆದವರನ್ನೇ ಪೋಲೀಸರಿಂದ ಬಂಧಿಸಿ, ಹಿಂಸಿಸಿದ್ದರು.

ಮಾಜಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಹೇಳಿದಂತೆ 'ಖಾದಿ-ಖಾವಿ-ಖಾಕಿ ಮೂರೂ ಮಾನ ಬಿಟ್ಟು ನಿಂತಿವೆ. ಇದರಿಂದ ರಾಜ್ಯ ಕುಲಗೆಟ್ಟು ಹೋಗಿದೆ. ಈಗಲಾದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ನಿಜವಾಗಿಯೂ ಶುದ್ಧರಾಮಯ್ಯರೆನಿಸಿದರೆ, ಹೊಸದಾಗಿ ನೈತಿಕ ಆಯುಕ್ತ ಹುದ್ದೆ ಸೃಷ್ಟಿಸಿ, ತಮ್ಮ ಸಹಿತ ಎಲ್ಲಾ ರಾಜಕಾರಣಿಗಳು, ಪೋಲೀಸ್ ಅಧಿಕಾರಿಗಳು, ಸ್ವಾಮೀಜಿಗಳ ಸಹಿತ ಎಲ್ಲರ ತನಿಖೆಗೊಳಪಡಿಸಿ, ತಪ್ಪಿತಸ್ಥರು ಅಂತ ಕಂಡು ಬಂದವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ಜಾರಿಗೆ ತರಲಿ. ಅದೂ ಬಿಟ್ಟು, ಸಿಕ್ಕಿಬಿದ್ದವರಷ್ಟೇ ಅಪರಾಧಿಗಳು-ಸಿಕ್ಕಿ ಬೀಳದವರು ಸಾಚಾಗಳು ಅಂತ ಸುಮ್ಮನಿರುವುದು ಸರಿಯಲ್ಲ. ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಲೋಕಪಾಲ ಮಸೂದೆ ಜಾರಿಗೆ ತಂದು ಲೋಕಾಯುಕ್ತರಿಂದ ಭ್ರಷ್ಟರ ಮಟ್ಟ ಹಾಕಿದಂತೆ, ಈ ಕೂಡಲೇ 'ನೈತಿಕಪಾಲ' ಮಸೂದೆ ಜಾರಿಗೆ ತಂದು, ನೈತಿಕಾಯುಕ್ತರ ನಿಯೋಜಿಸಲಿ. ಕಾನೂನು ಕಾಯುವ ಕೈಗಳೇ ಕೊಳಕಾದರೆ ಜನರ ಗತಿ ಅಧೋಗತಿಗೆ ಇಳಿವ ಅಪಾಯವಿರುವುದರಿಂದ ಸಂವಿಧಾನದತ್ತವಾಗಿ 'ನೈತಿಕಪಾಲ' ಮಸೂದೆ ಜಾರಿಗೆ ತಂದು, ಸಮಾಜ ಮತ್ತು ಸರ್ಕಾರಿ ವ್ಯವಸ್ಥೆಯ ಸ್ವಾಸ್ಥ್ಯ ಕಾಪಾಡಲಿ.

# ಕನ್ನಡಿಗರುಕಳೆದುಕೊಂಡ ಕನ್ನಡ!

11ನೇ ಪುಟದಿಂದ

ಕನ್ನಡವೂ ಸೇರಿದಂತೆ ಕಂದಮಿಳು ನುಡಿಗಳಲ್ಲಿ 'ಬೆಬ್ಬರಿಗ' ಒತ್ತುಬರಿಗೆಗಳು ಇರುವುದಿಲ್ಲ. ನಮ್ಮಲ್ಲಿ ಇರುವುದು ಒಂದೇ ಬರಿಗೆಯ ಒತ್ತುಬರಿಗೆಗಳ 'ಒಬ್ಬರಿಗ'ದ ಮಾದರಿ. ಎತ್ತುಗೆಗೆ: ಅಪ್ಪ, ಅಮ್ಮ, ಅಣ್ಣ, ತಮ್ಮ, ಅಕ್ಕ, ಕಣ್ಣು, ಕೆಮ್ಮು, ದಮ್ಮು, ಮನ್ನಿಸು, ಮಣ್ಣು, ಹೊನ್ನು. ಇವುಗಳನ್ನು ಗಮನಿಸಿದರೆ ಬರಿಗೆಯೊಂದಕ್ಕೆ ಅದೇ ಬರಿಗೆಯ ಒತ್ತುಬರಿಗೆ ಇರುವುದು ಕಾಣಿಸುತ್ತದೆ. 'ಮಾರ್ಪಾಡು', 'ಏರ್ಪಾಡು' ಎಂಬಂತಹ ಅಲ್ಲೊಂದು ಇಲ್ಲೊಂದು ಬೆಬ್ಬರಿಗ ಒತ್ತುಬರಿಗೆ ಇರುವ ಒರೆಗಳು ಕನ್ನಡದಲ್ಲಿ ಕಂಡು ಬರುತ್ತವಾದರೂ, ಅವು ಬೇರಿನಲ್ಲಿ ಒಂದೇ ಒರೆಯಾಗಿರುವುದಿಲ್ಲ. ಬಿಡಿಸಿ ಹೇಳಬೇಕೆಂದರೆ, 'ಮಾರು + ಪಾಡು = ಮಾರ್ಪಾಡು ಹಾಗೂ ಏರು + ಪಾಡು = ಏರ್ಪಾಡು' ಎಂಬುದಾಗಿ ಉಂಟಾಗಿರುವಂತವು.

### ಕನ್ನಡಿಗರಿಗೆ ಒಗ್ಗದ ಒರೆಗಳು:

ಆದರೆ ಸಕ್ಕದಂತಹ ಹೆರ ನುಡಿಗಳಲ್ಲಿ ಬೇರೆ ಬೇರೆ ಬರಿಗೆಗಳ ಒತ್ತುಬರಿಗೆಗಳು ಒಂದೇ ಒರೆಯಲ್ಲಿಯೇ ತುಂಬಾ ಇರುತ್ತವೆ. ಎತ್ತುಗೆಗೆ: ಕ್ಷಮೆ, ಕ್ಷೇಮ, ಮಾತೃ, ಪಿತೃ, ಜ್ಞಾನ, ಪ್ರತಿಭೆ, ಪ್ರಕೃತಿ.. ಹೀಗೆ ಬೇರೆ ಬೇರೆ ಬರಿಗೆಗಳ ಒತ್ತು ಬರಿಗೆಗಳು ಕಂಡು ಬರುತ್ತವೆ. ಇದಲ್ಲದೇ ಕನ್ನಡದಲ್ಲಿ ಕಂಡು ಬಾರದ ಬಗೆಯಲ್ಲಿ ಒರೆಗಳ ಮೊದಲ ಬರಿಗೆಗೇ ಒತ್ತುಬರಿಗೆ ಇರುವುದೂ ಇದೆ. ಎತ್ತುಗೆಗೆ: ಕ್ಷಮೆ, ಕ್ರಾಂತಿ, ಪ್ರಶ್ನೆ, ಭ್ರಮೆ, ಕೃತಿ, ಜ್ಞಾನ. ಇಷ್ಟಕ್ಕೂ ನಿಲ್ಲದೇ ಎರಡು ಮೂರು ಬರಿಗೆಗಳ ಒತ್ತುಬರಿಗೆಗಳು ಒಂದೆಡೆಯೇ ಸೇರಿಕೊಂಡು ಸೊಲ್ಲನ್ನು ತುಂಬಾ ತೊಡಕಿನದಾಗಿ ಮಾಡುವುದನ್ನೂ ಕಾಣುತ್ತೇವೆ. ಎತ್ತುಗೆಗೆ: ಸ್ವಾತಂತ್ರ್ಯ, ಕ್ರೌರ್ಯ, ಅಷ್ಟೈಶ್ವರ್ಯ! ಸಕ್ಕದ ನುಡಿಯೊಳಗೇ ಹುಟ್ಟಿಕೊಂಡ ಈ ಬಗೆಯ ತೊಡಕುಗಳೇ ಆ ನುಡಿಯ ಬೆಳವಣಿಗೆಗೆ ಅಡ್ಡಿಯಾಗಿರುವುದು ಅನ್ನುವುದು ನನ್ನ ಅನಿಸಿಕೆ. ಹೀಗಾಗಿಯೇ ಅದು ನಲ್ಬರಹ ಬರೆಯಲು ಬಳಕೆಯಾದ ಮಟ್ಟಕ್ಕೆ ಮಾತಾಡಲು ಬಳಕೆಯಾಗದೆ ನಿಂತ ನೀರಾಗಿ ಹೋಯಿತು!

ಆದರೆ ಇಲ್ಲಿನ ತೊಡಕು ಏನೆಂದರೆ, ಕನ್ನಡಿಗರಾದ ನಮಗೆ ಈ ಬಗೆಯ ಒರೆಗಳು ಮಾತಿಗೆ ಹೊಂದುವುದೇ ಇಲ್ಲ. ಏಕೆಂದರೆ ನಾವು ಹನ್ನೂರಾರು ಏಡುಗಳಿಂದಲೂ ಸುಳುವಾದ ಕನ್ನಡ ಮಾತನ್ನು ಆಡಿಕೊಂಡು ಬಂದಿರುವುದರಿಂದಾಗಿ ನಮ್ಮ ನಾಲಿಗೆಯ ಹೊರಳುವಿಕೆ ಅದಕ್ಕೆ ತಕ್ಕುದಾಗಿ ಹೊಂದಿಕೊಂಡಿದೆಯೇ ಹೊರತಾಗಿ, ತೊಡಕಿನ ಮಾತನ್ನು ಉಲಿಯಲು ಅಲ್ಲ. ಹಾಗಾಗಿಯೇ ನಮ್ಮಲ್ಲಿ ಹಲವರು ಈ ಬಗೆಯ ಒರೆಗಳನ್ನು ಓದುವಾಗ, ಇಲ್ಲವೇ ಹೇಳುವಾಗ ತುಂಬಾ ತೊಡಕನ್ನು ಪಡುತ್ತಾರೆ, ಹಾಗೂ ಹೆಚ್ಚಿನವರು ತಪ್ಪಾಗಿ ಉಲಿಯುತ್ತಾರೆ. ಈ ಸಲುವಾಗಿಯೇ ಹಿಂದೆಯೇ ನಮ್ಮಲ್ಲಿ 'ತದ್ಭವ' ಒರೆಗಳ ಮಾದರಿ ಹುಟ್ಟಿಕೊಂಡಿತಾದರೂ, ತತ್ಸಮಗಳನ್ನೂ ಹಾಗೆಯೇ ತಂದು ಕನ್ನಡದೊಳಗೆ ತುರುಕುವ ಕೆಲಸವೇನೂ ನಿಲ್ಲಲಿಲ್ಲ! ಇಂದಿಗೂ ಹೊಸ ಹೊಸ ಸಕ್ಕದ ಒರೆಗಳನ್ನು ಹುಡುಕಿ ತಂದು ಕನ್ನಡದ ತಿಳಿನೀರಿನಲ್ಲಿ ಸೇರಿಸುತ್ತಲೇ ಇದ್ದಾರೆ. ಅಂದಿನ ಶ್ರೀವಿಜಯ, ಆಂಡಯ್ಯ ಸೇರಿದಂತೆ ಹಲವು ನಲ್ಬರೆಗರು ಕನ್ನಡದಲ್ಲಿ ಸಕ್ಕದ ಎಲ್ಲೆ ಮೀರಿದ ಸೇರಿಸಿಕೆಯ ಬಗ್ಗೆ ಎಚ್ಚರಿಸಿದರಾದರೂ ನಮ್ಮ ಹೆಚ್ಚಿನ ಬರೆಗರು ಎಣಿಕೆಗೆ ತೆಗೆದುಕೊಳ್ಳದೇ ಹೋದುದರ ದೊರೆತ ಏನಾಗಿದೆಯೆಂದರೆ, 'ಸತ್ಯ ಮೇವ ಜಯತೇ' ಎಂಬ ಹೆರ ನುಡಿಯ ಸೊಲ್ಲು ನಮ್ಮ ನಾಡ ಗುರ್ತಿಟದಲ್ಲಿ ಸೇರಿಕೊಂಡರೂ ನಮಗೆ ಏನೂ ಅನ್ನಿಸುವುದೇ ಇಲ್ಲ!

ಇದು ಹೇಗಾಗಿದೆಯಪ್ಪಾ ಅಂದರೆ ಚೆನ್ನಾಗಿದ್ದ ಕನ್ನಡದೊಳಗೆ ನಾವೇ ಬೇಕೆಂದೇ ಬೇರೆ ತೊಡಕಿನ ಒರೆಗಳನ್ನು ತಂದು ತುರುಕಿಕೊಂಡು ನಾವೇ ತೊಂದರೆ ಪಡುವ ನೆಲೆಪಾಡನ್ನು ಉಂಟು ಮಾಡಿಕೊಂಡಿದ್ದೇವೆ! ಇದರ ಹೆಚ್ಚಿನ ಹೊರೆ ಬೀಳುತ್ತಿರುವುದು ಕನ್ನಡ ಕಲಿಯಲು ಹೊರಡುವ ನಮ್ಮ ಮಕ್ಕಳ ಮೇಲೆ ಅನ್ನುವುದನ್ನು ಯಾರೂ ಗಮನಿಸುತ್ತಿಲ್ಲ!


## ಒರೆತಿಳಿಕೆ

- ಆಡಳಿತ – ಸರ್ಕಾರ
- ಆಳ್ಕೆಗ – ರಾಜಕಾರಣಿ
- ಎತ್ತುಗೆ – ಉದಾಹರಣೆ
- ಎಡೆಪಾಲು – ಖಜಾನೆ
- ಏಡು – ವರ್ಷ
- ಒಕ್ಕೂಟದಾಳ್ವಿಕೆ – ಕೇಂದ್ರ ಸರ್ಕಾರ
- ಒತ್ತುಬರಿಗೆ – ಒತ್ತಕ್ಷರ
- ಒಬ್ಬರಿಗ – ಒಂದೇ ಬರಿಗೆಯ ಒತ್ತುಬರಿಗೆ
- ಒರೆ – ಪದ, ಶಬ್ದ
- ಒರೆತಿಳಿಕೆ – ಶಬ್ದಾರ್ಥ
- ಕಂದಮಿಳು – ದ್ರಾವಿಡ
- ಕೆಲಸಮನೆ – ಕಚೇರಿ
- ಕೇಳ್ವಿ – ಪ್ರಶ್ನೆ
- ಗುರ್ತಿಟ – ಲಾಂಛನ
- ದೊರೆತ – ಪರಿಣಾಮ, ಫಲಿತಾಂಶ
- ನಲ್ಬರೆಗ – ಸಾಹಿತಿ
- ನಾಡಳಿತ – ರಾಜ್ಯ ಸರ್ಕಾರ
- ನೆಲತರಳೆ – ಪ್ರಪಂಚ
- ನೆಲೆಪಾಡು – ಪರಿಸ್ಥಿತಿ
- ಪದನೆರಕೆ – ಶಬ್ದಕೋಶ
- ಪೇರಿಕೆ – ಪಟ್ಟಿ
- ಬಗೆಯರಿಕೆ – ಮನವರಿಕೆ
- ಬರಿಗೆ – ಅಕ್ಷರ
- ಬರೆಗ – ಲೇಖಕ
- ಬಾನೋಡ – ವಿಮಾನ
- ಬೆಬ್ಬರಿಗ – ಬೇರೆ ಬೇರೆ ಬರಿಗೆ (ವಿಜಾತಿ)
- ಬೇರ್ಮೆ – ಭಿನ್ನತೆ, ವ್ಯತ್ಯಾಸ
- ಮಾಟನುಡಿ – ಮಂತ್ರ
- ಮುಡಿ – ಮಿಲಿಯನ್
- ಸಕ್ಕ – ಸಂಸ್ಕೃತ
- ಸುತ್ತೆಡೆ – ಪ್ರದೇಶ
- ಸುಳು – ಸುಲಭ
- ಹಣಮನೆ – ಬ್ಯಾಂಕ್
- ಹನ್ನೂರು – ಸಾವಿರ
- ಹನ್ನೂರಾರು – ಸಾವಿರಾರು
- ಹಾಡಿಕೆ – ಕಾವ್ಯ
- ಹೊತ್ತು – ಕಾಲ
- ಹೊದ್ದಿಗೆ – ಅಂಚಿಗೆ

# ಎಲ್ಲರ ಭಾಷೆ ಕನ್ನಡವಾದರೆ 'ನೈಜ ಕರ್ನಾಟಕ ಸಾಧ್ಯ!'

4ನೇ ಪುಟದಿಂದ

ಬೆಂಗಳೂರಲ್ಲಿದ್ದ 50-60 ಚಿತ್ರಮಂದಿರಗಳಲ್ಲಿ ಬಹುತೇಕ ಕಡೆ ಹಿಂದಿ-ಇಂಗ್ಲಿಷ್-ತಮಿಳು-ತೆಲುಗು-ಚಿತ್ರಗಳೇ ಪ್ರದರ್ಶನವಾಗುತ್ತಿದ್ದವು. ಕನ್ನಡಕ್ಕೆ ಕೇವಲ ಒಂದೆರಡು ಚಿತ್ರಮಂದಿರಗಳಷ್ಟೆ ಗತಿಯಾಗಿದ್ದವು. ಕನ್ನಡ ಕಲಾವಿದರು-ನಿರ್ದೇಶಕರು-ನಿರ್ಮಾಪಕರೆಲ್ಲಾ ಮದ್ರಾಸಿನಲ್ಲಿದ್ದರು. ಆದರೆ ಬೃಹತ್ ಸಾರ್ವಜನಿಕ ಕಾರ್ಖಾನೆಗಳೆಲ್ಲಾ ಬೆಂಗಳೂರಲ್ಲೆ ಇದ್ದವು. ಬಿಇಎಲ್, ಐಟಿಐ, ಎನ್‌ಎಎಲ್, ಬಿಇಎಂಎಲ್, ಎಚ್‌ಎಂಟಿ, ಎಚ್‌ಎಎಲ್, ಬಿಎಚ್‌ಇಎಲ್ ಕಾರ್ಖಾನೆಗಳಲ್ಲಿ ಮುಕ್ಕಾಲು ಭಾಗದಷ್ಟು ಪರಭಾಷಿಕರೇ ಉದ್ಯೋಗಿಗಳಾಗಿದ್ದರು. ಎಲ್ಲೆಡೆ ಕನ್ನಡಿಗ ಉದ್ಯೋಗಿಗಳು ಅಲ್ಪಸಂಖ್ಯಾತರಾಗಿದ್ದರು. ಕೇಂದ್ರ ಸರ್ಕಾರದ ತೆರಿಗೆ ಇಲಾಖೆ, ರೈಲ್ವೆ, ಅಂಚೆ, ಟೆಲಿಫೋನ್ ಮುಂತಾದ ಇಲಾಖೆಗಳಲ್ಲೂ ಕನ್ನಡೇತರರೇ ಹೆಚ್ಚಿದ್ದರು.





ಅದನ್ನೆಲ್ಲಾ ಕಂಡೇ ಕನ್ನಡ ಚಳವಳಿ ಹುಟ್ಟಿಕೊಂಡಿತ್ತು. ಪ್ರತೀ ಕನ್ನಡ ಚಳವಳಿ ಸಭೆ-ಸಮಾರಂಭಗಳಲ್ಲಿ 'ಕನ್ನಡಿಗರು ಕನ್ನಡ ಪತ್ರಿಕೆ ಮತ್ತು ಪುಸ್ತಕಗಳನ್ನು ಓದಿರಿ, ಕನ್ನಡ ಸಿನಿಮಾಗಳನ್ನೆ ನೋಡಿರಿ' ಎಂದು ಕರೆ ಕೊಡುತ್ತಾ ಹೊರಟಿದ್ದರ ದೆಸೆಯಿಂದ ಕನ್ನಡಿಗರು ನಿಧಾನವಾಗಿ ಜಾಗೃತಗೊಳ್ಳತೊಡಗಿದ್ದರು. ಹೆದರಿ ಮನೆಯಲ್ಲಿ ಸೇರಿಕೊಂಡಿದ್ದ ಕನ್ನಡಿಗರು ಬೀದಿಗೆ ಬಂದರು. ಕನ್ನಡಕ್ಕೆ ಜಯವಾಗಲಿ ಅಂದರು. ಪರಭಾಷಿಕರ ದಬ್ಬಾಳಿಕೆ ವಿರುದ್ಧ ಸೆಟೆದು ನಿಂತರು. ಧಿಕ್ಕಾರ ಮೊಳಗಿಸಿದರು. ಕವಿ ಮಂಗವರ ಕರೆಯಂತೆ 'ಎಲ್ಲೆ ಇರು ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು' ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧವಾದರು. ಸತ್ತವರಂತೆ ಮಲಗಿ ನಟಿಸುತ್ತಿದ್ದವರು ಬೀದಿಗಿಳಿದು ಗರ್ಜಿಸತೊಡಗಿದರು.

ಆ ಹೊತ್ತಿನ ಭಯಂಕರ ಸ್ಥಿತಿಯಿಂದ ಹೊರಳಿಕೊಳ್ಳುವ ಸ್ಥಿತಿಯೂ ರೋಚಕವಾಗಿತ್ತು. ಕನ್ನಡ ಚಿತ್ರಗಳನ್ನು ಮತ್ತೆ ಮತ್ತೆ ನೋಡತೊಡಗಿದ್ದರಿಂದ ಉತ್ತಮ ಕನ್ನಡ ಚಿತ್ರಗಳು ನೂರು ದಿನ, 25 ವಾರ ಪ್ರದರ್ಶನವಾಗತೊಡಗಿದ್ದವು. ಕನ್ನಡ ಪತ್ರಿಕೆಗಳ ಪ್ರಸಾರ ಕೆಲವು ಸಾವಿರದಷ್ಟೆ ಇದ್ದವು ಲಕ್ಷಗಳ ಸಂಖ್ಯೆಯಲ್ಲಿ ಮಾರಾಟವಾಗತೊಡಗಿದ್ದವು. ಪ್ರಸಿದ್ಧ ಸಾಹಿತಿಗಳ ಕನ್ನಡ ಪುಸ್ತಕಗಳು ಸಾವಿರ, 2 ಸಾವಿರ, ಮರು ಮುದ್ರಣವಾಗತೊಡಗಿ ಕಳೆದ ಶತಮಾನದಲ್ಲಿ ಉತ್ತಮೋತ್ತಮ ಕೃತಿಗಳು ಕನ್ನಡದಲ್ಲಿ ಪ್ರಕಟವಾಗುವಂತಾಗಿತ್ತು. ಅಷ್ಟೇ ಅಲ್ಲ, ಕನ್ನಡ ಸಾಹಿತಿಗಳಿಗೆ ಒಂದರ ನಂತರ ಮತ್ತೊಂದರಂತೆ ಜ್ಞಾನಪೀಠ ಪ್ರಶಸ್ತಿ, ಸರಸ್ವತಿ ಸಮ್ಮಾನ್ ಇತ್ಯಾದಿ ಪ್ರತಿಷ್ಠಿತ ಪ್ರಶಸ್ತಿಗಳು ಬರುವಂತಾಗಿತ್ತು.

ಅತ್ತ ಕನ್ನಡ ಚಿತ್ರಗಳಿಗೆ ಸಿಕ್ಕ ಪ್ರೋತ್ಸಾಹದಿಂದ ಕನ್ನಡ ಚಿತ್ರರಂಗ ರಾಜ್ಯದಲೆ ಬೆಳೆಯುವ ಅವಕಾಶ ಲಭಿಸಿತ್ತು. ರಾಜ್ಯ ಸರ್ಕಾರವೂ ರಾಜ್ಯದಲ್ಲಿ ತಯಾರಾಗುವ ಕನ್ನಡ ಚಿತ್ರಗಳಿಗೆ ಸಬ್ಸಿಡಿ ನೀಡತೊಡಗಿತ್ತು. ಬೆಂಗಳೂರು-ಮೈಸೂರು ನಗರಗಳಲ್ಲಿ ಸ್ಟುಡಿಯೋಗಳು ಸ್ಥಾಪನೆಗೊಂಡವು. ಡಬ್ಬಿಂಗ್, ಪ್ರಸಾದನ ಇತ್ಯಾದಿ ತಾಂತ್ರಿಕ ಕೇಂದ್ರಗಳು ಆರಂಭಗೊಂಡವು. ಉತ್ತಮ ಕನ್ನಡ ಚಿತ್ರಗಳಿಗೆ, ಉತ್ತಮ ಅಭಿನಯಕ್ಕೆ, ಉತ್ತಮ ನಿರ್ದೇಶನ-ಸಂಗೀತ-ಛಾಯಾಗ್ರಹಣ-ಸಂಭಾಷಣೆ ಇತ್ಯಾದಿಗಳಿಗೆ ವಾರ್ಷಿಕ ಪ್ರಶಸ್ತಿ ನೀಡಿಕೆ ಪ್ರಾರಂಭಗೊಂಡಿದ್ದರಿಂದ ಬಹಳಷ್ಟು ಕಲಾವಿದರು-ತಂತ್ರಜ್ಞರು ಬೆಂಗಳೂರು-ಮೈಸೂರುಗಳಲ್ಲಿ ಬಂದು ವಾಸಿಸಲು ಮುಂದಾಗಿದ್ದರು. ಅದರ ಜೊತೆಗೆ ಬಹಳಷ್ಟು ಚಿತ್ರಮಂದಿರಗಳು ಕನ್ನಡ ಚಿತ್ರ ಪ್ರದರ್ಶಿಸಲು ಮುಂದಾಗಿದ್ದವು.

ಅಷ್ಟಲ್ಲದೆ, ಎಲ್ಲ ಕಾರ್ಖಾನೆಗಳಲ್ಲಿ ಅಲ್ಪಸಂಖ್ಯಾತರಾಗಿದ್ದರೂ, ಕನ್ನಡ ಉದ್ಯೋಗಿಗಳು ಕನ್ನಡ ಸಂಘ ಸ್ಥಾಪಿಸಿ ರಾಜ್ಯೋತ್ಸವ ಆಚರಿಸುವ, ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ನೀಡಬೇಕೆನ್ನುವ ಧ್ವನಿಯೆತ್ತುತ್ತಾ ಹೋದಂತೆ ಕನ್ನಡಿಗರ ಆಗ್ರಹಕ್ಕೆ ಮಾನ್ಯತೆ ಸಿಗುವಂತಾಗಿತ್ತು. ಕೇಂದ್ರ ಸರ್ಕಾರೀ ವಿವಿಧ ಇಲಾಖೆಗಳಲ್ಲೂ ಕನ್ನಡಿಗರಿಗೆ ಉದ್ಯೋಗ ನೀಡುವ ಪ್ರವೃತ್ತಿ ಬೆಳೆಯತೊಡಗಿತ್ತು. ಕನ್ನಡಿಗರಿಗೆ ಎಲ್ಲೇ ಅನ್ಯಾಯವಾದರೂ, ಅಲ್ಲಿ ಪ್ರತಿರೋಧ ಪ್ರಾರಂಭವಾಗತೊಡಗಿದ್ದು ಉತ್ತಮ ಬೆಳವಣಿಗೆಯಾಗಿತ್ತು.

ಇದು 1956ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಗಬೇಕೆಂಬ ಹಿನ್ನೆಲೆಯಲ್ಲಿ ಕನ್ನಡ ರಾಜ್ಯ ಉದಯವಾಗಿದ್ದ ಕಾಲದಲ್ಲಿದ್ದ ಭೀಕರ ಪರಿಸ್ಥಿತಿ ಕ್ರಮೇಣ ಸುಧಾರಣೆಗೊಂಡ ಕಥನವಾಗಿದೆ. ಅದೇ ದಿನ ಉದಯವಾದ ಆಂಧ್ರ ಪ್ರದೇಶದಲ್ಲಿ ಈ ಬಗೆಯ ಕೆಟ್ಟ ಪರಿಸ್ಥಿತಿ ಇರಲಿಲ್ಲ. ಬಹಳ ಕಾಲ ನಿಜಾಮರು ಆಳಿದ್ದ ಪ್ರದೇಶ ಅದಾಗಿದ್ದರೂ ಆ ರಾಜ್ಯ ಭಾಷೆ ತೆಲುಗಿಗೆ ವ್ಯಾಪಕವಾದ ಮಾನ್ಯತೆಯಿತ್ತು. ಉರ್ದು ಮನೆ ಭಾಷಿಕರಾದ ಮುಸ್ಲಿಮರ ಮನೆಯಲ್ಲೂ ತೆಲುಗು ಪತ್ರಿಕೆ-ಪುಸ್ತಕ ಓದುವ ಪರಿಸ್ಥಿತಿ ಬಹುತೇಕ ಕಡೆಯಿತ್ತೆಂದರೆ

ವಿಸ್ಮಯವಾಗುತ್ತದೆ. ಮುಸ್ಲಿಮರು ತೆಲುಗಿನಲ್ಲಿ ಮಾತಾಡುವ ಪರಿಪಾಠವಿತ್ತು. ತಮಿಳುನಾಡಿನಲ್ಲೂ ಬಹಳಷ್ಟು ಮುಸ್ಲಿಮರು ತಮಿಳು ಮಾತಾಡುವ, ತಮಿಳು ಪತ್ರಿಕೆ-ಪುಸ್ತಕಗಳನ್ನು ಓದುವ ಅಭ್ಯಾಸ ವ್ಯಾಪಕವಾಗಿತ್ತು.

ಆದರೆ ನಮ್ಮ ರಾಜ್ಯದಲ್ಲಿ ಮುಸ್ಲಿಮರಿರಲಿ, ತಮಿಳು-ಮಲೆಯಾಳಿಗಳಿರಲಿ. ಬಹುತೇಕರು ಅವರ ಭಾಷೆಯ ಪತ್ರಿಕೆ-ಪುಸ್ತಕ ಓದುತ್ತಿದ್ದ ಪ್ರವೃತ್ತಿ ಆಳವಾಗಿ ಬೆಳೆದುಕೊಂಡಿತ್ತು. ರಾಜ್ಯ ಏಕೀಕರಣಗೊಂಡ ನಂತರವೂ ಇದರಲ್ಲಿ ದೊಡ್ಡ ಬದಲಾವಣೆ ಕಾಣದಿದ್ದುದು ವಿಷಾದದ ಸಂಗತಿ. ಹಾಗೆ ನೋಡಿದರೆ, ಹೆಚ್ಚಿನ ಸಂಖ್ಯೆಯ ಮುಸ್ಲಿಮರು-ತಮಿಳರು-ತೆಲುಗರು-ಮಲೆಯಾಳಿಗಳು ಕನ್ನಡದಲ್ಲಿ ಕೀರ್ತನೆ-ಗೀತೆ-ಕಾವ್ಯ-ನಾಟಕ-ಕಾದಂಬರಿಗಳನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ. ಅದಕ್ಕೆ ಉದಾಹರಣೆಯಾಗಿ ಶಿಶುನಾಳ ಷರೀಫ, ಎಸ್.ಕೆ. ಕರೀಂಖಾನ್, ಕೆ.ಎಸ್. ನಿಸಾರ್ ಅಹ್ಮದ್, ಬಾನು ಮುಷ್ತಾಕ್, ರಹಮತ್ ತರೀಕೆರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಜಿ.ಪಿ. ರಾಜರತ್ನಂ, ಡಿ.ವಿ. ಗುಂಡಪ್ಪ ಮತ್ತಿತರ ಪ್ರಖ್ಯಾತರನ್ನು ಉಲ್ಲೇಖಿಸಬಹುದು. ಹೀಗಿದ್ದರೂ, ಆ ಭಾಷಾ ಸಮುದಾಯಗಳು ಕನ್ನಡದತ್ತ ಒಲವು ಬೆಳೆಸಿಕೊಳ್ಳದೇ ಹೋಗಿದ್ದು ದೌರ್ಭಾಗ್ಯದ ಸಂಗತಿ.

ಅದಕ್ಕೆ ಕಾರಣ ಕನ್ನಡಿಗರೇ ಆಗಿದ್ದಾರೆ. ಕನ್ನಡಿಗರಿಗೇ ಕನ್ನಡ ಬೇಕಿಲ್ಲದಿರುವಾಗ ನಮಗೇಕೆ ಬೇಕು ಅದರ ಗೊಡವೆ ಎಂಬ ತಾತ್ಸಾರ ಭಾವ ವ್ಯಾಪಕವಾಗಿ ಪ್ರಭಾವಿಸಿತ್ತು. ಹಾಗೇ ಕನ್ನಡ ನಾಡನ್ನು ಆಳಿದ ಸರ್ಕಾರಗಳದ್ದೂ ದೊಡ್ಡ ಪಾಲಿನ ತಪ್ಪುಗಳೂ ಕಾರಣವಾಗಿವೆ. ರಾಜ್ಯವನ್ನಾಳಿದ ಬಹುತೇಕರು ಕನ್ನಡಿಗರೇ ಆಗಿದ್ದರೂ, ಯಾರಿಗೂ ಕನ್ನಡವನ್ನು ತಳಮಟ್ಟದಿಂದ ಮೇಲ್ಮಟ್ಟದವರೆಗೂ ಆಡಳಿತ ಭಾಷೆ ಮಾಡಲೇಬೇಕೆನ್ನುವ ಹಟ ಬರಲಿಲ್ಲ. ರಾಜ್ಯದಲ್ಲಿರುವ ಎಲ್ಲರೂ ಕನ್ನಡ ಕಲಿಯುವ ವಾತಾವರಣವನ್ನುಂಟು ಮಾಡುವ ಮನಸ್ಸು ಬರಲಿಲ್ಲ. ಶಿಕ್ಷಣದಲ್ಲಿ ಒಂದು ಭಾಷೆಯಾಗಿಯಾದರೂ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕೆನ್ನುವ ಅಭಿಮಾನ-ಬದ್ಧತೆ ಬರಲೇ ಇಲ್ಲ.

ಇಂತಹ ಕನ್ನಡಿಗರ ಮತ್ತು ಕನ್ನಡ ಸರ್ಕಾರಗಳ ತಾತ್ಸಾರ ಧೋರಣೆಯನ್ನು ಕಂಡ ಪರಭಾಷಿಕರು ಕನ್ನಡವನ್ನು ಕಲಿಯುವ, ನೆಲದ ಭಾಷೆ ಕನ್ನಡವನ್ನು ಒಪ್ಪುವ ಮನಸ್ಸು ಮಾಡದೇ ಹೋಗಿದ್ದರು. ಇಲ್ಲಿ ಉದ್ಯೋಗ-ಸುಖ-ಸಂಪತ್ತೆಲ್ಲವೂ ಬೇಕು, ಆದರೆ ಇಲ್ಲಿಯ ಭಾಷೆ ಮಾತ್ರ ಬೇಡ ಎನ್ನುವ ದಾರ್ಷ್ಟ್ಯ ಮನಸ್ಥಿತಿ ಬೆಳೆಯುತ್ತಾ ಹೊರಟು ಅದು ಬಲವಾಗಿ ಬೆಳೆದುಕೊಂಡಿರುವುದನ್ನು ರಾಜ್ಯದ ಎಲ್ಲ ಭಾಗಗಳಲ್ಲಿ ಕಾಣುವ ದುರಂತ ಈ ನಾಡಿನದ್ದಾಗಿದೆ. ರಾಜ್ಯವನ್ನು ಸುತ್ತಿಕೊಂಡಿರುವ 4-5 ಭಾಷಾ ರಾಜ್ಯಗಳಲ್ಲಿ ವಿಭಿನ್ನ ಭಾಷಾ ಪದ್ಧತಿಗಳಿದ್ದರೂ, ಕನ್ನಡ ನಾಡಿನ ಭಾಷಾ ನೀತಿ, ಭಾಷಾ ಧೋರಣೆಯಿಂದಾಗಿ ಯಾರಿಗೂ ಕಲಿಯುವ ಮನಸ್ಸು ಬರದೇ ಹೋಗಿರುತ್ತದೆ.

ಈ ಹೊತ್ತಿಗೂ ಆಂಧ್ರ-ತೆಲಂಗಾಣ-ತ.ನಾಡು-ಕೇರಳ-ಮಹಾರಾಷ್ಟ್ರ ರಾಜ್ಯಗಳ ಯಾವ ಭಾಗಕ್ಕೇ ಹೋದರೂ ಅಲ್ಲಿರುವ ಬೇರೆ ಭಾಷಿಕರು ಸ್ಥಳೀಯ ಭಾಷೆಯನ್ನು ಕಲಿತು ಬದುಕು ಸಾಗಿಸುತ್ತಾರೆಂಬ ವಾಸ್ತವ ಸತ್ಯವನ್ನು ಅರಿತಿದ್ದೇವೆ. ನೆರೆಯ ಗಡಿ ರಾಜ್ಯಗಳಲ್ಲಿರುವ ಕನ್ನಡಿಗರು ಕೂಡಾ ಅಲ್ಲಲ್ಲಿಯ ಭಾಷೆಯನ್ನು ಕಲಿತು ಸೌಹಾರ್ದ ಭಾವದಿಂದ ಬದುಕುತ್ತಿರುವುದನ್ನು ಕಂಡೂ ಕೂಡಾ ರಾಜ್ಯದಲ್ಲಿರುವ ಕನ್ನಡೇತರರು ಕನ್ನಡ ಕಲಿಯುವಿಕೆಯತ್ತ ದಿವ್ಯ ನಿರ್ಲಕ್ಷ್ಯ ತಾಳುತ್ತಿರುವುದು ದೌರ್ಭಾಗ್ಯದ ಸಂಗತಿಯಾಗುಳಿಯುತ್ತಿದೆ.

ಕನ್ನಡಿಗರ ಮೇಲೆ ವಿವಿಧ ಭಾಷೆಗಳು ಆಯಾಯ ಕಾಲಘಟ್ಟದಲ್ಲಿ ಹೇರಲ್ಪಟ್ಟು, ಅವುಗಳ ದಾಳಿ ಅಥವಾ ಹೇರಿಕೆಯಿಂದ ನರಳಿರುವ ಇತಿಹಾಸ ನಮ್ಮೊಂದಿಗಿರುವುದನ್ನು ಅರಿತಿದ್ದೇವೆ. ಪುರಾಣ ಕಾಲದಲ್ಲಿ ಸಂಸ್ಕೃತ ಭಾಷೆ ಕನ್ನಡಿಗರನ್ನು ಶೋಷಣೆ ಮಾಡಿದೆ. ಅದೊಂದು ದೇವ ಭಾಷೆಯೆಂತಲೂ, ಜಾತಿ ಕನಿಷ್ಠರು ಅದನ್ನು ಕಲಿಯಬಾರದೆಂದು ಕಟ್ಟಪ್ಪಣೆ ವಿಧಿಸಿದ್ದ ದುರುಳ ಇತಿಹಾಸ ಕನ್ನಡ ನಾಡಿನಲ್ಲಿ ಆಗಿಹೋಗಿದೆ. ಆನಂತರದ ಕಾಲಘಟ್ಟದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಇಂಗ್ಲಿಷ್ ಕಲಿಕೆಯನ್ನು ಮೇಲ್ಜಾತಿ-ಮೇಲ್ವರ್ಗದವರು ಮಾಡುತ್ತಾ ಉದ್ಯೋಗ-ಉನ್ನತ ಸ್ಥಾನಮಾನ-ಸುಖ ಸಂಪತ್ತಿನೊಡನೆ ಮೆರೆದಿದ್ದು ಜರುಗಿ ಹೋಗಿದೆ. ಆದರೆ ಮೆಕಾಲೆ ಶಿಕ್ಷಣ ಪದ್ಧತಿಯಿಂದಾಗಿ ಎಲ್ಲಾ ಜಾತಿ-ವರ್ಗದವರೂ ಇಂಗ್ಲಿಷ್ ಕಲಿಯಲು, ಬೆಳೆಯಲು ಅವಕಾಶ ಸಿಕ್ಕಿದ್ದರ ಫಲವಾಗಿ ಶೋಷಿತ ಹಾಗೂ ನಿರ್ಲಕ್ಷಿತ ಸಮುದಾಯಗಳೂ ಇಂಗ್ಲಿಷ್‌ನ್ನು ವ್ಯಾಪಕವಾಗಿ ಕಲಿಯಲು ಸಾಧ್ಯವಾಯಿತೆನ್ನಬಹುದು.

ಆದರೆ ಈ ಸಂಸ್ಕೃತ-ಇಂಗ್ಲಿಷ್ ಭಾಷಾ ವ್ಯಾಮೋಹಗಳಿಂದಾಗಿ ಕನ್ನಡಿಗರೇ ಕನ್ನಡವನ್ನು ದೂರ ಮಾಡಿಕೊಂಡಿದ್ದು ದುರಂತದ ಸಂಗತಿ. ಆ ಹೊತ್ತಿಗೆ ಹುಟ್ಟಿಕೊಂಡ ಕನ್ನಡ ಚಳವಳಿಯಿಂದ ಕನ್ನಡ ಭಾಷಾ ಪರವಾದ ಕೂಗು ಮೊಳಗಿದ್ದ ದೆಸೆಯಿಂದ ಕನ್ನಡದತ್ತ ಕನ್ನಡಿಗರು ವಾಲುವಂತಾದುದು ಒಳ್ಳೆಯ ಬೆಳವಣಿಗೆಯಾಗಿದ್ದರೂ, ಅಷ್ಟರಲ್ಲಿ ಆರಂಭವಾದ ಹಿಂದಿ ಹೇರಿಕೆಯಿಂದ ಮತ್ತೆ ಕನ್ನಡಕ್ಕೆ ಹಿನ್ನಡೆಯಾಗತೊಡಗಿತ್ತು. ಹಿಂದಿ ಭಾಷೆ ಪರವಾದ ವಕಾಲತ್ತು ಮತ್ತು ಪ್ರೋತ್ಸಾಹಕ್ಕೆ ಪ್ರಬಲವಾಗಿ ಭಾರತ ಸರ್ಕಾರ ಗಟ್ಟಿಯಾಗಿ ನಿಂತಿದ್ದು, ಕನ್ನಡಿಗರನ್ನು ಹೆಚ್ಚಾಗಿ ಸೆಳೆದಿದ್ದು ನೋವಿನ ಸಂಗತಿ. ದಕ್ಷಿಣ ಭಾರತದ ನಮ್ಮ ನೆರೆ ರಾಜ್ಯಗಳು ಹಿಂದಿಗೆ ಕೊಟ್ಟ ಮಾನ್ಯತೆ ಅಷ್ಟಕ್ಕಷ್ಟೆ ಇದ್ದರೂ, ಕರ್ನಾಟಕ ಸರ್ಕಾರಗಳ ವಿಚಿತ್ರ ಭಾಷಾ ಧೋರಣೆಯಿಂದಾಗಿ ಕನ್ನಡವು ಸಂಕಷ್ಟಕ್ಕೆ ಸಿಲುಕಿಕೊಳ್ಳುವಂತಾಗಿದೆ.

ಅದಕ್ಕೇ ನಮ್ಮ ರಾಷ್ಟ್ರಕವಿ ಕುವೆಂಪು ಅವರು 'ತ್ರಿಶೂಲವೆಂಬ ತ್ರಿಭಾಷಾ ಸೂತ್ರ ನಮ್ಮ ಮಕ್ಕಳ ಕಲಿಕೆಯನ್ನು ಕೊಲ್ಲುತ್ತಿದೆ' ಎಂದಿದ್ದರು. ಅದು ನಮ್ಮ ಸರ್ಕಾರಗಳಿಗೆ ಅರ್ಥವಾಗಬೇಕಿದೆ. ಈ ಹೊತ್ತಿನಲ್ಲಾದರೂ 'ದ್ವಿಭಾಷಾ ನೀತಿ'ಯನ್ನು ಒಪ್ಪಿಕೊಂಡು ಅದನ್ನು ಶಿಕ್ಷಣದಲ್ಲಿ ಜಾರಿಗೊಳಿಸುವ ಗಟ್ಟಿ ನಿರ್ಧಾರದ ಧೈರ್ಯ ತಾಳಿದಲ್ಲಿ ಕನ್ನಡಕ್ಕೆ, ಕನ್ನಡಿಗರಿಗೆ ಹೊಸದೊಂದು ಭಾಷಾ ನೆಲೆಗಟ್ಟು ಪ್ರಾಪ್ತವಾಗಬಲ್ಲದೆಂದು ಭರವಸೆ ಇಡಬಹುದು.

7ನೇ ಪುಟದಿಂದ

# ಫೆಬ್ರವರಿ ಕ್ರಾಂತಿಗೆ ಡಿಕೆಶಿ ಬಣ ಸಜ್ಜು?

ಕುತೂಹಲದ ಸಂಗತಿ ಎಂದರೆ; ಸೋನಿಯಾಗಾಂಧಿ, ರಾಬರ್ಟ್ ವಾದ್ರಾ ಮತ್ತು ಪ್ರಿಯಾಂಕಾ ಗಾಂಧಿ ಅವರು ಇವತ್ತು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲಿ ಎಂದು ಒತ್ತಾಸೆ ಕೊಡುತ್ತಾರೆ. ಆದರೆ ಅವರ ಒತ್ತಾಸೆಯನ್ನು ರಾಹುಲ್ ಗಾಂಧಿ ಅವರು ಮುಖ್ಯವಾಗಿ ಪರಿಗಣಿಸುವುದಿಲ್ಲ. ಯಾಕೆಂದರೆ ತಾಯಿ, ಸಹೋದರಿ ಮತ್ತು ಅಳಿಯ ಸೇರಿದರೆ ಡಿ.ಕೆ.ಶಿವಕುಮಾರ್ ಅವರ ಪರ ಬ್ಯಾಟಿಂಗ್ ಮಾಡುತ್ತಾರೆ ಎಂಬುದು ರಾಹುಲ್ ಗಾಂಧಿಯವರಿಗೆ ಗೊತ್ತಿದೆ.

ಹೀಗಾಗಿ ಅವರು ಯಾರೆಷ್ಟೇ ಹೇಳಿದರೂ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಬೇರೆ ಒಬ್ಬರನ್ನು ಮುಖ್ಯಮಂತ್ರಿ ಮಾಡಲು ಬಯಸುತ್ತಿಲ್ಲ. ಕುತೂಹಲದ ಸಂಗತಿಯೆಂದರೆ ತಮ್ಮ ಮನದಿಂಗಿತವವನ್ನು ಅವರು ಕರ್ನಾಟಕದ ಹಲವು ನಾಯಕರ ಬಳಿ ಪದೇ ಪದೇ ಬಳಿ ಪ್ರಸ್ತಾಪಿಸಿದ್ದಾರೆ. ಇತ್ತೀಚೆಗೆ ದಿಲ್ಲಿಗೆ ಹೋದ ಇಬ್ಬರು ಯುವ ಮಂತ್ರಿಗಳ ಬಳಿ ಮಾತನಾಡಿದ ರಾಹುಲ್ ಗಾಂಧಿ: 'ಇವತ್ತಿನ ದಿನಗಳಲ್ಲಿ ಕರ್ನಾಟಕದ ಸಿಎಂ ಆಗಬೇಕಾಗಿದ್ದವರು ನೀವು. ಆದರೆ ನೀವು ಎಮ್ಮೆಲ್ಲೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಹೀಗಾಗಿ ನೀವು ಎಷ್ಟೇ ಒಳ್ಳೆಯ ಆಡಳಿತ ಕೊಟ್ಟರೂ ಜನನಾಯಕರಾಗುವುದು ಕಷ್ಟ. ಹೀಗಾಗಿ ಇವತ್ತಿನಿಂದಲೇ ಪಕ್ಷದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ' ಎಂದು ಹೇಳಿದ್ದಾರೆ.

ಇದರರ್ಥ ಬೇರೇನೂ ಅಲ್ಲ, ಸಿದ್ದರಾಮಯ್ಯ ಅವರು ಕೆಳಗಿಳಿದ ನಂತರ ಯುವ ನಾಯಕರೊಬ್ಬರನ್ನು ಮುಖ್ಯಮಂತ್ರಿ ಮಾಡುವ ಕನಸು ರಾಹುಲ್ ಗಾಂಧಿಯವರಿಗಿದೆ. ಆದರೆ ಅದೇನೇ ಮಾಡಿದರೂ ಅವರಿಗೆ ಡಿ.ಕೆ.ಶಿವಕುಮಾರ್ ಅವರನ್ನು ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ಆದರೆ ಅದನ್ನು ಬಾಯಿ ಬಿಟ್ಟು ಹೇಳುವಂತಿಲ್ಲ. ಹೀಗಾಗಿ ಪರೋಕ್ಷವಾಗಿ ಯುವ ಸಚಿವರಿಬ್ಬರಿಗೆ ಅವರು ಒತ್ತಾಸೆ ಕೊಡುತ್ತಾರೆ. ಅದೇ ರೀತಿ ಈ ಸಚಿವರು ದಿಲ್ಲಿಗೆ ಬಂದು ತಮ್ಮ ಬಳಿ ಅಧಿಕಾರ ಹಂಚಿಕೆಯ ವಿಷಯದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಮಧ್ಯೆ ನಡೆದಿರುವ ಸಂಘರ್ಷದ ಬಗ್ಗೆ ಹೇಳಿದರೆ: 'ರೀ ನಾವು ಸಿದ್ದರಾಮಯ್ಯನವರ ಮನ ಒಲಿಸದೆ ಮುಖ್ಯಮಂತ್ರಿ ಹುದ್ದೆಯ ವಿಷಯವನ್ನು ಸೆಟ್ಲ್ ಮಾಡಲು ಆಗುವುದಿಲ್ಲ. ಹೀಗಾಗಿ ಮೊದಲು ಸಿದ್ದರಾಮಯ್ಯನವರ ಮನ ಒಲಿಸುಣೋ. ಆನಂತರ ಡಿ.ಕೆ.ಶಿವಕುಮಾರ್ ಅವರನ್ನು ತಂದು ಸಿಎಂ ಹುದ್ದೆಯಲ್ಲಿ ಕೂರಿಸೋಣ. ಹಾಗಂತ ಡಿ.ಕೆ.ಶಿವಕುಮಾರ್ ಅವರ ಬಳಿ ಈ ವಿಷಯವನ್ನು ಪ್ರಸ್ತಾಪಿಸಿ' ಎಂದು ಹೇಳಿ ಕಳಿಸುತ್ತಾರೆ.

ಆದರೆ ಯಾರೇನೇ ಆಟವಾಡಲಿ, ಆದರೆ ಒಟ್ಟಿನಲ್ಲಿ ಡಿ.ಕೆ.ಶಿವಕುಮಾರ್ ಮಾತ್ರ ತಮ್ಮ ಹಠ ಬಿಡುತ್ತಿಲ್ಲ.ಬದಲಿಗೆ ತಮಗೆ ಮುಖ್ಯಮಂತ್ರಿ ಪದವಿ ಸಿಗಬೇಕು ಎಂದು ವರಿಷ್ಠರ ಮೇಲೆ ಒತ್ತಡ ಹೇರುತ್ತಲೇ ಇದ್ದಾರೆ. ಹೀಗೆ ಅವರು ಒತ್ತಡ ಹೇರಿದಂತೆಲ್ಲ ರಾಹುಲ್ ಗಾಂಧಿ ಚಿಂತಾಕ್ರಾಂತರಾಗುತ್ತಾರೆ. ಈ ನಾಯಕತ್ವ ಹಂಚಿಕೆಯ ವಿಷಯದಲ್ಲಿ ತಾವು ಸ್ವಲ್ಪ ಮುಡುಕಿದರೂ ಕಾಂಗ್ರೆಸ್ ಸರ್ಕಾರ ಕುಸಿಯುತ್ತದೆ ಎಂಬುದು ಅವರ ಸ್ಪಷ್ಟ ಆತಂಕ. ಯಾಕೆಂದರೆ ಕರ್ನಾಟಕದಲ್ಲಿ ಅಹಿಂದ ವರ್ಗಗಳ ಮತ ಬ್ಯಾಂಕು ಸಾಲಿಡ್ಡಾಗಿ ಸಿದ್ದರಾಮಯ್ಯನವರ ಬೆನ್ನಿಗೆ ನಿಂತಿದೆ. ಆದರೆ ಈ ಮಾತನ್ನು ಡಿ.ಕೆ.ಶಿವಕಮಾರ್ ಅವರಿಗೆ ಹೇಳುವುದು ರಾಹುಲ್ ಗಾಂಧಿಯವರಿಗೆ ಕಷ್ಟವಾಗುತ್ತಿದೆ.

ಯಾಕೆಂದರೆ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಅಗತ್ಯವಾದ ಶಕ್ತಿಯ ಮೇಜರ್ ಪಾಲು ಕೊಟ್ಟವರು ಡಿ.ಕೆ.ಶಿವಕುಮಾರ್. ಅದಕ್ಕೂ ಮುನ್ನ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರಿಗೆ ಬಗ್ಗದೆ ಜೈಲಿಗೆ ಹೋದವರು. ಹೀಗೆ ಪಕ್ಷಕ್ಕಾಗಿ ಯಾವುದೇ ಬಗೆಯ ಹೋರಾಟ ಮತ್ತು ಸಂಕಷ್ಟದಲ್ಲಿ ಪಕ್ಷಕ್ಕೆ ಬೇಕಾಗುವ ಅನಿವಾರ್ಯ ನಾಯಕ ಅನ್ನಿಸಿಕೊಳ್ಳುವ ಡಿ.ಕೆ.ಶಿವಕುಮಾರ್ ಅವರು ಭವಿಷ್ಯದಲ್ಲೂ ಬೇಕಲ್ಲ? ಹೀಗಾಗಿ ಡಿ.ಕೆ.ಶಿವಕುಮಾರ್ ಅವರಿಗೆ ಕರ್ನಾಟಕದ ರಾಜಕಾರಣದ ತಳಬುಡವನ್ನು ವಿವರಿಸಲು ರಾಹುಲ್ ಗಾಂಧಿ ಹಿಂಜರಿಯುತ್ತಿದ್ದಾರೆ.

ಪರಿಣಾಮ? ಒಂದು ಕಡೆ ಸಿದ್ದರಾಮಯ್ಯ ಅವರು ಹೇಳಿದಂತೆ ಸಂಪುಟ ಸರ್ಜರಿಗೆ ಅವರು ಮುಂದಾಗುತ್ತಿಲ್ಲ. ಅದೇ ರೀತಿ ಡಿ.ಕೆ.ಶಿವಕುಮಾರ್ ಅವರ ಜತೆ ಮುಕ್ತವಾಗಿ ಮಾತನಾಡಲು ತಯಾರಾಗುತ್ತಿಲ್ಲ. ಹೀಗಾಗಿ ಅಧಿಕಾರ ಹಂಚಿಕೆಯ ಮಾತು ಬಂದಾಗಲೆಲ್ಲ: ಡಿ.ಕೆ.ಶಿವಕುಮಾರ್ ಅವರು ತಮ್ಮ ಪಟ್ಟು ಹಾಕಿಕೊಂಡು ಮುಂದಿನ ಹೆಜ್ಜೆ ಇಡುತ್ತಾರೆ. ಅದೇ ರೀತಿ ಸಿದ್ದರಾಮಯ್ಯ ಅವರು ಕೂಡಾ ತಮ್ಮ ಪಟ್ಟು ಹಾಕಿಕೊಂಡು ಮುಂದುವರಿಯುತ್ತಾರೆ.

ಪರಿಣಾಮ ಏನಾಗಿದೆ ಎಂದರೆ ಯಾವತ್ತೋ ನಡೆಯಬೇಕಿದ್ದ ಸಂಪುಟ ಪುನರ್ರಚನೆ ಕಾರ್ಯ ವಿಳಂಬವಾಗುತ್ತಲೇ ನಡೆದಿದೆ. ಯಥಾ ಪ್ರಕಾರ ಇದರ ಹಿಂದೆ ಕೇಳುತ್ತಿರುವುದೂ ಒಂದೇ ಮಾತು. ಸಿದ್ದರಾಮಯ್ಯ ಅವರು ಹೇಳಿದಂತೆ ಸಂಪುಟ ಪುನರ್ರಚನೆ ಮಾಡುವ ಮುನ್ನ ಮುಖ್ಯಮಂತ್ರಿ ಹುದ್ದೆಯ ವಿಷಯವನ್ನು ಸೆಟ್ಲ್ ಮಾಡಿ ಎಂಬುದು ಈ ಮಾತು. ಆದರೆ ಅವರ ಮಾತನ್ನು ಸ್ವೀಕರಿಸಲು ರಾಹುಲ್ ಗಾಂಧಿ ಅವರಿಗೆ ಆಗುತ್ತಿಲ್ಲ. ಹಾಗೊಂದು ವೇಳೆ ತಾವು ಮಾತನಾಡಿದರೆ ಸರ್ಕಾರಕ್ಕೆ ಅಪಾಯ ನಿಶ್ಚಿತ ಎಂಬುದು ಅವರಿಗೆ ಗೊತ್ತಿದೆ.

ಹೀಗಾಗಿ ಯಥಾ ಪ್ರಕಾರ ಅವರು ಅಧಿಕಾರ ಹಂಚಿಕೆ ವಿಷಯಕ್ಕೆ ಸಂಬಂಧಿಸಿದಂತೆ ಅಂತಿಮ ತೀರ್ಮಾನ ಕೈಗೊಳ್ಳಲು ಫೆಬ್ರವರಿ 1 ರ ಗಡುವು ಕೊಟ್ಟಿದ್ದಾರೆ. ಆದರೆ ಇದು ಕೂಡಾ ಸಮಯ ತಳ್ಳುವ ನೀತಿಯೇ ಎಂಬುದು ಕಾಂಗ್ರೆಸ್ ವಲಯಗಳ ಅಭಿಪ್ರಾಯ. ಅರ್ಥಾತ್, ಮುಖ್ಯಮಂತ್ರಿ ಹುದ್ದೆಯಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ ಆಗುವ ಅಪಾಯವೇನು? ಎಂದು ಡಿ.ಕೆ.ಶಿವಕುಮಾರ್ ಅವರಿಗೆ ಹೇಳಲು ರಾಹುಲ್ ಗಾಂಧಿ ಇನ್ನೂ ಮೀನಾ ಮೇಷ ಎಣಿಸುತ್ತಿದ್ದಾರೆ. ಪರಿಣಾಮ? ಕಾಂಗ್ರೆಸ್ ಪಾಳಯದ ಗೊಂದಲ ಹಾಗೇ ಮುಂದುವರಿಯುತ್ತಿದೆ.ಮುಂದೇನಾಗುತ್ತದೋ ಕಾದು ನೋಡಬೇಕು.

7ನೇ ಪುಟದಿಂದ

# ರಾಜ್ಯದ ರಾಜಧಾನಿಯಲ್ಲಿ ಹಲವು ಕನ್ನಡಂಗಳ್

ಸಂಚರಿಸುತ್ತಾ ಕರ್ನಾಟಕದ ರಾಜಧಾನಿಯಲ್ಲಿ ಶಿಕ್ಷಣೋದ್ಯಮ ಲಾಭಕರ ವ್ಯವಹಾರವಾಗಿ ಬೆಳೆಯುತ್ತಿರುವುದನ್ನು ಸಾರುತ್ತವೆ.

ಈಚಿನ ದಶಕಗಳಲ್ಲಿ ಮಕ್ಕಳ ಸಂಖ್ಯೆ ಕ್ಷೀಣಿಸಿದ ಕಾರಣ ಗ್ರಾಮೀಣ ಭಾಗಗಳ ಸರ್ಕಾರಿ ಶಾಲೆಗಳನ್ನು ಮುಚ್ಚಬೇಕಾದ ಪರಿಸ್ಥಿತಿ ಇದೆ ಎಂದು ವ್ಯಾಪಕ ಪ್ರಚಾರ ಪಡೆದಿತ್ತು. ಸರ್ಕಾರಿ ಶಾಲೆಗಳೆಂದರೆ ಅಧಿಕೃತ ಭಾಷಾ ನೀತಿಯಂತೆ ಕನ್ನಡದಲ್ಲಿ ಬೋಧನೆ ಮಾಡುವ ಶಾಲೆಗಳು. ಅವು ವಿದ್ಯಾರ್ಥಿಗಳ ಕೊರತೆಯನ್ನು ಎದುರಿಸುತ್ತಿವೆ; ಎಂದರೆ ಶಾಲೆಗಳನ್ನು ನಡೆಸುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ ಎಂಬ ಹುಯಿಲು ಎದ್ದು ಕೆಲವು ಕಾಲ ಅದು ಕನ್ನಡದ ಉಳಿವಿನ ಪ್ರಶ್ನೆಗೆ ತಳುಕು ಹಾಕಿಕೊಂಡಿತ್ತು. 'ಕನ್ನಡ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಬರುವುದಕ್ಕೆ ಸರ್ಕಾರವೇ ಕಾರಣ; ಈಗಿನ ಪೋಷಕರು ತಮ್ಮ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯಲೆಂದು ಬಯಸುತ್ತಾರೆ. ತಮ್ಮ ಮಕ್ಕಳಿಗೆ ಯಾವ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸಬೇಕು ಎಂಬುದು ಪೋಷಕರ ಹಕ್ಕು; ಅದನ್ನು ಸರ್ಕಾರ ಮೊಟಕುಗೊಳಿಸಲಾಗದು ಎಂಬರ್ಥದ ನ್ಯಾಯಾಲಯದ ತೀರ್ಪೊಂದು ಬಂದದ್ದು ಇಂಗ್ಲಿಷ್ ಶಾಲೆಗಳನ್ನು ನಡೆಸುತ್ತಿದ್ದವರನ್ನು ಖುಷಿಪಡಿಸಿತ್ತು. ಪರಿಸ್ಥಿತಿ ಒತ್ತಡಕ್ಕೆ ಸಿಲುಕಿ ಕರ್ನಾಟಕ ಸರ್ಕಾರವೂ ಒಂದನೆಯ ತರಗತಿಯಿಂದಲೇ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವ ಪ್ರಸ್ತಾಪ ಇಟ್ಟು ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳುವ ಕಸರತ್ತು ನಡೆಸುತ್ತಿದೆ.

ಮಧ್ಯಾಹ್ನದ ಬಿಸಿ ಊಟ, ಮೊಟ್ಟೆ, ಹಾಲು, ಉಚಿತ ಪಠ್ಯಪುಸ್ತಕ, ಎರಡು ಜೊತೆ ಸಮವಸ್ತ್ರ, ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಸೈಕಲ್ ಕೊಡುಗೆ, ಕಲಿಕೆಯಲ್ಲಿ ಹಿಂದೆ ಬಿದ್ದ ಮಕ್ಕಳಿಗೆ ಪರಿಹಾರ ಬೋಧನೆ ಮೊದಲಾದ ಉಪಕ್ರಮಗಳನ್ನು ಸರ್ಕಾರಿ ಶಾಲೆಗಳಲ್ಲಿ ಮುಂದುವರಿಸಿಕೊಂಡು ಬರಲಾಗುತ್ತಿದೆ. ಈಚಿನ ವರ್ಷಗಳಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣದ ವಿಷಯದಲ್ಲಿ ಕೈಗೊಂಡ ಹಲವು ಕ್ರಮಗಳಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯು ಫಲಿತಾಂಶಗಳಲ್ಲಿ ಗ್ರಾಮೀಣ ಶಾಲೆಗಳ ಮೇಲುಗೈ ವ್ಯಕ್ತವಾಗುತ್ತಿದೆ. ಅದರಲ್ಲೂ ಸರ್ಕಾರಿ ಶಾಲೆಗಳಲ್ಲಿನ ಫಲಿತಾಂಶವೂ ಏರುಗತಿಯಲ್ಲಿರುವುದು ದೃಢಪಡುತ್ತಿದೆ. ಭಾಷಾ ಕಲಿಕೆಯೊಂದೇ ಶೈಕ್ಷಣಿಕ ಪ್ರಗತಿಗೆ ಮಾನದಂಡವಲ್ಲ, ವಿಷಯ ಜ್ಞಾನವೇ ಮುಖ್ಯ ಎಂಬುದು ಸರ್ಕಾರಿ ಶಾಲೆಗಳಲ್ಲಿನ ಶೇಕಡಾವಾರು ಹೆಚ್ಚಿದ ಫಲಿತಾಂಶಕ್ಕೆ ಸಾಕ್ಷ್ಯ ಒದಗಿಸುತ್ತಿದೆ.

ಆದರೂ ಕನ್ನಡದ ಭವಿಷ್ಯದ ಬಗ್ಗೆ ಕೆಲವೊಮ್ಮೆ ಮಾಧ್ಯಮಗಳಲ್ಲಿ ಆತಂಕಕಾರಿ ವರದಿಗಳು ಬರುತ್ತಿವೆ. ವಾಸ್ತವವಾಗಿ ಇವು ಕೆಲವು ಹಿತಾಸಕ್ತಿಗಳ ಬೀಸು ಹೇಳಿಕೆಗಳು ಎಂಬುದನ್ನು ಗಮನಿಸಬೇಕು. ನಿಖರ ಅಂಕಿ ಸಂಖ್ಯೆಗಳನ್ನು ಆಧರಿಸದ, ಕ್ಷೇತ್ರಕಾರ್ಯದ ಮಾಹಿತಿಗಳನ್ನು ಒಳಗೊಳ್ಳದ, ಶಾಸ್ತ್ರೀಯ ಅಧ್ಯಯನಕ್ಕೆ ಒಳಪಡದ ಇಂಥ ಚರ್ಚೆಗಳಿಗೆ ಹೆಚ್ಚಿನ ಮಾನ್ಯತೆ ಅನಗತ್ಯ. ಭಾಷೆಗಳ ನಿರಂತರ ಚಲನಶೀಲ ವ್ಯವಹಾರದಲ್ಲಿ ಒಂದು ಭಾಷೆ ಮಹತ್ವ ಕಳೆದುಕೊಳ್ಳುವುದು ಅದರಲ್ಲಿ ವ್ಯವಹಾರ ನಡೆಸುತ್ತಿರುವವರ ಸಂಖ್ಯಾಬಲ ಅಪಾಯದ ಮಟ್ಟದಲ್ಲಿ ಕ್ಷೀಣಿಸತೊಡಗಿದಾಗ. ಇಲ್ಲವೇ ಎರಡೂ ಭಾಷೆಗಳ ವ್ಯವಹಾರ ಇದ್ದಾಗ ಒಂದು ನಿರ್ದಿಷ್ಟ ಭಾಷೆಯ ಬಳಕೆ ಅನಗತ್ಯ ಎನಿಸಿದಾಗ ಅದು ಅಪ್ರಸ್ತುತ ಎನಿಸಬಹುದು. ಕ್ರಮೇಣ ಅದು ಕ್ಷೀಣಿಸಬಹುದು. ಬಳಕೆ ತಪ್ಪಿ ಮರೆಯಾಗಿ ಹೋಗಬಹುದು. ಕನ್ನಡಕ್ಕೆ ಸಂಬಂಧಿಸಿ ಈ ಸಾಧ್ಯತೆಗಳು ಇಲ್ಲ. ಕನ್ನಡ ಅಪಾಯದ ಅಂಚಿನಲ್ಲಿದೆ; ಅಳಿವಿನ ಹಾದಿಯಲ್ಲಿ ಸಾಗುತ್ತಿದೆ ಎಂಬುದಕ್ಕೆ ನಿಖರ ಆಧಾರಗಳಿಲ್ಲ.

ಈಚೆಗೆ ನಡೆದ ಸಾಮಾಜಿಕ– ಆರ್ಥಿಕ ಸಮೀಕ್ಷೆಯಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯ ಶೇ 68 ಮಂದಿ ಕನ್ನಡ ಮಾತೃಭಾಷೆಯವರಿದ್ದಾರೆ. ಸಾಕ್ಷರತೆಯ ಪ್ರಮಾಣ ಇದಕ್ಕಿಂತ ಸ್ವಲ್ಪ ಹೆಚ್ಚಿನದಾಗಿದೆ. ಬೆಂಗಳೂರಿನಲ್ಲಿ ತಮಿಳರು ಆಗಾಗ ನಡೆಸುತ್ತಿರುವ ಗಲಾಟೆ ಗಮನಿಸಿ ಕನ್ನಡಕ್ಕೆ ತಮಿಳರಿಂದ ಅಪಾಯ ಎಂಬ ಭಾವ ಕನ್ನಡ ಹೋರಾಟಗಾರರಲ್ಲಿದೆ. ವಾಸ್ತವವಾಗಿ ರಾಜ್ಯದಲ್ಲಿ ತಮಿಳು ಮಾತೃಭಾಷೆ ಇರುವವರ ಸಂಖ್ಯೆ ಶೇ 3.84 ಮಾತ್ರ. ಕನ್ನಡ ಮಾತೃಭಾಷಿಕರ ನಂತರದ ಸಂಖ್ಯೆ ಉರ್ದು ಭಾಷಿಕರದು. ಅವರು ಶೇ 9.96 ಇದ್ದಾರೆ. ತೆಲುಗು ಮಾತೃಭಾಷೆ ಇದ್ದವರು ಶೇ 7.39. ಮರಾಠಿಗರು ತಮಿಳರಿಗಿಂತ ಸ್ವಲ್ಪ ಕಡಿಮೆ ಶೇ 3.65. ಇನ್ನುಳಿದ ಶೇ 9.16ರಷ್ಟು ಮಂದಿ ಕೊಡವ, ತುಳು, ಕೊಂಕಣಿ ಇತ್ಯಾದಿ ಮಾತೃಭಾಷೆ ಇರುವವರು. ಇಂಥ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಕನ್ನಡಕ್ಕೆ ಉಳಿಗಾಲ ಇಲ್ಲ ಎನ್ನುವುದು ಅತಿರೇಕದ ಹೇಳಿಕೆಯಾಗುತ್ತದೆ. ಕನ್ನಡ ರಾಜ್ಯದಲ್ಲಿ ಸುಭದ್ರ ನೆಲೆಯಲ್ಲಿದೆ. ಭದ್ರಬುನಾದಿಯ ಮೇಲೆ ಬೆಳೆದಿದೆ. ಎರಡೂವರೆ ಸಾವಿರ ವರ್ಷಗಳ ಸಾಂಸ್ಕೃತಿಕ ಪರಂಪರೆ, ಒಂದೂವರೆ ಸಾವಿರ ವರ್ಷದ ಲಿಖಿತ ಸಾಹಿತ್ಯದ ಸಮೃದ್ಧಿ, ಈಗಲೂ ಮುಂದುವರಿಯುತ್ತಿರುವ ಸೃಜನಶೀಲ ಪ್ರವೃತ್ತಿಯ ಹಿನ್ನೆಲೆಯಲ್ಲಿ ಕನ್ನಡಕ್ಕೆ ಯಾವತ್ತೂ ಅಳಿವಿಲ್ಲ ಎಂಬುದು ಸ್ಪಷ್ಟ.

ಕನ್ನಡಕ್ಕೆ ಇಷ್ಟರಮಟ್ಟಿನ ಭದ್ರ ಬುನಾದಿ ಇದ್ದರೂ ಅದನ್ನು ದುರ್ಬಲಗೊಳಿಸುವ ಯತ್ನ ನಮ್ಮ ಜನಪ್ರತಿನಿಧಿಗಳಿಂದ

ಸತತವಾಗಿ ನಡೆಯುತ್ತಾ ಇರುವುದನ್ನು ಗಮನಿಸಬೇಕು. ಅದು ಜನಪ್ರತಿನಿಧಿಗಳ ಶಿಕ್ಷಣೋದ್ಯಮ ಸಾಹಸದಿಂದಲೇ ಆರಂಭವಾಗುತ್ತದೆ. ಬೆಂಗಳೂರಿನಂಥ ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ ಹೋಬಳಿ ಮಟ್ಟದ ಗ್ರಾಮೀಣ ಪೇಟೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ತಲೆ ಎತ್ತುವುದಕ್ಕೆ ಶಾಸಕರು ಮತ್ತು ಭ್ರಷ್ಟ ಅಧಿಕಾರಿಗಳ ಕುಮ್ಮಕ್ಕು ವಿಶೇಷವಾಗಿದೆ. ಮೂರು ದಶಕಗಳ ಹಿಂದೆ ಖಾಸಗಿಯವರು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಉತ್ತೇಜಿಸಿದವರು ನಮ್ಮ ಜನಪ್ರತಿನಿಧಿಗಳೇ. ಅವರೊಂದಿಗೆ ಅಧಿಕಾರಿಗಳೂ ಸೇರಿಕೊಂಡರು. ಜಾಗತೀಕರಣ ದೇಶದಲ್ಲಿ ಕಾಲಿಟ್ಟ ಈಚಿನ ಮೂರು ದಶಕಗಳಲ್ಲಿ ಸ್ವತಃ ರಾಜಕಾರಣಿಗಳೇ ಶಾಲೆಗಳನ್ನು ಬೇನಾಮಿ ಹೆಸರಿನಲ್ಲಿ ಆರಂಭಿಸಿದ್ದಾರೆ. ಪಕ್ಷ ಭೇದವಿಲ್ಲದೆ ಎಲ್ಲ ರಾಜಕಾರಣಿಗಳೂ ಸ್ವಂತಕ್ಕೆ ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿ ಹಣ ಗಳಿಸುವ ಉದ್ಯಮ ಮಾಡಿಕೊಂಡಿದ್ದಾರೆ.

ಪ್ರಾಥಮಿಕ ಹಂತದಲ್ಲಿ ಕನ್ನಡ ಕಲಿಕೆಯೂ ಅನೇಕ ಪ್ರಯೋಗಗಳಿಗೆ ಒಳಗಾಗಿದೆ. ಕಲಿಕೆಯ ಪ್ರಾರಂಭದ ಹಂತದಲ್ಲಿ ಓದಿದ್ದು ಬದುಕಿನಲ್ಲಿ ಬಹುಕಾಲ ಉಳಿಯುವಂಥದ್ದು. ಆದ್ದರಿಂದಲೇ ನಾಲ್ಕು ದಶಕಗಳ ಹಿಂದೆ ಪ್ರಾಥಮಿಕ ಶಾಲೆಗಳಲ್ಲಿ ಕಂಠಪಾಠ ಮಾಡಿದ್ದ ಕನ್ನಡದ ಎಷ್ಟೋ ಪದ್ಯಗಳು, ಸುಭಾಷಿತಗಳು, ಶ್ಲೋಕಗಳು ಬದುಕಿನುದ್ದಕ್ಕೂ ನೆನಪಿನಲ್ಲಿ ಉಳಿದುಕೊಂಡು ಸಾಂದರ್ಭಿಕವಾಗಿ ಪ್ರಯೋಗಿಸಲು ಸಿಗುತ್ತಿದ್ದವು. ಪಠ್ಯಕ್ರಮದಲ್ಲಿ ಕಂಠಸ್ಥ ಮಾಡಿಕೊಳ್ಳುವುದಕ್ಕೆ ಈಗಿನ ಶಿಕ್ಷಣ ತಜ್ಞರು ಅವಕಾಶ ನೀಡಿಲ್ಲ. ಈಗಿನ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳ ಪಠ್ಯಕ್ರಮಗಳಲ್ಲಿ ಪದ್ಯಗಳನ್ನು ಕಂಠಸ್ಥ ಮಾಡಿಕೊಳ್ಳುವ ಅಗತ್ಯವಿಲ್ಲ. ಆಯಾ ತರಗತಿಯ ಅಂತಿಮ ಪರೀಕ್ಷೆ ಮುಗಿದ ಮೇಲೆ ಯಾವ ಪದ್ಯಗಳೂ ನೆನಪಿನಲ್ಲಿ ಉಳಿದುಕೊಳ್ಳುವುದಿಲ್ಲ. ಪದ್ಯಕ್ಕೆ ಸಂಬಂಧಿಸಿದ ಭಾವಾರ್ಥ, ಸಮಯ ಸಂದರ್ಭ, ಕೆಲವು ಕಠಿಣ ಪದಗಳ ಅರ್ಥಗಳನ್ನು ಪರೀಕ್ಷೆಯಲ್ಲಿ ಪುನರುಚ್ಚರಿಸಿದರೆ ವಿದ್ಯಾರ್ಥಿ ತೇರ್ಗಡೆಯಾಗುತ್ತಾನೆ. ಕನ್ನಡದ ಪಾಠಗಳು ಪರೀಕ್ಷೆಗಾಗಿಯಷ್ಟೇ ಪರಿಚಯವಾಗಿ ನಂತರ ವಿದ್ಯಾರ್ಥಿಯ ಭಾವಕೋಶದಿಂದ ಮರೆಯಾಗಿ ಹೋಗುತ್ತವೆ.

ಕನ್ನಡ ಭಾಷಿಕರನ್ನು ಒಂದು ಆಡಳಿತ ಚೌಕಟ್ಟಿಗೆ ತರುವುದಕ್ಕೆ ಸ್ವಾತಂತ್ರ್ಯ ನಂತರ ಒಂಬತ್ತು ವರ್ಷಗಳ ಹೋರಾಟ ಅಗತ್ಯವಾಯಿತು. 1956ರಲ್ಲಿ ನಾಡಿನ ಏಕೀಕರಣವಾಯಿತಾದರೂ ಅದಕ್ಕೆ ನಾಮಕರಣವಾಗಲಿಲ್ಲ. 1972ರಲ್ಲಿ ರಾಜ್ಯದ ಆಡಳಿತ ಸೂತ್ರ ಹಿಡಿದ ದೇವರಾಜ ಅರಸರು ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡುವುದಕ್ಕೆ ಮುಂದಾದರು. ನಾಡಿನ ಏಕೀಕರಣದ ನಂತರ ಎಸ್.ನಿಜಲಿಂಗಪ್ಪ, ಎಸ್.ಆರ್.ಕಂಠಿ, ಬಿ.ಡಿ.ಜತ್ತಿ, ಕಡಿದಾಳ್ ಮಂಜಪ್ಪ, ವೀರೇಂದ್ರಪಾಟೀಲ ಮೊದಲಾದವರು ಮುಖ್ಯಮಂತ್ರಿಗಳಾಗಿದ್ದರು. ಆದರೆ ನಾಡಿನ ಜನತೆಯನ್ನು ಭಾವನಾತ್ಮಕವಾಗಿ ಒಗ್ಗೂಡಿಸಲು ಅವಶ್ಯಕವಾದ ಕರ್ನಾಟಕ ಎಂಬ ಹೆಸರನ್ನು ಇಡುವುದಕ್ಕೆ ಅವರು ಯಾರೂ ಧೈರ್ಯ ಮಾಡಲಿಲ್ಲ. ರಾಜ್ಯದ ಆಡಳಿತವನ್ನು ಕನ್ನಡದಲ್ಲಿ ನಡೆಸುವುದಕ್ಕೂ ಇಚ್ಛಾಶಕ್ತಿಯನ್ನು ಪ್ರದರ್ಶಿಸಲಿಲ್ಲ. ದೇವರಾಜ ಅರಸರು ಉತ್ತರ ಕರ್ನಾಟಕದ ಕೆ.ಎಚ್.ಪಾಟೀಲರ ಮುಂದಾಳುತನದಲ್ಲಿ ಆ ಕಡೆಯವರ ಬೆಂಬಲ ಪಡೆದು ರಾಜ್ಯದ ನಾಮಕರಣದಲ್ಲಿ ಯಶಸ್ವಿಯಾದರಷ್ಟೇ ಅಲ್ಲ, ಆಡಳಿತದಲ್ಲಿ ಕನ್ನಡವೇ ಪ್ರಾಧಾನ್ಯತೆ ಪಡೆಯುವುದಕ್ಕೆ ಅಗತ್ಯ ಕ್ರಮ ಕೈಗೊಂಡಿದ್ದರು. ಅರಸರ ಆದೇಶದಂತೆ ಆಗಿನ ಎಲ್ಲ ಐಎಎಸ್ ಅಧಿಕಾರಿಗಳೂ ಆಡಳಿತದಲ್ಲಿ ಕನ್ನಡದ ಅನುಷ್ಠಾನದ ಮೊದಲ ಹೆಜ್ಜೆಯಾಗಿ ಕನ್ನಡದಲ್ಲಿ ಸಹಿ ಮಾಡುವುದನ್ನು ಆರಂಭಿಸಿದರು. ತಮಿಳುನಾಡು ಮೂಲದ ವಿ.ಬಾಲಸುಬ್ರಮಣ್ಯನ್, ಪಂಜಾಬ್ ಮೂಲದ ಚಿರಂಜೀವ್ ಸಿಂಗ್ ಮೊದಲಾದವರು ಕನ್ನಡದಲ್ಲಿ ಸಹಿ ಮಾಡುವುದಕ್ಕೆ ಆರಂಭಿಸಿ ಆಡಳಿತದಲ್ಲಿ ಕನ್ನಡದ ಆದ್ಯತೆಗೆ ದೃಢ ಹೆಜ್ಜೆ ಇರಿಸಿದರು.

ಅರಸರ ನಂತರ ಮುಖ್ಯಮಂತ್ರಿಯಾಗಿ ಬಂದವರೆಲ್ಲ ಆ ನಿಷ್ಠೆಯನ್ನು ಪ್ರಕಟಿಸಲಿಲ್ಲ. ಹೇಗಾದರೂ ಅಧಿಕಾರ ಉಳಿಸಿಕೊಂಡರೆ ಸಾಕು ಎಂಬ ಮನಃಸ್ಥಿತಿಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಬಂದವರಿಗೆ ಕನ್ನಡದ ಪಾರಮ್ಯ ಆದ್ಯತೆಯ ವಿಷಯವೇ ಆಗಿರಲಿಲ್ಲ. ಕನ್ನಡಕ್ಕೆ ಮಹತ್ವ ಸಿಗಬೇಕು, ಜನಸಾಮಾನ್ಯರ ಭಾಷೆಯಲ್ಲಿ ಆಡಳಿತ ನಡೆಯಬೇಕು ಎಂಬ ಹೋರಾಟಗಾರರನ್ನು ಸಮಾಧಾನ ಪಡಿಸುವುದಕ್ಕೆ ಕನ್ನಡ ಕಾವಲು ಸಮಿತಿ ಅಸ್ತಿತ್ವಕ್ಕೆ ಬಂತು. 1983ರ ನಂತರದ ರಾಜಕೀಯ ಅಸ್ಥಿರತೆಯ ಸಂದರ್ಭದಲ್ಲಿ ಆರಂಭವಾದ ಕನ್ನಡ ಕಾವಲು ಸಮಿತಿಗೆ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷರಾಗಿದ್ದರು. ಕಾವಲು ಸಮಿತಿ ನಂತರದ ವರ್ಷಗಳಲ್ಲಿ ಬದಲಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂಬ ಹೆಸರಿನಲ್ಲಿ ಈಗ ಉಳಿದುಕೊಂಡಿದೆ. ಮುಖ್ಯಮಂತ್ರಿಯಷ್ಟೇ ಅಲ್ಲದೆ, ಅವರ ಸಂಪುಟದ ಎಲ್ಲ ಸಚಿವರಿಗೂ ಕನ್ನಡದ ಮೇಲೆ ಪ್ರೀತಿ, ಅದರ ಬಳಕೆಯಲ್ಲಿ ವಿಶ್ವಾಸ, ಅದರ ಹಿನ್ನೆಲೆಯ ಅರಿವು ಇದ್ದರೆ ಕನ್ನಡಕ್ಕೆ ಆಡಳಿತ ರಂಗದಲ್ಲಿ ಸಿಗಬೇಕಾದ ಮಾನ್ಯತೆ ಸಿಗುತ್ತದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಕೆಲವೊಂದು ಪ್ರಶಸ್ತಿಗಳು, ಕನ್ನಡ ಪರ ಸಂಘ ಸಂಸ್ಥೆಗಳಿಗೆ ಕಿಂಚಿತ್ತು ಅನುದಾನ, ಭಾಷಣಗಳಲ್ಲಿ ಕನ್ನಡದ ಕವಿಗಳ ಕೆಲವು ರಚನೆಗಳನ್ನು ಉಲ್ಲೇಖಿಸಿದರೆ ಸಾಕು; ಎಲ್ಲರನ್ನೂ ಸಂತೃಪ್ತರನ್ನಾಗಿಸಬಹುದು ಎಂಬ ಭಾವನೆ ಉಳಿದುಕೊಂಡಿದೆ. ಕನ್ನಡವು ನಾಡಿನಲ್ಲಿ ದೃಢವಾಗಿ ಉಳಿದು ಬೆಳೆಯಲು ಇಷ್ಟು ಸಾಲದು.

# ಅಕ್ರಮ ವಲಸಿಗರಿಗೆ ಅನುಕಂಪ ಬೇಡ

6ನೇ ಪುಟದಿಂದ

ಅದು ನಿರ್ದಿಷ್ಟವಾಗಿ ಕರ್ನಾಟಕದ ಜನರ ಕಲ್ಯಾಣ, ಶಿಕ್ಷಣ, ಆರೋಗ್ಯ, ಸಾರಿಗೆ ಹಾಗೂ ಬಡತನ ನಿವಾರಣೆಯಂತಹ ಉದ್ದೇಶಗಳಿಗೆ ಬಳಸಬೇಕಾದದ್ದು. ಆದರೆ ರಾಜ್ಯದ ಕನ್ನಡಿಗರೇ ಇನ್ನೂ ನಿವೇಶನ, ಮನೆ, ಮೂಲಭೂತ ಸೌಲಭ್ಯಗಳಿಗಾಗಿ ವರ್ಷಗಟ್ಟಲೆಯಿಂದ ಕಾಯುತ್ತಿರುವಾಗ; ಅಕ್ರಮವಾಗಿ ವಲಸೆ ಬಂದವರಿಗೆ ಉಚಿತವಾಗಿ ಮನೆ ನೀಡುವುದು ಈ ರಾಜ್ಯದ ಮೂಲ ನಿವಾಸಿಗಳಿಗೆ ಅನ್ಯಾಯ ಮಾಡಿದಂತಲ್ಲವೇ?

ಕರ್ನಾಟಕದ ಸಾವಿರಾರು ಬಡ ಕನ್ನಡಿಗರೇ ನಿವೇಶನಕ್ಕಾಗಿ ವರ್ಷಗಟ್ಟಲೆ ಅರ್ಜಿ ಹಾಕಿ ವರ್ಷಗಟ್ಟಲೆಯಿಂದ ಕಾಯುತ್ತಿದ್ದಾರೆ. ಇವರೆಲ್ಲಾ ಗುಡಿಸಲುಗಳಲ್ಲಿ, ಬಾಡಿಗೆ ಮನೆಗಳಲ್ಲಿ ಜೀವನ ಸಾಗಿಸುತ್ತಿರುವಾಗ ಬಾಂಗ್ಲಾದಿಂದ ಬಂದ ಪರದೇಶಿ ಅಕ್ರಮ ವಲಸಿಗರಿಗೆ ಮನೆ ಕೊಡುವುದು ಎಷ್ಟು ಸರಿ? ಸ್ಥಳೀಯ ಕನ್ನಡಿಗರಿಗೆ ಭದ್ರತೆ ಕಲ್ಪಿಸುವುದ ಬಿಟ್ಟು□ ಕಾನೂನು ಉಲ್ಲಂಘಿಸಿ ಬಂದವರಿಗೆ ಉಚಿತ ಮನೆ ನೀಡುವುದು ನ್ಯಾಯ ಸಮ್ಮತವೇ? ಅಕ್ರಮ ವಲಸೆ ಎನ್ನುವುದೇ ಕಾನೂನುಬಾಹಿರ ಕ್ರಿಯೆ. ಕಾನೂನನ್ನು ಉಲ್ಲಂಘಿಸಿ ಬಂದವರಿಗೆ□ ಅತಿಕ್ರಮಿಸಿದವರಿಗೆ ಉಡುಗೊರೆಯಾಗಿ ಮನೆ ನೀಡುವುದಾದರೆ□ ನಿಜವಾಗಿ ಕಾನೂನು ಪಾಲಿಸುವವರಲ್ಲಿ□ ಉತ್ತಮ ಪ್ರಜೆಗಳಲ್ಲಿ ನಿರಾಸೆ ಮತ್ತು ಅಸಮಧಾನ ಹುಟ್ಟಿಸುತ್ತದೆ. ಇದರಿಂದ ಕಾನೂನು ಉಲ್ಲಂಘಿಸಿದರೆ□ ಅಕ್ರಮ ಮಾಡಿದರೆ ಲಾಭ ಎಂಬ ಅಪಾಯಕಾರಿ ಸಂದೇಶ ಸಮಾಜಕ್ಕೆ ನೀಡಿದಂತಾಗುತ್ತದೆ.

ಇದು ಕೇವಲ ವಸತಿಯ ಪ್ರಶ್ನೆಯಲ್ಲ, ಇದು ಬೆಂಗಳೂರು ನಗರದ ಭವಿಷ್ಯದ ಪ್ರಶ್ನೆ. ಈಗಾಗಲೇ ನೀರು, ವಿದ್ಯುತ್, ಶಾಲೆ, ಆಸ್ಪತ್ರೆ□ ಟ್ರಾಫಿಕ್□ ಸ್ವಚ್ಛತೆ ಎಲ್ಲದರ ಮೇಲೂ ಒತ್ತಡ ಇದೆ. ಈ ರೀತಿಯ ಸರ್ಕಾರದ ತಲೆ ಬುಡವಿಲ್ಲದ ಚಿಂತನೆಗಳು ಮತ್ತು ಘೋಷಣೆಗಳು ಸ್ಥಳೀಯ ಕನ್ನಡಿಗರ ಬದುಕನ್ನೇ ದುಸ್ತರ ಮಾಡುತ್ತವೆ. ರಾಜ್ಯದಲ್ಲಿ ಬಡ ರೈತರು, ಕಾರ್ಮಿಕರು, ದಲಿತರು, ನಿರಾಶ್ರಿತ ಕನ್ನಡಿಗರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಗೋವೆಯಲ್ಲಿ ಇದೇ ರೀತಿ ಹತ್ತಾರು ವರ್ಷಗಳಿಂದ ಗುಡಿಸಲು ನಿರ್ಮಿಸಿಕೊಂಡು ಬದುಕು ಸಾಗಿಸುತ್ತಿದ್ದ ಉತ್ತರ ಕರ್ನಾಟಕದ ಕನ್ನಡಿಗರನ್ನು ಗೋವಾ ಸರ್ಕಾರ ಒಕ್ಕಲೆಬ್ಬಿಸಿದಾಗ ಅವರನ್ನು ಕರೆತಂದು ಕರ್ನಾಟಕದ ಒಂದು ಮೂಲೆಯಲ್ಲಿ ಜಾಗ ನೀಡದ ಕರ್ನಾಟಕ ಸರ್ಕಾರದ ಪ್ರಭೂತಿಗಳು□ ಬಾಂಬೆ□ ಚೆನ್ನೈನಲ್ಲಿ ಕನ್ನಡಿಗರ ಮೇಲೆ ಅಲ್ಲಿಯ ಜನರಿಂದ ಹಲ್ಲೆ ದೌರ್ಜನ್ಯಗಳಾದಾಗ ಮಾತನಾಡದ ಇಲ್ಲಿಯ ರಾಜಕಾರಣಿಗಳು, ಈಗ ಮತ್ತೆ ತಮ್ಮದೇ ನೆಲದ ಮಕ್ಕಳನ್ನು ಕಡೆಗಣಿಸಿ ಹೊರಗಿನಿಂದ ಬಂದವರಿಗೆ ಆದ್ಯತೆ ನೀಡುತ್ತಿರುವುದು ಸಾಮಾಜಿಕ ನ್ಯಾಯದ ತತ್ವಕ್ಕೆ ವಿರುದ್ಧವಾದುದು.

ಇನ್ನು ಕೆಲವು ಕನ್ನಡದ ಶಾಲು ಹಾಕಿಕೊಳ್ಳುವ□ ಒಂದು ರಾಜಕೀಯ ಪಕ್ಷವನ್ನು ಬೆಂಬಲಿಸುವ□ ತನ್ನ ಜಾತಿಯಿಂದ ಮಂತ್ರಿ ಮುಖ್ಯಮಂತ್ರಿಗಳ ಪ್ರತೀ ನಡೆಯನ್ನೂ ಸಮರ್ಥಿಸುವ ಗೋಸುಂಬೆ ಹೋರಾಟಗಾರರು ಸರ್ಕಾರದ ಈ ನಾಡವಿರೋಧಿ ನಡೆಗೆ ಮಾನವೀಯತೆಯ ಮುಖವಾಡ ಹಾಕಿ ಸಮರ್ಥಿಸಿಕೊಳ್ಳುತ್ತಿದ್ದಾರೆ. ಇದೆಲ್ಲಾ ಮೂರ್ಖತನದ ಪರಮಾವಧಿಯದು. ಇಂಥ ಉದಾರ ಮನೋಭಾವದಿಂದಲೇ ಕನ್ನಡಿಗರು ಪರಭಾಷಿಕರನ್ನು ಯಥೇಚ್ಛವಾಗಿ ಸೇರಿಸಿಕೊಂಡು ಕಷ್ಟ-ನಷ್ಟ ಅನುಭವಿಸುತ್ತಿದ್ದಾರೆ. ತಮ್ಮ ನೆಲದಲ್ಲೇ ಪರಕೀಯ ಭಾವನೆಯಲ್ಲಿ ಬದುಕಬೇಕಾದಂಥ ದುಸ್ಥಿತಿಯಲ್ಲಿ ಕನ್ನಡಿಗರು ನರಳುತ್ತಿದ್ದಾರೆ.

ಇಲ್ಲಿ ಮಾನವೀಯತೆ ಮುಖ್ಯವಾದರೂ ಕಾನೂನು ಮತ್ತು ಮಾತೃ ನೆಲದ ಮೇಲಿನ ಅಭಿಮಾನಗಳ ನಡುವೆ ಸಮತೋಲನ ಅಗತ್ಯ. ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ಬಂಧಿಸಿ, ಅವರ ದೇಶಕ್ಕೆ ಕಳುಹಿಸದೆ, ಅವರಿಗೆ ಸುಸಜ್ಜಿತವಾದ ಮನೆಯನ್ನು ಕೊಟ್ಟು ಸಲಹುವ ಪೆದ್ದುತನ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೇ ಬೇಡ. ಈ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ಪಷ್ಟ ನೀತಿ ರೂಪಿಸಿ□ ಕಾನೂನಾತ್ಮಕ ಪರಿಹಾರಗಳನ್ನು ಹುಡುಕಬೇಕು. ಮಾನವೀಯತೆ ಅಂದರೆ ರಾಜ್ಯದ ಹಕ್ಕುಗಳನ್ನು ಮತ್ತು ಕನ್ನಡಿಗರ ಹಿತಾಸಕ್ತಿಯನ್ನು ಮರೆತುಬಿಡುವುದಲ್ಲ. ಅದು ಮಾನವೀಯತೆ ಅನ್ನಿಸಿಕೊಳ್ಳುವುದೂ ಇಲ್ಲ. ಕನ್ನಡದ ಬಡ ಕಾರ್ಮಿಕರಿಗೆ□ ಬಡ ರೈತರಿಗೆ ಜೀವನ ಭದ್ರತೆ ಕಲ್ಪಿಸಿಕೊಡದೆ, ಅವರಿಗೆ ಸರ್ಕಾರಿ ಸೌಲಭ್ಯ ತ್ವರಿತವಾಗಿ ನೀಡದೆ ಇರುವುದು ಅಮಾನವೀಯತೆ. ಸ್ಥಳೀಯ ಜನರ ಅಭಿಪ್ರಾಯ ಕೇಳದೇ, ಬಾಂಗ್ಲಾದೇಶದ ಅಕ್ರಮ ವಲಸಿಗರಿಗೆ ಉಚಿತ ನಿವೇಶನ ಕೊಡುವುದು ಸರಿಯಲ್ಲ. ರಾಜ್ಯ ಸರ್ಕಾರ ತೆಗೆದುಕೊಂಡಿರುವ ಈ ಏಕಪಕ್ಷೀಯ ನಿರ್ಧಾರವನ್ನು ಪುನರ್ ವಿಚಾರ ಮಾಡಬೇಕು. ರಾಜ್ಯದ ಸಂಪನ್ಮೂಲಗಳು ರಾಜ್ಯದ ಜನರಿಗೇ ದೊರೆಯುವಂತಾಗಬೇಕು ಅನ್ನೋದು ಅಖಂಡ ಕರ್ನಾಟಕದ ಕನ್ನಡಿಗರೆಲ್ಲರ ಒಕ್ಕೊರಳ ಕೂಗು. ಕನ್ನಡಿಗರ ಈ ಕೂಗಿನ ಬಗ್ಗೆ ರಾಜ್ಯ ಸರ್ಕಾರ ಕಿವಿಗೊಡಲಿ. ಇಲ್ಲದಿದ್ದರೆ, ಕನ್ನಡಿಗರ ಕ್ರೋಧಾಗ್ನಿ ಮತ್ತು ನಿಟ್ಟುಸಿರ ಶಾಪಕ್ಕೆ ಸರ್ಕಾರಗಳು ಉಳಿಯದೆ, ಉರುಳಿ ಹೋಗುವುದು ನಿಶ್ಚಿತ.

# ಪಾ.ವೆಂ ಆಚಾರ್ಯ ಲೇಖನ ಕೃತಿಗಳ ಸಂಗ್ರಹದಲ್ಲಿ ಛಾಯಾ

9ನೇ ಪುಟದಿಂದ

ಭಾವಾನುವಾದ, ರೂಪಾಂತರ, ಭಾಷಾನುವಾದ ಎಂಬ ತಲೆಬರಹ ಇವು ಬರಹಗಳು ಯಾವುದೇ ದೃಷ್ಟಿಕೋನದಿಂದ ವಿಶ್ಲೇಷಿಸಿದರೂ ಅದು ಸ್ವಂತ ಬರಹವೇನೋ ಎನ್ನುವಷ್ಟರ ಮಟ್ಟಿಗೆ ಅವು ತರ್ಜುಮೆಯಾಗಿದ್ದನ್ನು ಕಾಣಬಹುದು.

ಸದಾ ಅಸ್ತಮಾ ರೋಗದಿಂದ ಒದ್ದಾಡುತ್ತಿದ್ದ ಅಜ್ಜ, ರಾತ್ರಿಯೆಲ್ಲ ಲಕ್ಷ್ಮೀ, ಲಕ್ಷ್ಮೀ (ಪತ್ನಿಯ ಹೆಸರು) ಎಂದು ಕೀಚಲು ಧ್ವನಿಯಲ್ಲಿ ಕೂಗುತ್ತಿದ್ದರು. ಬೆಳಗಾಯಿತೆಂದರೆ ಏನೂ ಆಗೇ ಇಲ್ಲವೇನೋ ಅನ್ನುವಂತೆ ತನ್ನ ಬ್ಯಾಗ್ ಹಿಡಿದುಕೊಂಡು ಹುಬ್ಬಳ್ಳಿಯ ಕೊಪ್ಪೀಕರ್ ರಸ್ತೆಯ ತಮ್ಮ ಕಚೇರಿಗೆ ಹೋಗುತ್ತಿದ್ದ ಅಜ್ಜ, ದಾರಿಯಲ್ಲಿ ಹೋಗುವಾಗ ಬರುವಾಗ ಹುರಿದ ಕಡ್ಲೆಬೀಜವನ್ನು ಬಾಯಲ್ಲಿ ಹಾಕಿಕೊಳ್ಳುತ್ತಾ ಒಂದು ಮೂಲೆಯಲ್ಲಿ ಪುಸ್ತಕ ಓದುತ್ತಾ ಬರುತ್ತಿದ್ದವರು. ಅಜ್ಜಿ ಕರಿಬೇವಿನ ಸೊಪ್ಪನ್ನು ಒಗ್ಗರಣೆ ಹಾಕುವಾಗ ನೆನಪಾಗಿ ನಮಗೆ ತರಲು ಹೇಳಿದರೆ ತಾನೇ ಛಂಗನೆ ಹಾರಿ ಸೊಪ್ಪು ತರುತ್ತಿದ್ದ ಅಜ್ಜ, ಯಾವ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿ ಬೇಕೆಂದರೆ, ಪತ್ರಗಳನ್ನು ಸೂಕ್ತ ವ್ಯಕ್ತಿಗಳಿಗೆ ಬರೆದು ಸಂಗ್ರಹಿಸುತ್ತಿದ್ದರು. ಅವರು ಕಸ್ತೂರಿ ಪತ್ರಿಕೆಗೆ ಬರೆದ ಲೇಖನಗಳನ್ನು ತನ್ನ ಮಕ್ಕಳ ಹೆಸರಿನಲ್ಲೂ, ಹೆಸರೇ ಇಲ್ಲದೆಯೇ ಬರೆದು ಓದುಗರಿಗೆ ವಿಷಯ ತಲುಪುವುದಷ್ಟೇ ಮುಖ್ಯ ಎಂದು ಭಾವಿಸಿದವರು. ಯಾವ ಅಹಂ ಇಲ್ಲದೆ ಬದುಕಿದ ಅಜ್ಜ, ಯಾವ ಪ್ರಶಸ್ತಿಯನ್ನೂ ಬಯಸದೆ, ಸಿಕ್ಕಾಗ, ಮುಖತಃ ಹೋಗಿ ಪಡೆಯಲಾಗದೇ ಇದ್ದವರು.

ಪಾವೆಂ ಪುತ್ರಿ ಸುಕನ್ಯ ಮತ್ತು ಕೃಷ್ಣಮೂರ್ತಿ ಉಪಾಧ್ಯ (ಕೊಡುವೂರು) ದಂಪತಿಯ ಮೂರನೆಯ ಮಗಳು ಛಾಯಾ. ತಂದೆ ಬ್ಯಾಂಕ್ ಉದ್ಯೋಗಿಯಾಗಿದ್ದರಿಂದ ಮೂರು ವರ್ಷಕ್ಕೊಮ್ಮೆ ಕಡ್ಡಾಯ ವರ್ಗವಾಗುತ್ತಿತ್ತು. ಹೀಗಾಗಿ ದಾವಣಗೆರೆ, ಚಿತ್ರದುರ್ಗ, ಹುಬ್ಬಳ್ಳಿ, ಗಂಗಾವತಿ, ಕೊನೆಗೆ ಬೆಂಗಳೂರಿನಲ್ಲಿ ಪಿ.ಯು.ಸಿ., ಬಿ.ಎಸ್ಸಿ (ಕಂಪ್ಯೂಟರ್ ಸೈನ್ಸ್), ಎಂ.ಎಸ್ಸಿ (ಗಣಿತ) ವಿದ್ಯಾಭ್ಯಾಸವನ್ನು ಮುಗಿಸಿದರು. 1996ರಲ್ಲಿ ಕೆನರಾ ಬ್ಯಾಂಕಿನ ಕ್ಯಾನ್ ಫಿನ್ ಹೋಮ್ಸ್ ದಲ್ಲಿ ಆಫೀಸರ್ ಆಗಿ ಐಟಿ ಡಿಪಾರ್ಟ್‌ಮೆಂಟ್‌ನಲ್ಲಿ ಹತ್ತು ವರ್ಷ ಕೆಲಸ ಮಾಡಿದರು. ಮನಸ್ಸು ಮಗನ ಜೊತೆ ಇರಬೇಕೆಂದು ಹಂಬಲಿಸಿದಾಗ ರಾಜೀನಾಮೆ ಕೊಟ್ಟರು. ನಂತರ ಮಗ ಓದುತ್ತಿದ್ದ ಕೇಂದ್ರೀಯ ವಿದ್ಯಾಲಯದಲ್ಲಿ ಕಂಪ್ಯೂಟರ್ ಟೀಚರ್ ಆಗಿ ಕೆಲಸ ಮಾಡಲು ಪ್ರಾರಂಭಿಸಿದರು. 2008ರಲ್ಲಿ ಬಿ.ಎಡ್ ಮಾಡಿದರು. ಕಲಿಸುವುದರಲ್ಲಿ ಆಸಕ್ತಿ ಹೆಚ್ಚಾಗಿ ಕಲಿಕೆಯಲ್ಲಿ



ಹಿಂದುಳಿದ ಮಕ್ಕಳಿಗೆ ಉಚಿತವಾಗಿ ಪಾಠ ಮಾಡಲು ಪ್ರಾರಂಭಿಸಿದರು. ಈಗ ಅವರ ಪತಿಗೆ ನಿವೃತ್ತಿಯಾದುದರಿಂದ ನಗರ ಜೀವನ ಸಾಕಾಗಿ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಕಾಂತಾವರದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಅಲ್ಲಿಯ ಸರ್ಕಾರಿ ಶಾಲೆಯಲ್ಲಿ ಪಾಠ ಮಾಡಲು ಹೋಗುತ್ತಿದ್ದಾರೆ. ಆನ್‌ಲೈನ್‌ನಲ್ಲೂ ಪಾಠ ಮಾಡುತ್ತಿದ್ದಾರೆ.

ಶಾಲಾ ಶಿಕ್ಷಣದ ಜೊತೆಗೆ ಪಾ.ವೆಂ. ಅವರ ಬರಹಗಳ ಸಂಗ್ರಹ ಕಾರ್ಯದಲ್ಲೂ ತೊಡಗಿಸಿಕೊಂಡಿದ್ದಾರೆ. ಪಾ.ವೆಂ. ಅವರ ಕಾಲಾನಂತರ ಅವರ ಮೊದಲ ಮಗ ಮುರಳೀಧರ ಪಾಡಿಗಾರು ಅವರು ಶ್ರೀನಿವಾಸ ಹಾವನೂರ ಸಹಾಯದಿಂದ ಪಾ.ವೆಂ. ಹೆಸರಿನಲ್ಲಿ ವಿಶ್ವಸ್ಥ ಸಮಿತಿ ಟ್ರಸ್ಟ್ ಪ್ರಾರಂಭಿಸಿ ಹದಿನೈದು ಪುಸಕ್ತಗಳನ್ನು ಹೊರತಂದರು. ‘ಪದಾರ್ಥ ಚಿಂತಾಮಣಿ’, ‘ಹೊಸಗನ್ನಡದ ಹಿರಿಯರು’, ‘ವಿಜ್ಞಾನ ವಿಸ್ಮಯ’, ‘ಪಾವೆಂ ಆಯ್ದ ಹರಟೆಗಳು’, ‘ನಗೆ ಬರಹಗಳು’ ಹೀಗೆ ಹಲವು ಕೃತಿಗಳು ಹೊರಬಂದಿವೆ. ಇನ್ನೂ ಅಪ್ರಕಟಿತ ಲೇಖನಗಳು ಸಾಕಷ್ಟಿವೆ. ಶ್ರೀನಿವಾಸ ಹಾವನೂರರು ನಿಧನರಾದ ನಂತರ ಪಾವೆಂ ಟ್ರಸ್ಟ್ ಮತ್ತು ಪುಸ್ತಕ ಪ್ರಕಟನೆ ನಿಂತುಹೋಗಿದೆ.

ಛಾಯಾ ಅವರ ಪತಿ ಚಂದ್ರಕಾಂತ್ ಆಚಾರ್ಯ ಅವರೂ ಪಾ.ವೆಂ ಅವರ ಕಟ್ಟಾ ಅಭಿಮಾನಿ. ಅಜ್ಜನವರ ಕುರಿತು ಏನಾದರೂ ಮಾಡು ಎಂದು ತಲೆತಿನ್ನುತ್ತಿದ್ದರಿಂದ ಪಾ.ವೆಂ ಅವರ ಎರಡನೇ ಮಗ ರಾಧಾಕೃಷ್ಣ ಆಚಾರ್ಯರನ್ನು ಸಂಪರ್ಕಿಸಿದರು. ಉಡುಪಿಯ ನಿವಾಸಿಯಾದ ಅವರಿಗೆ ಸಾಕಷ್ಟು ಜನರು ಪಾ.ವೆಂ. ಲೇಖನಗಳನ್ನು ಸಂಗ್ರಹಿಸಿ ಕೊಟ್ಟಿದ್ದರು. ಪತ್ರಗಳು,

ಅಪ್ರಕಟಿತ ಲೇಖನಗಳ ಭಂಡಾರವೂ ಅವರಲ್ಲಿತ್ತು. ಕುತೂಹಲದಿಂದ ಅವುಗಳನ್ನು ಸಂಗ್ರಹಿಸಲು ಛಾಯಾ ಪ್ರಾರಂಭಿಸಿದರು. ಓದಲು ಪ್ರಾರಂಭಿಸಿದಾಗ ಎಷ್ಟೊಂದು ವಿಷಯಗಳಲ್ಲಿ ಲೇಖನಗಳನ್ನು ಬರೆದಿರುವುದು ನೋಡಿ ಆಶ್ಚರ್ಯಪಟ್ಟು ತಮಗೆ ತೋಚಿದ ರೀತಿಯಲ್ಲಿ ವಿಂಗಡಿಸಿ ಫೈಲ್‌ನಲ್ಲಿ ಹಾಕತೊಡಗಿ ನಂತರ ಕಂಪ್ಯೂಟರ್‌ನಲ್ಲಿ ಒಂದೊಂದನ್ನೇ ಅಳವಡಿಸತೊಡಗಿದರು.

ಪಾ.ವೆಂ ಅವರ ಲೇಖನ, ಫೋಟೋ, ಪತ್ರ, ಪತ್ರಿಕೆ ಎಲ್ಲವೂ ಒಂದು ಕಡೆ ಇದ್ದರೆ, ಓದುಗರಿಗೆ ಸುಲಭವಾಗುತ್ತದೆ ಎಂದು ಪ್ರತ್ಯೇಕವಾದ 'ಪಾವೆಂಸಿರಿನುಡಿ.ಆರ್ಗ್' ಎನ್ನುವ ವೆಬ್‌ಸೈಟ್ ಮಾಡಿ, ಅದರಲ್ಲಿ ಪಿಡಿಎಫ್ ರೂಪದಲ್ಲಿ ಹಾಕಿದ್ದಾರೆ. ಮುರಳೀಧರ ಉಪಾಧ್ಯಾಯ ಅವರ ಸೂಚನೆಯಂತೆ ಮೈಸೂರಿಗೆ ಹೋಗಿ ಪಾವೆಂ ಗೆ ಸಂಬಂಧಿಸಿದ ಕೃತಿಗಳನ್ನು ಸಂಗ್ರಹಿಸಿ ಸ್ಕ್ಯಾನ್ ಮಾಡಿಕೊಂಡು ವೆಬ್ ಸೈಟಿನಲ್ಲಿ ಅಪ್‌ಲೋಡ್ ಮಾಡಿದ್ದಾರೆ.

ಮಣಿಪಾಲಕ್ಕೆ ಹೋಗಿ ತುಷಾರ, ತರಂಗದಲ್ಲಿ ಪಾ.ವೆಂ. ಬರೆದ ಲೇಖನಗಳು, ಕಸ್ತೂರಿ ಪತ್ರಿಕೆಯಲ್ಲಿ ಪಾ.ವೆಂ. ಬರೆದ ಇನ್ನೂ ಸಾಕಷ್ಟು ಲೇಖನಗಳಿರುವುದರಿಂದ, ಹುಬ್ಬಳ್ಳಿಯ ಕಸ್ತೂರಿ ಪತ್ರಿಕಾಲಯಕ್ಕೆ ಹೋಗಿ ಕಸ್ತೂರಿ ಸಂಚಿಕೆಗಳನ್ನು ತಂದು ಸ್ಕ್ಯಾನ್ ಮಾಡಿ ಸಂಗ್ರಹಿಸಿದ್ದಾರೆ. 'ಪಾ.ವೆಂ. ಅವರು 1992 ದೈವಾಧೀನರಾದರೂ, ಅವರ ಅಭಿಮಾನಿಗಳು ಇನ್ನೂ ಅವರನ್ನು ಮರೆತಿಲ್ಲ. ನನಗೆ ಸಹಾಯ ಮಾಡುವುದಕ್ಕೆ ಹಿಂಜರಿಯಲಿಲ್ಲ. ಹಾಗಾಗಿ ನಾನು ಸರಾಗವಾಗಿ ಸಂಗ್ರಹ ಕಾರ್ಯ ಮಾಡುತ್ತಿರುವುದಾಗಿ ಛಾಯಾ ಹೇಳುತ್ತಾರೆ.

ಈಗಾಗಲೇ ಸುಮಾರು 10,000 ಪುಟಗಳಷ್ಟು ಲೇಖನಗಳನ್ನು ಛಾಯಾ ಸಂಗ್ರಹಿಸಿದ್ದಾರೆ. ಈಗ ಪ್ರಕಟಿಸುವ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಬೆಂಗಳೂರಿನ ಅಭಿನವ ಪ್ರಕಾಶನದ ನ. ರವಿಕುಮಾರ್ ಅವರ ಸಹಾಯದಿಂದ ಲಕ್ಷ್ಮೀಶ ತೊಳ್ಪಾಡಿಯವರ ಅಧ್ಯಕ್ಷತೆಯಲ್ಲಿ ಪಾ.ವೆಂ. ಆಚಾರ್ಯ ಟ್ರಸ್ಟನ್ನು ರಿಜಿಸ್ಟರ್ ಮಾಡಿಸಿದ್ದಾರೆ.

ಉಡುಪಿಯ ರಥಬೀದಿ ಗೆಳೆಯರು ವರ್ಷಕ್ಕೊಂದು ಪಾ.ವೆಂ ರವರ ಹೆಸರಿನಲ್ಲಿ ಕಾರ್ಯಕ್ರಮ ಮಾಡುತ್ತಾ ಬಂದಿದ್ದಾರೆ. ಪಾ.ವೆಂ. ಅವರ ಜನ್ಮಶತಮಾನೋತ್ಸವ ಸಂಭ್ರಮವನ್ನು ಆಚರಿಸಿದ್ದಾರೆ. ಬೆಂಗಳೂರಿನಲ್ಲಿ ಶಿವರಾಮ ಕಾರಂತ ವೇದಿಕೆ ಸಹಯೋಗದಲ್ಲಿ ಹಲವು ಕಾರ್ಯಕ್ರಮಗಳನ್ನು ಮಾಡಲಾಗಿದೆ. ಇನ್ನೂ ಸಾಕಷ್ಟು ಕೆಲಸ ಬಾಕಿ ಇದೆ ಎನ್ನುವ ಛಾಯಾ ಅವರು ಪಾವೆಂ ಅವರ ಸಾಹಿತ್ಯ ಕೃತಿಗಳ ಪ್ರಕಟಣೆಗೆ ಕೈಲಾದಷ್ಟು ಕೆಲಸವನ್ನು ಮಾಡುವ ಭರವಸೆ ಹೊಂದಿದ್ದಾರೆ.

# ಬೆಂಗಳೂರು ಸ್ಥಳಗಳ ಜನ್ಮ ರಹಸ್ಯಗಳು!



ಊರಲ್ಲಿರೋ ಕತ್ತರಿಗಳನ್ನೆಲ್ಲಾ ಒಂದೆಡೆ ಕಲೆ ಹಾಕಿದಾಗ ಸಿಕ್ಕ ಜಾಗವೇ ಕತ್ರಿಗುಪ್ಪೆ

ಊರಲ್ಲಿದ್ದ ಜಾಣರೆಲ್ಲಾ ಓದಿ ಅಮೆರಿಕ ಸೇರ್ಕೊಂಡ ಮೇಲೆ ಕೋಣರು ಉಳಿದ ಜಾಗವೇ, ಕೋಣನ ಕುಂಟೆ

ತಲೆ ಕೆಟ್ಟವರೆಲ್ಲಾ ಚೆಲ್ಲಾಪಿಲ್ಲಿಯಾಗಿ ಅಡ್ಡಾಡಿಕೊಂಡವರನ್ನು ಒಟ್ಟಿಗೆ ಕಲೆ ಹಾಕಿದ ಜಾಗವೇ, ತಲಘಟ್ಟಪುರ

ಈ ರಸ್ತೆ ಎಲ್ಲಿಗೆ ಹೋಗುತ್ತೆ ಅಂತಾ ಊರಿನವರಿಗೆಲ್ಲಾ ಉತ್ತರ ಹೇಳಿ ಹೇಳಿ ಸುಸ್ತಾದ ಜನರೆಲ್ಲಾ ಒಂದೆಡೆ ಸೇರಿದ ಜಾಗವೇ, ಉತ್ತರ ಹಳ್ಳಿ



**ಅಕ್ರಮ ವಲಸಿಗರಿಗೆ ಅನುಕಂಪ ಬೇಡ**

ಇದ್ದದ್ದು ಇದ್ದಂಗೆ | ಎಚ್.ಶಿವರಾಮೇಗೌಡ

ಕರವೇ ವಾಹಿನಿ

ಕರ್ನಾಟಕ ರಕ್ಷಣಾ ವೇದಿಕೆ

**ಲೋಕಾಯುಕ್ತ ಮಾದರಿಯ ನೈತಿಕಾಯುಕ್ತರು ಬೇಕು**

ಕನ್ನಡ ಕಹಳೆ | ಕ.ನ. ಚಂದ್ರಶೇಖರ






KARNATAKA RAKSHANAA VEDIKE DATE OF PUBLICATION: 1ST OF EVERY MONTH KANNADA MONTHLY RS.15/- RNI: KARKAN/2008/26245 REGISTERED NO.KA/BGW-1614/2017-19
FEBRUARY 2026 LICENSED TO POST WITHOUT PRE-PAYMENT WPP-220. POSTED AT MYSORE ROAD, BG PSO BENGALURU-26 ON 06TH OR 9TH OF EVERY MONTH

EDITED, PRINTED, PUBLISHED BY KA. N A. CHANDRASHEKAR. # 1673/A, 2ND CROSS, PRAKASHNAGAR, BANGALORE-560021,
PRINTED AT: PATEL PRINTERS & PUBLISHERS, NO.1673/A, 2ND CROSS, PRAKASHNAGAR, BANGALORE-560021.